ಏಕಕಾಲಕ್ಕೆ ವಿಭಿನ್ನ ಜನರಿಗೆ ತಲುಪಲು ಔಪಚಾರಿಕ ಸಂಘಟನೆ, ಬಂಡವಾಳ, ಉತ್ಪಾದಕತೆ ಮತ್ತು ವ್ಯವಸ್ಥಾಪಕ ಮಂಡಲಿಯ ಅವಶ್ಯಕತೆ ಇದೆ. ಸಮೂಹ ಮಾಧ್ಯಮದಲ್ಲಿ ರಾಜ್ಯ ಅಥವಾ ಮಾರುಕಟ್ಟೆಯೊಂದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕೂಡ ಅಧ್ಯಯನ ಮಾಡಲಿದ್ದೀರಿ.

### ಸಮೂಹ ಮಾಧ್ಯಮಗಳ ಕಾರ್ಯಗಳು (Functions of Mass Media)

1. **ಮಾಹಿತಿ (Information):** ಸಮೂಹ ಮಾಧ್ಯಮಗಳು ರಾಜಕೀಯ, ಕ್ರೀಡೆ, ಮನರಂಜನೆ, ಹವಮಾನ ವರದಿ, ಶೇರು ಮಾರುಕಟ್ಟೆ ಮತ್ತು ವ್ಯಕ್ತಿಗತ ಸುದ್ದಿಗಳು ಪ್ರಚಲಿತ ಮಾಹಿತಿಯನ್ನು ನಿರಂತರವಾಗಿ ನೀಡುತ್ತವೆ.

2. **ಸಮನ್ವಯತೆ (Correlation) :** ಮಾಧ್ಯಮಗಳು ಮಾಹಿತಿಯ ಅರ್ಥವನ್ನು ಗ್ರಹಿಸಿ, ಸಾಮಾಜಿಕ ನಿಯಮಗಳನ್ನು ರೂಪಿಸಲು ಮತ್ತು ಮಕ್ಕಳ ಸಾಮಾಜೀಕರಣದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

3. **ನಿರಂತರತೆ (Continuity):** ಮಾಧ್ಯಮಗಳು ಸಂಸ್ಕೃತಿಯ ನಿರಂತರತೆಯನ್ನು ಒಳಗೊಂಡು ಸಾಮಾನ್ಯ ಮೌಲ್ಯಗಳು ಮತ್ತು ಪ್ರಗತಿಗೆ ಸಹಾಯಕವಾಗಿವೆ.

4. **ಮನರಂಜನೆ (Entertainment):** ಸಾಮಾಜಿಕ ಒತ್ತಡವನ್ನು ಕಡಿಮೆಗೊಳಿಸಿ ಮನರಂಜನೆಯನ್ನು ನೀಡುತ್ತವೆ.

5. **ಕ್ರೋಢೀಕರಣ (Mobilization):** ಮಾಧ್ಯಮಗಳು ಸಮಾಜದ ಉದ್ದೇಶಗಳ ಕ್ರೋಢೀಕರಣ, ಆರ್ಥಿಕ ಪ್ರಗತಿ, ದುಡಿಮೆ ಅಥವ ಧಾರ್ಮಿಕ ವಿಚಾರ ವಿನಿಮಯ ಯುದ್ಧ ಕಾಲದ ಸಹಕಾರಕ್ಕೆ ಮಾಧ್ಯಮಗಳು ಸಹಾಯಕವಾಗಿವೆ.

6. **ಸಮಾಜ ಸುಧಾರಣೆ (Social Reformation):** ಮುದ್ರಣ ಮಾಧ್ಯಮದ ಆರಂಭ ಮತ್ತು ಇದರ ಪಾತ್ರವು ಸಮಾಜ ಸುಧಾರಣೆ ಮತ್ತು ರಾಷ್ಟ್ರೀಯ ಹೋರಾಟದಲ್ಲಿ ಗಣನೀಯ ಪಾತ್ರ ವಹಿಸಿದೆ. ಸ್ವಾತಂತ್ರ್ಯಾನಂತರ ಮುದ್ರಣ ಮಾಧ್ಯಮವು ರಾಷ್ಟ್ರ ನಿರ್ಮಾಣದಲ್ಲಿ ತನ್ನನ್ನು ತೊಡಗಿಸಿಕೊಂಡು ಬಹುಪಾಲು ಜನರ ಧ್ವನಿಯಾಗಿ ಅಭಿವೃದ್ಧಿ ವಿಚಾರಗಳನ್ನು ಮುಖ್ಯ ವಿಷಯವನ್ನಾಗಿಸಿಕೊಂಡಿವೆ.

   1975ರಲ್ಲಿ ಜಾರಿಗೊಳಿಸಿದ ತುರ್ತುಪರಿಸ್ಥಿತಿಯು ಮುದ್ರಣ ಮಾಧ್ಯಮಗಳ ಮೇಲೆ ನಿರ್ಬಂಧಗಳನ್ನು ಜಾರಿಗೊಳಿಸಿದ್ದು ಅತ್ಯಂತ ಗಂಭೀರವಾದ ಸವಾಲಾಗಿತ್ತು. ಆದರೆ 1977ರ ನಂತರ ಪ್ರಜಾಪ್ರಭುತ್ವ ಮರುಸ್ಥಾಪನೆಗೊಂಡು ಭಾರತವು ಮಾಧ್ಯಮಗಳ ಮಟ್ಟಿಗೆ ಮುಕ್ತ ದೇಶವೆಂಬ ಹೆಮ್ಮೆ ಗಳಿಸಿದೆ.

7. **ರಾಷ್ಟೀಯ ಪ್ರಜ್ಞೆ: (National consciousness)** 19ನೇ ಶತಮಾನದಲ್ಲಿ ಸಾರಿಗೆ ಸಂಪರ್ಕ ಮತ್ತು ಶಿಕ್ಷಣ ಹೆಚ್ಚಾದಂತೆ ವಾರ್ತಾಪತ್ರಿಕೆಗಳು ಜನಸಾಮಾನ್ಯರಿಗೆ ತಲುಪಲು ಆರಂಭವಾಯಿತು. ದೇಶದ ಬೇರೆ ಬೇರೆ ಭಾಗದ ಜನ ವಾರ್ತಾ ಪತ್ರಿಕೆಗಳನ್ನು ಓದುವುದು ಅಥವಾ ಮತ್ತೊಬ್ಬರಿಂದ ಕೇಳಿ ತಿಳಿಯುವುದರಿಂದ ದೇಶಾದ್ಯಂತ ಜನರಲ್ಲಿ ರಾಷ್ಟ್ರ ಪ್ರೇಮ ಬೆಳೆಯಲು ಸಹಾಯಕವಾಯಿತು.

### 6.5.2 ಸಮೂಹ ಮಾಧ್ಯಮಗಳ ಪ್ರಕಾರಗಳು (Types of Mass Media):

ಸಮೂಹ ಮಾಧ್ಯಮಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

1. ಮುದ್ರಣ ಮಾಧ್ಯಮ: ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು.

2. ವಿದ್ಯುನ್ಮಾನ ಮಾಧ್ಯಮ: ರೇಡಿಯೋ, ದೂರದರ್ಶನ, ಅಂತರ್ಜಾಲ ಮತ್ತು ಸಮಾಜ ಸಂಪರ್ಕ ಜಾಲಗಳು.

## 1. ಮುದ್ರಣ ಮಾಧ್ಯಮ (Print Media)

### 1. ವಾರ್ತಾ ಪತ್ರಿಕೆಗಳು (Newspapers)

**ಮುದ್ರಣ ಮಾಧ್ಯಮದ ಆರಂಭ (The Beginning of Print Media) :** ಪ್ರಿಂಟಿಂಗ್ ಪ್ರೆಸ್‌ನ ಬೆಳವಣಿಗೆಯು ಆಧುನಿಕ ಮುದ್ರಣ ಮಾಧ್ಯಮದ ಆರಂಭ ಎನ್ನಬಹುದು. ಆಧುನಿಕ ಮುದ್ರಣ ಯಂತ್ರಗಳ ಇತಿಹಾಸವು ಕೆಲವು ಶತಮಾನಗಳಷ್ಟು ಹಳೆಯದು. ಯುರೋಪ್ ಖಂಡದಲ್ಲಿ ಇಂತಹ ಮುದ್ರಣ ಯಂತ್ರಗಳನ್ನು ಬಳಸಿ ಪುಸ್ತಕಗಳನ್ನು ಮುದ್ರಿಸುವ ತಂತ್ರಜ್ಞಾನ ಬೆಳವಣಿಗೆಗೊಂಡಿತು. ಜರ್ಮನಿಯ **ಜಾನ್‌ಗುಟೀನ್ ಬರ್ಗ್** 1440ರಲ್ಲಿ ಮುದ್ರಣಯಂತ್ರವನ್ನು ಮೊದಲ ಬಾರಿಗೆ ಕಂಡುಹಿಡಿದರು. ಆರಂಭದಲ್ಲಿ ಕೇವಲ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಲು ಮುದ್ರಣಯಂತ್ರವನ್ನು ಬಳಸಲಾಗುತ್ತಿತ್ತು. ಕೈಗಾರಿಕಾ ಕ್ರಾಂತಿಯೊಂದಿಗೆ ಮುದ್ರಣಯಂತ್ರವು ಸಹ ಹೊಸ ಆಯಾಮಾವನ್ನು ಪಡೆಯಿತು. **ಪಾಲ್ ಜೂಲಿಯಸ್ ರಿಯುಟರ್** 1849 ರಲ್ಲಿ ಪ್ಯಾರೀಸ್‌ನಲ್ಲಿ ಮೊದಲ ಬಾರಿಗೆ ಪಾರಿವಾಳಗಳ ಬಳಕೆ ಮತ್ತು ಟೆಲಿಗ್ರಾಫ್ ಮೂಲಕ ಪ್ಯಾರಿಸ್‌ನಲ್ಲಿ ವಾರ್ತಾ ಸೇವೆ ಪ್ರಾರಂಭಿಸಿದರು. 1924ರ ಹೊತ್ತಿಗೆ ಈ ಕಂಪನಿ ರೇಡಿಯೋ ಮೂಲಕ ವಾರ್ತೆಯನ್ನು ಪ್ರಸಾರ ಮಾಡುತ್ತಿತ್ತು.

### ಭಾರತದ ಆರಂಭಿಕ ವಾರ್ತಾಪತ್ರಿಕೆಗಳು (Early Newspapers in India)

1821ರಲ್ಲಿ ರಾಜರಾಮ ಮೋಹನರಾಯರ **ಸಂವದ್ ಕೌಮುದಿ** ಎಂಬ ಬೆಂಗಾಲಿ ಪತ್ರಿಕೆ, 1822ರಲ್ಲಿ ಮಿರತ್ ಉಲ್ ಅಕಬರ್ ಎಂಬ ಪರ್ಶಿಯನ್ ಭಾಷೆಯಲ್ಲಿ ಪ್ರಕಟಿಸಿದ ಪತ್ರಿಕೆಗಳು ಭಾರತದ ಪ್ರಪ್ರಥಮ ಪತ್ರಕೆಗಳಾಗಿವೆ. ಆನಂತರ 1822ರ ಹೊತ್ತಿಗೆ ಪರೆದೋನಿಜಿ ಮುರಜ್‌ಭಾನ್ ಬಾಂಬೆಯಲ್ಲಿ ಗುಜರಾತಿ ಪ್ರೆಸ್ ಆರಂಭಿಸಿ "**ಬಾಂಬೆ ಸಮಾಚಾರ್**" ಎಂಬ ದೈನಿಕವನ್ನು ಆರಂಭಿಸಿದರು. 1858ರಲ್ಲಿ ಈಶ್ವರಚಂದ್ರ ವಿದ್ಯಾಸಾಗರರು **ಸೋಮೇಪ್ರಕಾಶ್** ಎಂಬ ಬೆಂಗಾಲಿ ಪತ್ರಿಕೆಯನ್ನು ಆರಂಭಿಸಿದರು. 1861ರಲ್ಲಿ ಟೈಮ್ಸ್ ಆಫ್ ಇಂಡಿಯಾ, ಅಲಹಬಾದ್‌ನಲ್ಲಿ ಪಯೋನಿರ್, ದಿ ಮದ್ರಾಸ್ ಮೆಲ್ (1868) 1875ರಲ್ಲಿ ಕಲ್ಕತ್ತದಿಂದ ಸ್ಟೇಟ್ಸ್‌ಮನ್, 1875ರಲ್ಲಿ ಲಹೋರ್‌ನಿಂದ ದಿ ಸಿವಿಲ್ ಮತ್ತು ಮಿಲಿಟರಿ ಗೆಜೆಟ್, 1878ರಲ್ಲಿ 'ದಿ ಹಿಂದೂ' ಆನಂತರ 'ದಿ ಇಂಡಿಯನ್ ಎಕ್ಸ್‌ಪ್ರೆಸ್', 'ದಿ ಹಿಂದೂಸ್ಥಾನ್ ಟೈಮ್ಸ್', 'ಡೆಕನ್ ಹೆರಾಲ್ಡ್' ಮುಂತಾದ ಪತ್ರಿಕೆಗಳು ದೇಶದ ವಿವಿಧ ಭಾಗಗಳಿಂದ ಮುದ್ರಣಗೊಳ್ಳುತ್ತಿವೆ.

### ಕನ್ನಡ ವಾರ್ತಾಪತ್ರಿಕೆಗಳು (Kannada Newspapers)

ಭಾಷಲ್ ಕ್ರೈಸ್ತ ಧರ್ಮ ಪ್ರಚಾರಕ 1843ರಲ್ಲಿ ಹರ್‌ಮನ್ ಮೋಗ್ಲಿಂಗ್‌ರವರಿಂದ ಆರಂಭಗೊಂಡ "**ಮಂಗಳೂರು ಸಮಾಚಾರ**" ಕನ್ನಡದ ಪ್ರಪ್ರಥಮ ಪತ್ರಿಕೆ. ನಂತರ ಈ ಪತ್ರಿಕೆಯನ್ನು **ಕನ್ನಡ ಸಮಾಚಾರ** ಎಂದು ಮರು ನಾಮಕರಣ ಮಾಡಲಾಯಿತು. ಎಂ. ವೆಂಕಟಕೃಷ್ಣಯ್ಯ (1844–1933) ಇವರನ್ನು ಕನ್ನಡ ಪತ್ರಿಕೋದ್ಯಮದ ಪಿತಾಮಹ ಎಂದು ಕರೆಯುತ್ತಾರೆ. 1885ರಲ್ಲಿ ಮೈಸೂರಿನಲ್ಲಿ **"ವೃತ್ತಾಂತ ಚಿಂತಾಮಣಿ"** ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ದಿನಪತ್ರಿಕೆ ಮತ್ತು ಪಾಕ್ಷಿಕಗಳು ವಿವಿಧ ಭಾಗದಿಂದ ಪ್ರಕಟಣೆಗೊಳ್ಳಲು ಆರಂಭಿಸಿದವು. ಉದಾ. ಸಮೃದ್ಧ ಪ್ರಕಾಶನ ಪತ್ರಿಕೆ (1849) ಅರುಣೋದಯ (1862), ಮೈಸೂರು ಹೆರಾಲ್ಡ್ (1886) ವೆಲ್ತ್‌ಆಫ್ ಮೈಸೂರು (1912) ಭಾರತಿ (1907–ಡಿ.ವಿ. ಗುಂಡಪ್ಪ) ಚಿತ್ರಗುಪ್ತ (1928.ಕೆ.ಎನ್.ವೀರಣ್ಣಗೌಡ, ಮಂಡ್ಯ) ಪ್ರಜಾಮತ (1931–ಬಿ.ಎನ್.ಗುಪ್ತ)

ಪ್ರಸ್ತುತ ಹಲವಾರು ಕನ್ನಡ ವಾರ್ತಾಪತ್ರಿಕೆಗಳು ಪತ್ರಿಕಾ ಮಾಧ್ಯಮದಲ್ಲಿ ಗಣನೀಯ ಕೊಡುಗೆ ನೀಡುತ್ತಿವೆ. ಉದಾಹರಣೆಗೆ: ಪ್ರಜಾವಾಣಿ,ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಹೊಸ ದಿಗಂತ, ಸಂಜೆವಾಣಿ, ಉದಯವಾಣಿ, ಆಂದೋಲನ, ಈ ಸಂಜೆ ಮುಂತಾದ ಪತ್ರಿಕೆಗಳು ಸಾಕಷ್ಟು ಜನಪ್ರಿಯತೆಗಳಿಸಿವೆ. ಈ ರೀತಿಯ ಪತ್ರಿಕೆಗಳು ಜಗತ್ತಿನ ವಿದ್ಯಮಾನಗಳನ್ನು ಜನತೆಗೆ ತಲುಪಿಸುವ ಉಪಯುಕ್ತ ಕಾರ್ಯ ಮಾಡುತ್ತಿವೆ.

**ಪ್ರಮುಖ ದಿನಪತ್ರಿಕೆಗಳು**




ಬ್ರಿಟಿಷರ ಆಳ್ವಿಕೆಯಲ್ಲಿ ವೃತ್ತಪತ್ರಿಕೆಗಳು, ಪಾಕ್ಷಿಕಗಳು, ಸಿನಿಮಾ ಮತ್ತು ರೇಡಿಯೋ ಮುಂತಾದ ಸಮೂಹ ಮಾಧ್ಯಮಗಳ ಮೇಲೆ ನಿರ್ಬಂಧಗಳಿದ್ದವು. ರೇಡಿಯೋ ಸಕಾರದ ಅಧೀನ ಸಂಸ್ಥೆಯಾಗಿದ್ದು ಸರ್ಕಾರದ ಅಭಿಪ್ರಾಯಗಳನ್ನು ಮಾತ್ರ ಪ್ರಚುರಪಡಿಸುತ್ತಿತ್ತು. ವಾರ್ತಾಪತ್ರಿಕೆಗಳು ಮತ್ತು ಸಿನಿಮಾಗಳು ಸ್ವತಂತ್ರವಾಗಿದ್ದರೂ ನಿರ್ಬಂಧಕ್ಕೆ ಒಳಪಟ್ಟಿದರಿಂದ ಬ್ರಿಟಿಷ್ ಸರ್ಕಾರ ಇವುಗಳ ಕಾರ್ಯಾಚರಣೆಯನ್ನು ನಿಯಂತ್ರಿಸುತ್ತಿತ್ತು. ಅಕ್ಷರಸ್ಥರ ಸಂಖ್ಯೆ ಸೀಮಿತವಾಗಿದ್ದರಿಂದ ಪತ್ರಿಕೆಗಳ ಪ್ರಸರಣ ಕೂಡ ಸೀಮಿತವಾಗಿತ್ತು. ಆದರೆ, ಪತ್ರಿಕೆಗಳ ಸುದ್ದಿಗಳನ್ನು ಮಾರುಕಟ್ಟೆ, ಪಟ್ಟಣ, ಕೋರ್ಟು–ಕಚೇರಿ ಮುಂತಾದ ಕಡೆಗಳಲ್ಲಿ ಜನರ ಮೌಕಿಕವಾಗಿ ಪರಸ್ಪರ ಪತ್ರಿಕೆ ಸುದ್ದಿಗಳನ್ನು ಹಂಚಿಕೊಳ್ಳುತ್ತಿದ್ದರು. ಸ್ವತಂತ್ರ ಹೋರಾಟದಲ್ಲಿ ಪತ್ರಿಕೆಗಳು ಜನಾಭಿಪ್ರಾಯ ರೂಪಿಸಲು ಸಹಕಾರಿಯಾದವು.

**ಆಂಗ್ಲ ಭಾಷೆಯ ಪ್ರಮುಖ ದಿನಪತ್ರಿಕೆಗಳು**




ಪಾಪ್ ನೃತ್ಯಪಟು ಮೈಕೆಲ್ ಜಾಕ್ಸನ್‌ರ ಸಾವಿನ ಸುದ್ದಿಯನ್ನು ವಿವಿಧ ಆಂಗ್ಲ ಪತ್ರಿಕೆಗಳು ವಿವಿಧ ದೃಷ್ಟಿಕೋನದಲ್ಲಿ ಪ್ರಕಟಿಸಿದ ರೀತಿ

### ವಾರ್ತಾಪತ್ರಿಕೆಗಳ ತಯಾರಿಕೆಯ ತಂತ್ರಜ್ಞಾನದ ಪ್ರಭಾವ (In : The Role of Technology in Newspaper Production)

1980–90ರ ನಂತರ ವಾರ್ತಾ ಪತ್ರಿಕೆಗಳ ತಯಾರಿಕೆ ಸಂಪೂರ್ಣ ಯಾಂತ್ರಿಕವಾಗಿದೆ.

ಇದರಿಂದ ಕಾಗದ ಬಳಕೆ ಬಹಳಷ್ಟು ಕಡಿಮೆಯಾಗಿದೆ. ನ್ಯೂಸ್ ಮೇಕರ್ ತಂತ್ರಾಂಶ ಮತ್ತು ಇತರ ಎರಡು ತಂತ್ರಾಂಶಗಳಾದ ಅಂತರ್ಜಾಲದ ವೈಯಕ್ತಿಕ ಕಂಪ್ಯೂಟ್‌ರ್‌ಗಳು (Personal Computer) ಮತ್ತು ಲಾನ್ (LAN) Local Area Network ನಿಂದಾಗಿ ಪತ್ರಿಕಾ ಪ್ರಕಟಣೆ ಸಂಪೂರ್ಣ ಯಾಂತ್ರೀಕರಣವಾಗಿದೆ. ತಂತ್ರಜ್ಞಾನದ ಪವರ್ತನೆಯು ವರದಿಗಾರನ ಪಾತ್ರದಲ್ಲೂ ಪರಿವರ್ತನೆಗೆ ಕಾರಣವಾಗಿದೆ. ವರದಿಗಾರನು ಬಳಸುತ್ತಿದ್ದ ಶೀಘ್ರಲಿಪಿ, ಹಾಳೆ, ಪೆನ್ನು, ಟೈಪ್‌ರೈಟರ್, ಟೆಲಿಫೋನ್‌ಗಳ ಬಳಕೆ ಕಡಿಮೆಯಾಗಿ ಹೊಸ ಸಾಧನಗಳಾದ ಸೂಕ್ಷ್ಮ ಟೇಪ್‌ರೆಕಾರ್ಡರ್, ಲ್ಯಾಪ್‌ಟಾಪ್ ಅಥವಾ ವೈಯಕ್ತಿಕ ಕಂಪ್ಯೂಟರ್, ಮೊಬೈಲ್ ಸಾಟ್‌ಲೈಟ್ ಫೋನ್ ಅಥವಾ ಇತರೆ ಸಾಧನಗಳಾದ ಮೋಡೆಮ್‌ಗಳು ಹೆಚ್ಚು ಬಳಕೆಯಾಗುತಿವೆ.

ಹೀಗೆ ಪತ್ರಿಕೆಯನ್ನು ಸಿದ್ಧಪಡಿಸುವ ಸಮಯವು ತಾಂತ್ರಿಕ ಪ್ರಗತಿಯಿಂದ ಪತ್ರಿಕಾ ಆಡಳಿತ ಮಂಡಲಿಗೆ ತಮ್ಮ ದೈನಂದಿನ ಕಾರ್ಯದಲ್ಲಿ ಶೀಘ್ರ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಿದೆ. ಓದುಗರಿಗೆ ಹೊಸ ಆವೃತ್ತಿ ಮತ್ತು ಹೊಸ ವಾರ್ತೆಗಳನ್ನು ನೀಡುವುದು ಮತ್ತು ಕೆಲವು ಪತ್ರಿಕೆಗಳು ಈ ರೀತಿಯ ತಾಂತ್ರಿಕ ಪ್ರಗತಿಯಿಂದ ಜಿಲ್ಲಾಮಟ್ಟದಲ್ಲಿ ಪ್ರತ್ಯೇಕ ಸುದ್ದಿಯನ್ನು ಪ್ರಕಟಿಸುವುದು ಸಾಧ್ಯವಾಗಿದೆ. ಮುದ್ರಣ ಕೇಂದ್ರಗಳು ಕೆಲವೇ ಸ್ಥಳಗಳಿಗೆ ಸೀಮಿತವಾಗಿದ್ದರೂ ಅನೇಕ ಆವೃತ್ತಿಗಳು ದ್ವಿಗುಣಗೊಂಡಿವೆ. ಉದಾಹರಣೆಗೆ ವಿಜಯ ಕರ್ನಾಟಕ ಪತ್ರಿಕೆಯು ಈ ರೀತಿಯ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಸುದ್ದಿ ಸಂಗ್ರಹ ಚಿತ್ರಗಳ ನೀಡಿಕೆಯಲ್ಲಿ ಪ್ರಗತಿಕಂಡಿದೆ. ಈ ಪತ್ರಿಕೆಯು ನೂರಾರು ವರದಿಗಾರರ ಜಾಲವನ್ನು ಒಳಗೊಂಡಿದ್ದು ಅಷ್ಟೇ ಪ್ರಮಾಣದ ಛಾಯಾಚಿತ್ರಗಾರರು ಸುದ್ದಿಯನ್ನು ಸಂಗ್ರಹಿಸುತ್ತಾರೆ. ಇವರೆಲ್ಲರೂ ತಮ್ಮ ವೈಯಕ್ತಿಕ ಕಂಪ್ಯೂಟರ್ ಮತ್ತು ಮೋಡೆಮ್ ಮೂಲಕ ಸುದ್ದಿಯನ್ನು ತಕ್ಷಣ ರವಾನೆ ಮಾಡುತ್ತಾರೆ. ಛಾಯಚಿತ್ರಗಾರರು ಡಿಜಿಟಲ್ ಕ್ಯಾಮರಾ ಮೂಲಕ ಚಿತ್ರಗಳನ್ನು ಮೋಡೆಮ್ ಮೂಲಕ ಸುದ್ದಿ ಕೇಂದ್ರಕ್ಕೆ ಕಳುಹಿಸುತ್ತಾರೆ. ಹೀಗೆ ತಂತ್ರಜ್ಞಾನವು ವಾರ್ತಾಪತ್ರಿಕೆಗಳಲ್ಲಿ ಮಹತ್ವ ಗಳಿಸಿದೆ.

## 2. ವಿದ್ಯುನ್ಮಾನ ಮಾಧ್ಯಮ (Electronic Media)

### 1) ಆಕಾಶವಾಣಿ (All India Radio)

ಹ್ಯಾಂ ಬ್ರಾಡ್‌ಕಾಸ್ಟಿಂಗ್ ಕ್ಲಬ್ ಮೂಲಕ 1920ರಲ್ಲಿ ಚೆನ್ನೈ ಮತ್ತು ಕಲ್ಕತ್ತದಿಂದ ರೇಡಿಯೋ ಹವ್ಯಾಸಿ ಪ್ರಸಾರ ಕೇಂದ್ರಗಳಾಗಿ ಕಾರ್ಯಾರಂಭ ಮಾಡಿದವು. 1940ರ ಹೊತ್ತಿಗೆ ಸರ್ಕಾರದ ಪ್ರಸಾರ ಕೇಂದ್ರಗಳಾಗಿ ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಮಿತ್ರಪಡೆಗಳ ಪರವಾಗಿ ವರದಿ ಪ್ರಸಾರ ಮಾಡುವಲ್ಲಿ ನಿರತವಾಗಿತ್ತು. ಸ್ವಾತಂತ್ರ್ಯದ ಆರಂಭ ಕಾಲದಲ್ಲಿ ಆರು ಪ್ರಸಾರ ಕೇಂದ್ರಗಳು ಚರ್ಚೆ, ವಾರ್ತೆಗಳು, ಪ್ರಚಲಿತ ಘಟನೆಗಳೂ ಮುಂತಾದ ವಿಚಾರಗಳನ್ನು ನಗರದ ಶ್ರೋತೃಗಳಿಗೆ ಕಾರ್ಯಕ್ರಮವನ್ನು ಬಿತ್ತರಿಸುತ್ತಿದ್ದವು.

ಖಾಸಗೀ ಪ್ರಯತ್ನದಿಂದ 1935 ರಲ್ಲಿ ಡಾ. ಎಂ.ವಿ. ಗೋಪಾಲಸ್ವಾಮಿರವರು ಮೈಸೂರು ವಿಶ್ವವಿದ್ಯಾಲಯದಲ್ಲಿ ರೇಡಿಯೋ ಪ್ರಸಾರ ಕೇಂದ್ರ (ಆಕಾಶವಾಣಿ) ಮೊದಲು ಪ್ರಾರಂಭಿಸಿದರು. 1941ರಲ್ಲಿ ರಾಜ್ಯ ಸರ್ಕಾರವು ಆಕಾಶವಾಣಿಯನ್ನು ತನ್ನ ಸುಪರ್ಧಿಗೆ ತೆಗೆದುಕೊಂಡಿತು. ನವೆಂಬರ್ 1955 ರಲ್ಲಿ ಆಕಾಶವಾಣಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. 1950 ರ ಹೊತ್ತಿಗಾಗಲೇ ಧಾರವಾಡದಲ್ಲಿ ಆಕಾಶವಾಣಿಯ ಕೇಂದ್ರವು ಪ್ರಾರಂಭವಾಗಿತ್ತು. ಭದ್ರವತಿ 1965 ಮತ್ತು ಕಲುಬುರ್ಗಿಯಲ್ಲಿ ಆಕಾಶವಾಣಿ

**ದೆಹಲಿ ಆಕಾಶವಾಣಿ ಕೇಂದ್ರದ ಬಳಿ 1971ರ ಚುನಾವಣೆ ಫಲಿತಾಂಶ ವೀಕ್ಷಿಸುತ್ತಿರುವ ಜನ ಸಮೂಹ**




**ಮಾಹಿತಿ : ರಾಮಚಂದ್ರಗುಹ – ಗಾಂಧಿ ನಂತರ ಭಾರತ ಪುಟ ಸಂ–514**
**ಮ್ಯಾಕ್‌ಮಿಲನ್ ಪಬ್ಲಿಕೇಷನ್ ದೆಹಲಿ–2008**

ಪ್ರಾದೇಶಿಕ ಕೇಂದ್ರಗಳು ಪ್ರಾರಂಭಗೊಂಡವು. 1991 ರಲ್ಲಿ ಚಿತ್ರದುರ್ಗ ಮತ್ತು ಹಾಸನ, 1992 ರಲ್ಲಿ ಹೊಸಪೇಟೆ, 1993 ರಲ್ಲಿ ಮಡಿಕೇರಿ ಮತ್ತು ರಾಯಚೂರು 1994 ರಲ್ಲಿ ಕಾರವಾರ, 1997 ವಿಜಯಪುರ, 2003ರಲ್ಲಿ ಬಳ್ಳಾರಿಯಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಿತು.

ಆಕಾಶವಾಣಿ (All India Redio) ಸ್ವತಂತ್ರ ಭಾರತದಲ್ಲಿ ವಿಭಿನ್ನ ಅಭಿವೃದ್ಧಿ ಕುರಿತಾದ ಚರ್ಚೆಗಳನ್ನು ಒಳಗೊಂಡಿದ್ದವು. ಆಕಾಶವಾಣಿಯ ಜೊತೆಗೆ ಮನರಂಜನೆಗಾಗಿ ವಿವಿಧ ಭಾರತಿ (Vividh Bharathi) ಎಂಬ ಬಾನುಲಿಯು ಚಲನ ಚಿತ್ರ ಗೀತೆಗಳನ್ನು ಪ್ರಸಾರ ಮಾಡುತ್ತಿದೆ. ವಿವಿಧ ಭಾರತಿ ಕಾರ್ಯಕ್ರಮಗಳು ಪ್ರಾಯೋಜಿತ ಕಾರ್ಯ ಕ್ರಮಗಳನ್ನು ಪ್ರಸಾರ ಮಾಡುವುದರಿಂದ ಆಕಾಶವಾಣಿ ಕೇಂದ್ರಕ್ಕೆ ಆದಾಯದ ಮೂಲವೂ ಆಗಿತ್ತು. ಕರ್ನಾಟಕದಲ್ಲಿ ಬೆಂಗಳೂರು, ಆಕಾಶವಾಣಿ ಕೇಂದ್ರದ ಜೊತೆಗೆ ಮೈಸೂರು, ಭದ್ರಾವತಿ, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾ ಉಪಕೇಂದ್ರಗಳಿಂದ ಮನರಂಜನೆ, ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ವಾಣಿಜ್ಯ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಿವೆ. ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿದ್ದ ಜಿ.ಆರ್. ಗುಂಡಣ್ಣ ಮತ್ತು ಎಂ.ಟಿ. ಜಯಣ್ಣನವರು ಹಾಗೂ ನಡೆಸಿಕೊಡುತ್ತಿದ್ದ **ಕೃಷಿರಂಗ** ಕಾರ್ಯಕ್ರಮ ಅತ್ಯಂತ ಜನಮನ್ನಣೆ ಗಳಿಸಿತ್ತು.

ಸ್ವಾತಂತ್ರ್ಯ ನಂತರ ಭಾರತ ಸರ್ಕಾರವು ಆಕಾಶವಾಣಿ ಕೇಂದ್ರಗಳ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಲಾಯಿತು. ಪ್ರಸ್ತುತ 24 ಭಾಷೆಗಳು ಮತ್ತು 146 ಉಪಭಾಷೆಗಳು (Dialects) ನಲ್ಲಿ ಬಾನುಲಿ ಕಾರ್ಯನಿರ್ವಹಿಸುತ್ತಿದೆ. ಆಕಾಶವಾಣಿ ರಾಷ್ಟ್ರೀಯ, ಪ್ರಾಂತೀಯ ಮತ್ತು ಸ್ಥಳೀಯ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿವೆ.

### ಎಫ್.ಎಂ. ರೇಡಿಯೋ (Frequency Modulator Radio)

2002ರ ನಂತರ ಖಾಸಗೀ ಮಾಲಿಕತ್ವದಲ್ಲಿ ಪ್ರಾರಂಭವಾದ ಎಫ್. ಎಂ. ರೇಡಿಯೋಗಳು ಮನರಂಜನೆಗೆ ಹೊಸ ಆಯಾಮವನ್ನು ನೀಡಿತು. ವೀಕ್ಷಕರನ್ನು ಆಕರ್ಷಿಸಲು ಈ ವಾಹಿನಿಗಳು ವಿಶಿಷ್ಟ ಮತ್ತು ಜನಪ್ರಿಯ ಸಂಗೀತ ಮತ್ತು ವಾರ್ತೆಗಳನ್ನು ಬಿತ್ತರಿಸುವ ಮೂಲಕ ವೀಕ್ಷಕರನ್ನು ರಂಜಿಸುತ್ತವೆ. ಬಹುತೇಕ ಎಫ್.ಎಂ. ರೇಡಿಯೋಗಳು ನಗರವಾಸಿಗಳು ಮತ್ತು ಯುವ ಜನತೆಯನ್ನು ಗಮನದಲ್ಲಿಟ್ಟು ಕಾರ್ಯಕ್ರಮಗಳನ್ನು ಪ್ರಸಾರಮಾಡುತ್ತವೆ. ರೇಡಿಯೋ ಮಿರ್ಚಿ (Radio Mirchi) ಟೈಮ್ಸ್ ಆಫ್ ಇಂಡಿಯಾ ಮಾಲಿಕತ್ವಕ್ಕೆ ಒಳಪಟ್ಟಿದ್ದರೆ. "ರೆಡ್ ಎಫ್‌ಎಂ". ಲಿವಿಂಗ್ ಮೀಡಿಯದ ಮಾಲಿಕತ್ವ ಮತ್ತು "ರೇಡಿಯೋ ಸಿಟಿ," ಸ್ಟಾರ್ ನೆಟ್ ವರ್ಕ್ ಸಮೂಹದ ಸೇರಿ ಮಾಲೀಕತ್ವಕ್ಕೆ ಒಳಪಟ್ಟಿದೆ.

ಪ್ರಸ್ತುತ ಭಾರತದ ಸ್ಥಿತಿಗತಿ ವಿವರಿಸಲು "ರಂಗದೇ ಬಸಂತಿ" ಮತ್ತು "ಲಗೇ ರಹೋ ಮುನ್ನಾಬಾಯಿ" ಸಿನಿಮಾಗಳಲ್ಲಿ ರೇಡಿಯೋ ಮಾಧ್ಯಮವನ್ನು ಬಳಸಿಕೊಂಡಿವೆ. ರಂಗ್‌ದೇ ಬಸಂತಿ ಸಿನಿಮಾದಲ್ಲಿ ಆದರ್ಶ ಯುವಕರ ಗುಂಪು ದೇಶಪ್ರೇಮಿ ಭಗತ್ ಸಿಂಗ್‌ರಿಂದ ಪ್ರೇರಣೆಗೊಂಡು ಭ್ರಷ್ಟ ರಾಜಕಾರಣಿಯೊಬ್ಬರನ್ನು ಹತ್ಯೆ ಮಾಡಿ, ಆಕಾಶವಾಣಿ ಕೇಂದ್ರವನ್ನು ತಮ್ಮ ವಶಕ್ಕೆ ಪಡೆದು ಜನರಿಗೆ ತಮ್ಮ ಉದ್ದೇಶವನ್ನು ವಿವರಿಸುತ್ತಾರೆ. ಆದರೆ ಲಗೇ ರಹೋ ಮುನ್ನಬಾಯಿ ಸಿನಿಮಾದ ನಾಯಕಿ ರೇಡಿಯೋ ಉದ್ಘೋಷಕಿ (Radio Jockey) ಯಾಗಿ ಕಾರ್ಯನಿರ್ವಹಿಸುವಾಗ "ಶುಭೋದಯ ಮುಂಬಯ್" (Good Morning Mumbai,) ಎಂಬ ಮಾಧುರ್ಯ ಮಿಶ್ರಿತ ಧ್ವನಿಯಿಂದ ಜನರನ್ನು ಎಚ್ಚರಿಸುತ್ತಾಳೆ. ನಾಯಕ ಒಂದು ಹುಡುಗಿಯ ಪ್ರಾಣ ಉಳಿಸಲು ರೇಡಿಯೋ ಮಾಧ್ಯಮವನ್ನು ಬಳಸಿಕೊಳ್ಳುತ್ತಾನೆ.

ಈ ವಾಹಿನಿಗಳಲ್ಲಿ ಸ್ಥಳೀಯ ವಾರ್ತೆಗಳಿಗೆ ಹೆಚ್ಚಿನ ಬೇಡಿಗೆ ಇದೆ. ಸ್ಥಳೀಯ ಆಕಾಶವಾಣಿಗಿಂತ ಎಫ್.ಎಂ. ರೇಡಿಯೋ ಕೇಳುಗರ ಸಂಖ್ಯೆ ಹೆಚ್ಚಾಗುತ್ತಿರುವುದು ಒಂದು ಜಾಗತಿಕ ವಿದ್ಯಮಾನವಾಗಿದೆ.

### (2) ದೂರದರ್ಶನ (Television)

ಸೆಪ್ಟಂಬರ್ 15 – 1959ರಲ್ಲಿ ಕೃಷಿ ದರ್ಶನ ಎಂಬ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು ಪ್ರಚಾರ ಪಡಿಸಲು ದೂರದರ್ಶನದಲ್ಲಿ ಪ್ರಸಾರವಾದ ಮೊದಲ ಕಾರ್ಯಕ್ರಮ 1975 ಆಗಸ್ಟ್ ರಿಂದ 1976 ಜುಲೈವರೆಗೆ ಆರು ರಾಜ್ಯಗಳ ಗ್ರಾಮೀಣ ಪ್ರದೇಶದಲ್ಲಿ 2400 ಟಿವಿಗಳಲ್ಲಿ ಉಪಗ್ರಹ ಕಾರ್ಯಸೂಚಿ ದೂರದರ್ಶನ ಪ್ರಯೋಗದ ಮೂಲಕ (Satallite Instructional Television Experiment) ಕೇವಲ ನಾಲ್ಕು ಗಂಟೆ ಕಾರ್ಯಕ್ರಮಗಳನ್ನು ಬಿತ್ತರಿಸಲಾಯಿತು. 1975ರ ಹೊತ್ತಿಗೆ ದೆಹಲಿ, ಮುಂಬಯಿ, ಶ್ರೀನಗರ ಮತ್ತು ಅಮೃತಸರದಲ್ಲಿ ದೂರದರ್ಶನ ಕೇಂದ್ರಗಳನ್ನು ನಿರ್ಮಿಸಲಾಯಿತು. ಮುಂದಿನ ವರ್ಷದಲ್ಲಿ ಕಲ್ಕತ್ತ, ಚೆನ್ನೈ ಮತ್ತು ಜಾಲಂದರ್ ನಗರಗಳಲ್ಲಿ ದೂರದರ್ಶನ ಕೇಂದ್ರಗಳು ತಲೆ ಎತ್ತಿದವು. ದೂರದರ್ಶನವು ವಾರ್ತೆಗಳು, ಮಹಿಳೆ ಮತ್ತು ಮಕ್ಕಳ ಕಾರ್ಯಕ್ರಮಗಳು ರೈತರಿಗಾಗಿ ಮನರಂಜನೆ ಮುಂತಾದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದ್ದವು. ಪ್ರತಿ ಕಾರ್ಯಕ್ರಮವು ಪ್ರಾಯೋಜಕತ್ವದ ಮೂಲಕ ದೂರದರ್ಶನವು ಸಾಮೂಹಿಕ ಶ್ರೋತೃಗಳಿಗೆ (Mass Audiance), ಮನರಂಜನೆಯ ಸಾಧನವು ಆಯಿತು. 1982ರ ದೆಹಲಿಯಲ್ಲಿ ನಡೆದ 'ಏಷಿಯನ್ ಕ್ರೀಡಾಕೂಟ'ದ ಸಮಯದಲ್ಲಿ ಬಂದ ಬಣ್ಣದ ಟಿವಿಗಳು ಮತ್ತು ರಾಷ್ಟ್ರೀಯ ಕಾರ್ಯಕ್ರಮಗಳ (National Network Programme) ವಿಸ್ತರಣೆಯಿಂದ ದೂರದರ್ಶನ ಮತ್ತಷ್ಟು ವಾಣಿಜ್ಯೀಕರಣವಾಯಿತು. 1984–85ರ ಸಮಯದಲ್ಲಿ ದೇಶದ್ಯಂತ ದೂರದರ್ಶನ ಕೇಂದ್ರಗಳು ಸ್ಥಾಪನೆಗೊಂಡ ಕಾರ್ಯಕ್ರಮಗಳು ಹೆಚ್ಚು ಜನರಿಗೆ ತಲುಪಲು ಸಾಧ್ಯವಾಯಿತು. ಇದೇ ಸಮಯದಲ್ಲಿ ಹಮ್ ಲೋಗ್ (Hum Log) ಮತ್ತು ಬುನಿಯಾದ್ (Buniyad) ನಂತಹ ಜನಪ್ರಿಯ ಕಾರ್ಯಕ್ರಮಗಳು ದೂರದರ್ಶನಕ್ಕೆ ಸಾಕಷ್ಟು ಹಣ ಮತ್ತು ಜನಪ್ರಿಯತೆ ತಂದುಕೊಟ್ಟವು. ದೂರದರ್ಶನದ ಜನಪ್ರಿಯತೆಯಲ್ಲಿ ಮತ್ತು ಹಣಗಳಿಕೆಯಲ್ಲಿ ರಾಮಾಯಣ ಮತ್ತು ಮಹಾಭಾರತ ವಿಷ್ಣುಪುರಾಣ, The sword of Tippu Sultan, ದಿ ಮರಾಠ, ಜೈ ಹನುಮಾನ್, ಶಕ್ತಿಮಾನ್, ಓಂ ನಮ ಶಿವಾಯ, ಮುಂತಾದ ಧಾರವಾಹಿಗಳು ಟಿವಿ ಪರದೆಯ ಮೇಲೆ ಮೂಡಿಬಂದಿದ್ದು ಮತ್ತೊಂದು ವಿಶೇಷ. ಇವುಗಳು ದೂರದರ್ಶನದ ಟಿ. ಆರ್. ಪಿ ಯನು ಗಣನೀಯವಾಗಿ ಹೆಚ್ಚಿಸಿದವು.

ದೂರದರ್ಶನ

ಪ್ರಸ್ತುತ ಹೊಸ ಹೊಸ ವಾಹಿನಿಗಳ ಆರಂಭದಿಂದ ದೂರದರ್ಶನ ಬದಲಾಗುತ್ತಿದೆ. ಕಳೆದ ಎರಡು ದಶಕದಲ್ಲಿ ಖಾಸಗಿ ವಾಹಿನಿಗಳ ಪ್ರಭಾವವು ಅತ್ಯಧಿಕವಾಗಿದೆ. ದೈನಂದಿನ ಜೀವನದ ವಿಭಿನ್ನ ಅನುಭವ ನೀಡುವ ಮೂಲಕ ದೂರದರ್ಶನವು ಪ್ರಮುಖ ಪಾತ್ರ ವಹಿಸುತ್ತಿದೆ. (Everyday Life is Experience Differently in a Society in which Television place an important role) ಎಂದು ಆಂಥೋನಿ ಗಿಡಿನ್ಸ್ ಅಭಿಪ್ರಾಯ ಪಟ್ಟಿದ್ದಾರೆ. ಈ ಖಾಸಗಿ ವಾಹಿನಿಗಳು ಸ್ವಾಯುತ್ತ ಎಂದು ಹೇಳಿಕೊಂಡರೂ ಬಂಡವಾಳಶಾಹಿ ಮಾರುಕಟ್ಟೆ ಅರ್ಥವ್ಯವಸ್ಥೆಯ ಒಂದು ಭಾಗವಾಗಿವೆ.

## ಕನ್ನಡ ವಾರ್ತಾವಾಹಿನಿಗಳು (Kannada News Channels)

ಕರ್ನಾಟಕದಲ್ಲಿ 3–9–1977 ರಲ್ಲಿ ಕಲಬುರ್ಗಿಯಲ್ಲಿ 40 ಚದುರ ಕಿ.ಮೀ ವ್ಯಾಪ್ತಿಯ 240 ಹಳ್ಳಿಗಳನ್ನು ಒಳಗೊಂಡ ದೂರದರ್ಶನದ ಮೊದಲ ಕೇಂದ್ರವು ಪ್ರಾರಂಭಗೊಂಡಿತು. ಇದರಿಂದ ರಾಯಚೂರು, ವಿಜಯಪುರ, ಕಲಬುರ್ಗಿಯ ಜನತೆಗೆ ದೂರದರ್ಶನದ ಸಾಮುದಾಯಿಕ ವೀಕ್ಷಣೆಗೆ ಅವಕಾಶವಾಯಿತು. ಕಲಬುರ್ಗಿ ದೂರದರ್ಶನ ಕೇಂದ್ರವು ಸಮುದಾಯಿಕ ವೀಕ್ಷಣೆಯ ಕೇಂದ್ರಗಳನ್ನು ನಿರ್ವಹಿಸುತ್ತಿತ್ತು. ಬೆಂಗಳೂರು ಕೇಂದ್ರವು 1–1–1981 ರಿಂದ ದೂರದರ್ಶನ ಕಾರ್ಯಕ್ರಮಗಳನ್ನು ಪ್ರಾರಂಭಿಸಿತು.

1984ರಲ್ಲಿ ಮಂಗಳೂರು ದಾವಣಗೆರೆ, ವಿಜಯಪುರ, ಬಳ್ಳಾರಿ, ಗದಗ, ರಾಯಚೂರು, ಧಾರವಾಡ, ಹೊಸಪೇಟೆ, ಮೈಸೂರು ಬೆಳಗಾವಿಯಲ್ಲಿ ದೂರದರ್ಶನ ಪ್ರಸರಣ ಕೇಂದ್ರಗಳ ಪ್ರಾರಂಭವಾದವು. 1998ರಲ್ಲಿ ಬೆಂಗಳೂರು ಕೇಂದ್ರದಲ್ಲಿ ಪೂರ್ಣಪ್ರಮಾಣದ ಕಾರ್ಯಕ್ರಮ ನಿರ್ಮಾಣ ಕೇಂದ್ರವನ್ನು ಸಹ ಆರಂಭಿಸಲಾಯಿತು. ಸಮೂಹ ಮಾಧ್ಯಮಗಳು ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ದೂರದರ್ಶನವು ಸರ್ಕಾರಿ ಪ್ರಾಯೋಜಿತ ವಾಹಿನಿಯಾಗಿದೆ ಮತ್ತು ಡಿ.ಡಿ. ಚಂದನ ವಾಹಿನಿಯು ಸಂಪೂರ್ಣ ಕನ್ನಡ ಕಾರ್ಯಕ್ರಮಕ್ಕೆ ಸೀಮಿತವಾದ ವಾಹಿನಿ. ಡಿ.ಡಿ. ಚಂದನವು ಮನರಂಜನೆಯ ಜೊತೆಗೆ ವಾರ್ತೆಗಳನ್ನೂ ಪ್ರಸಾರ ಮಾಡುತ್ತದೆ.

ಉದಯ ವಾರ್ತೆಗಳು ಕನ್ನಡ ಮೊದಲ ಖಾಸಗಿ ವಾರ್ತಾವಾಹಿನಿ. ಪ್ರಸ್ತುತ ಕನ್ನಡದಲ್ಲಿ ಉದಯವಾರ್ತೆಗಳು, ಸುವರ್ಣ ನ್ಯೂಸ್, ಕಸ್ತೂರಿ 24 × 7 ವಾರ್ತೆಗಳು ಟಿವಿ–9, ಸಮಯ ವಾರ್ತೆಗಳು, ಜನಶ್ರೀ ವಾರ್ತೆಗಳು, ರಾಜ್ ನ್ಯೂಸ್, ಈಟಿವಿ ವಾರ್ತೆಗಳು ಮತ್ತು ಬಿ.ಟಿವಿಗಳು ವಾರ್ತೆಗಳನ್ನು ಬಿತ್ತರಿಸುತ್ತಿವೆ. ಇನ್ನು ಕೆಲವು ವಾಹಿನಿಗಳು ಶೀಘ್ರದಲ್ಲಿ ಆರಂಭವಾಗಲಿವೆ. ಭಾರತದಲ್ಲಿ ವಾರ್ತೆಗಳಿಗಾಗಿಯೋ ನೂರಕ್ಕೂ ಹೆಚ್ಚು ವಾಹಿನಿಗಳು ವಿವಿಧ ಭಾಷೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿದ್ಯುನ್ಮಾನ ವಾಹಿನಿಗಳಲ್ಲಿ ವಾರ್ತಾವಾಹಿನಿಗಳು ಸುಲಭ ಮತ್ತು ಕಡಿಮೆ ಖರ್ಚಿನಲ್ಲಿ ಕಾರ್ಯ ನಿರ್ವಹಿಸುತ್ತವೆ. ಈ ವಾಹಿನಿಗಳು ದೈನಂದಿನ ಜೀವನವನ್ನು ಸಾಮಾಜೀಕರಣಗೊಳಿಸಿ, ಜೀವನಶೈಲಿ, ಸಂಬಂಧಗಳು, ಹಣ, ದಿರಿಸು, ವೈಯಕ್ತಿಕ ಬೇಕು–ಬೇಡಗಳಲ್ಲಿ ಆಸಕ್ತಿಯನ್ನು ಹುಟ್ಟುಹಾಕುತ್ತವೆ.

## ದೂರದರ್ಶನ ಅಳತೆ ಬಿಂದು (T.V. Rating Point)

ಯಾವ ಕಾರ್ಯಕ್ರಮಗಳನ್ನು ಹೆಚ್ಚು ವೀಕ್ಷಣೆ ಮಾಡುತ್ತಾರೆ ಎಂದು ಅಳತೆ ಮಾಡುವ ವಿಧಾನವನ್ನು ದೂರದರ್ಶನ ಅಳತೆಯ ಬಿಂದು ಎಂದು ಕರೆಯುತ್ತೇವೆ. (TRP) ಈ ಮೂಲಕ ಜನರ ಕಾರ್ಯಕ್ರಮದ ಆಯ್ಕೆ ಮತ್ತು ವಾಹಿನಿಯ ಜನಪ್ರಿಯತೆಯನ್ನು ತಿಳಿಯಬಹುದು. ಇಂತಹ ಉದ್ದೇಶಕ್ಕಾಗಿ ಪ್ರತಿ ಸಾವಿರ ಮನೆಗಳಿಗೆ ಒಂದು ಮೀಟರ್ ಅಳವಡಿಸುತ್ತಾರೆ. ಇದನ್ನು ಒಂದು ಮಾದರಿ (Sample) ಯಾಗಿ ಪರಿಗಣಿಸುತ್ತಾರೆ. ಈ ಮೀಟರ್‌ನ್ನು "ಜನತಾ ಮೀಟರ್" (People's Meter) ಎಂದು ಕರೆಯುತ್ತಾರೆ. ಈ ಮೀಟರ್ ಪ್ರತಿದಿನ ನೋಡುವ ಕಾರ್ಯ ಕ್ರಮಗಳನ್ನು ದಾಖಲಿಸುತ್ತದೆ. ನಂತರ ಒಂದು ತಿಂಗಳ ಸರಾಸರಿ ಅವಧಿಯಲ್ಲಿ ಹೆಚ್ಚು

ವೀಕ್ಷಿಸಿದ ಕಾರ್ಯಕ್ರಮ ಮತ್ತು ಚಾನೆಲ್ ಯಾವುದೆಂದು ನಿರ್ಧಾರವಾಗುತ್ತದೆ. ಯಾವ ಕಾರ್ಯಕ್ರಮ ಮತ್ತು ಚಾನೆಲ್ ಹೆಚ್ಚು ಟಿಆರ್‌ಪಿ ಅಂಕ ಪಡೆಯುತ್ತದೆಯೋ ಅಂತಹ ಚಾನೆಲ್ ಪ್ರಾಯೋಜಕರು ಮತ್ತು ಜಾಹಿರಾತುದಾರರಿಂದ ಹೆಚ್ಚು ಹಣ ಗಳಿಸುತ್ತದೆ. ರಾಜಕೀಯ ಸುದ್ದಿಗಳು ಕ್ರೀಡೆ (ಕ್ರಿಕೆಟ್) ವರ್ಣರಂಜಿತ ಸುದ್ದಿಗಳು, (Glamoor) ಅಪರಾಧ ಮತ್ತು ಹಿಂಸೆಯ ಸುದ್ದಿಗಳು ಹೆಚ್ಚು ಟಿಆರ್‌ಪಿಗಳಿಸುವ ಕಾರಣ ಈ ಸುದ್ದಿಗಳಿಗೆ ಹೆಚ್ಚು ಪ್ರಸಾರವಾಗುತ್ತವೆ.

ದೂರದರ್ಶನ ಭವನ, ನವದೆಹಲಿ



### (3) ಅಂತರ್ಜಾಲ (Internet)

ಅಂತರ್ಜಾಲವು ಗಣಕಯಂತ್ರದ ಮೂಲಕ ಲಕ್ಷಾಂತರ ಖಾಸಗಿ, ಸಾರ್ವಜನಿಕ, ಶೈಕ್ಷಣಿಕ ವ್ಯವಹಾರಿಕ ಮುಂತಾದ ಸಂಗತಿಗಳನ್ನು ಮಾಹಿತಿ ತಂತ್ರಜ್ಞಾನದ (Networking) ಮೂಲಕ ಜಾಗತಿಕ ಮಟ್ಟದಲ್ಲಿ ಸಂಪರ್ಕ ಬೆಸೆಯುವ ವ್ಯವಸ್ಥೆಗೆ ಅಂತರ್ಜಾಲ ಎನ್ನುತ್ತೇವೆ. ಸರಳವಾಗಿ ಹೇಳುವುದಾದರೆ ಅಂತರ್ಜಾಲ ಎಂದರೆ ಸಂಪರ್ಕಗಳ ಅಂತರ್ಜಾಲ (“Network in a Network of Networks”)

ಅಂತರ್ಜಾಲವು ಅಮೇರಿಕ ರಕ್ಷಣ ಇಲಾಖೆಯ ಡಿಫೆನ್ಸ್ ಅಡ್ವಾನ್ಸ್ಡ್ ರಿಸರ್ಚ್ ಪ್ರಾಜೆಕ್ಟ್ ಏಜೆನ್ಸಿ (DARPA) 1960ರಲ್ಲಿ ಸೋವಿಯತ್ ಒಕ್ಕೂಟ ಅಮೇರಿಕ ಸಂಪರ್ಕಸಾಧನಗಳನ್ನು ಅಣುಯುದ್ಧದಿಂದ ನಾಶವಾಗುವುದನ್ನು ತಪ್ಪಿಸಲು ರೂಪಿಸಿದ ತಂತ್ರದ ಪ್ರತಿಫಲವೇ ಅಂತರ್ಜಾಲ. ಅಮೇರಿಕಾದ ರಕ್ಷಣ ಇಲಾಖೆ ಸಿದ್ಧಪಡಿಸಿದ ARAPANET ಇಂದು ಜಾಗತೀಕ ಮಟ್ಟದಲ್ಲಿ ಅಂತರ್ಜಾಲ ಅಭಿವೃದ್ಧಿಯಾಗಲು ಸಾಧ್ಯವಾಯಿತು. ಈ ಅಂತರ್ಜಾಲವನ್ನು ಯಾವುದೇ ಒಂದು ಕೇಂದ್ರದಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಅಂತರ್ಜಾಲವು ಸಾವಿರಾರು ಸ್ವಯಂಚಾಲಿತ ಗಣಕಯಂತ್ರಗಳಿಗೆ ಸಂಪರ್ಕ ಪಡೆದು ವಿದ್ಯುನ್ಮಾನ ಮಾಧ್ಯಮದ ಮೂಲಕ ಪ್ರವಹಿಸುತ್ತದೆ.

ಪ್ರಸ್ತುತ ಕಾಲವನ್ನು ಮಾಹಿತಿಯ ಯುಗ (Information Age), ಸಂವಹನ ಯುಗ (Communication Age) ಮತ್ತು ಅಂತರ್ಜಾಲದ ಯುಗ (Network Age) ಎಂದು ಕರೆಯುತ್ತೇವೆ. ಅಂತರ್ಜಾಲವು ವಿವಿಧ ಮಾದರಿಯ ಸಂವಹನ ಕೌಶಲ್ಯಗಳನ್ನು ಒದಗಿಸುತ್ತದೆ. ಕೋಟ್ಯಾಂತರ ಜನ ಸರ್ಚ್ ಇಂಜಿನ್ (Search Engine) ವೆಬ್

ಪುಟಗಳು, ವಿದ್ಯುನ್ಮಾನ ಅಂಚೆ (E-mail) ಇ–ಬುಕ್ಸ್, ಇ–ಜರ್ನಲ್ಸ್, ಇ–ನ್ಯೂಸ್‌ಪೇಪರ್, ಇಂಟರ್‌ನೆಟ್ ಬ್ಯಾಂಕಿಂಗ್, ಇಂಟರ್‌ನೆಟ್ ಟೆಲಿಫೋನ್, ವಿಡಿಯೋ ಕಾನ್ಫರೆನ್ಸಿಂಗ್, ಮಲ್ಟಿ ಮೀಡಿಯಾ ಶೇರಿಂಗ್, ಆನ್‌ಲೈನ್ ನ್ಯೂಸ್‌ರೂಮ್ಸ್, ರೋಮಿಂಗ್, ಶಾಪಿಂಗ್, ಬ್ಲಾಗಿಂಗ್ ಮತ್ತು ಸಾಮಾಜಿಕ ಸಂಪರ್ಕ ತಾಣ (Social Networking Sites) ಗಳನ್ನು ಬಳಸಿಕೊಂಡು ವ್ಯವಹಾರ ಅಥವಾ ವೈಯಕ್ತಿಕ ಅಂತರ್ಜಾಲ ಸಂಪರ್ಕ ಸಾಧಿಸಲು ಅಂತರ್ಜಾಲವು ಒಂದು ಮಾಧ್ಯಮವಾಗಿದೆ.

### (4) ಸಾಮಾಜಿಕ ಸಂಪರ್ಕ ತಾಣಗಳು (Social Networking Sites)

ಸಾಮಾಜಿಕ ಸಂಪರ್ಕ ತಾಣಗಳು ಆನ್‌ಲೈನ್ ಅಥವಾ ಅಗೋಚ ವೇದಿಕೆಗಳಾಗಿ ಸಾಮಾನ್ಯ ಆಸ್ತಕಿಗಳನ್ನು ಹಂಚಿಕೊಳ್ಳುವ ಅಂತರ್ಜಾಲ ತಾಣಗಳಾಗಿವೆ. ಇವುಗಳು ಒಂದು ರೀತಿಯ "ಅಗೋಚರ ವೇದಿಕೆ"ಯಾಗಿ (Virtual Fourm) ಜನಪ್ರಿಯವಾಗಿವೆ. ಸಾಮಾಜಿಕ ಸಂಪರ್ಕ ತಾಣಗಳ ಮೂಲಕ ಆನ್‌ಲೈನ್ ಗೆಳೆತನ, ಒಂದು ಸಮೂಹಕ್ಕೆ ಸೇರ್ಪಡೆ ಮತ್ತು ಹೊಸ ಗೆಳೆಯ ಸಮೂಹದ ಸಂಪರ್ಕ, ಅಥವಾ ಹಳೆ ಗೆಳೆತನದ ಮುಂದುವರಿಕೆ ಗೆಳೆತನದ ಪಟ್ಟಿಯನ್ನು ಕಾಲಕಾಲಕ್ಕೆ ಹೆಚ್ಚಿಸಿಕೊಳ್ಳುವುದು ಮತ್ತು ಸಮಾನ ಆಸಕ್ತಿಗೆ ಅನುಗುಣವಾಗಿ ಗೆಳೆತನ ವಿಷಯಗಳನ್ನು ಹಂಚಿಕೊಳ್ಳಬಹುದು.ಮತ್ತು ಚರ್ಚೆಯಲ್ಲಿ ಭಾಗವಹಿಸಬಹುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಸಾಮಾಜಿಕ ಸಂಪರ್ಕ ತಾಣಗಳು (SNS) ಸಂಪರ್ಕ, ಮನರಂಜನೆ ಮತ್ತು ಮಾಹಿತಿಯ ತಾಣಗಳಾಗಿವೆ. ಫೇಸ್‌ಬುಕ್, ಆರ್‌ಕೂಟ್, ಗೂಗಲ್ ಪ್ಲಸ್, ಮೈಸ್ಪೇಸ್, ಟ್ವಿಟ್ಟರ್, ಫ್ರೆಂಡಸ್ಟರ್, ಭಾರತ್ ಸ್ಟೂಡೆಂಟ್ ಇತ್ಯಾದಿಗಳು ಪ್ರಮುಖ ಸಾಮಾಜಿಕ ಸಂಪರ್ಕ ತಾಣಗಳಾಗಿವೆ.

ಭಾರತವು ಸಾಮಾಜಿಕ ಸಂಪರ್ಕ ತಾಣಗಳ ಬಳಕೆಯಲ್ಲಿ ಅಮೇರಿಕ ಮತ್ತು ಚೈನಾದ ನಂತರ ಮೂರನೆಯ ಸ್ಥಾನದಲ್ಲಿದೆ. ಇದರ ಜನಪ್ರಿಯತೆಯನ್ನು ಹೆಚ್ಚಿಸಲು ಪ್ರಾಂತೀಯ ಭಾಷೆಗಳಲ್ಲಿ ಸೇವೆಯನ್ನು ಪ್ರಾರಂಭಿಸಲಾಗಿದೆ.

### ಮಾಧ್ಯಮ ದೊರೆ – ರೂಪರ್ಟ್ ಮರ್ಡೋಕ್ (Media Tycoon - Rapert Murdoch)

ಆಸ್ಟ್ರೇಲಿಯಾ ಮೂಲದ ರೂಪರ್ಟ್ ಮುರ್ಡೋಕ್ ಪ್ರಪಂಚದ ಅತ್ಯಂತ ಶ್ರೀಮಂತ ಮಾಧ್ಯಮ ಉದ್ದಿಮೆದಾರ. ನ್ಯೂಸ್ ಕಾರ್ಪೊರೇಷನ್ (News Corporation) ಮಾಲೀಕತ್ವದ ಮಾಧ್ಯಮಗಳು ಜಗತ್ತಿನಾದ್ಯಂತ ಕಾರ್ಯ ನಿರ್ವಹಿಸುತ್ತಿವೆ. 1960ರಲ್ಲಿ ಆಸ್ಟ್ರೇಲಿಯಾದಲ್ಲಿ ನ್ಯೂಸ್ ಕಾರ್ಪೊರೇಷನ್ ಪ್ರಾರಂಭಿಸಿದ ನಂತರ ಇಂಗ್ಲೇಂಡ್ ಮತ್ತು ಅಮೇರಿಕಾ ಮಾಧ್ಯಮ

ರೂಪರ್ಟ್ ಮರ್ಡೋಕ್



ವ್ಯವಹಾರಕ್ಕೆ ಕೈಹಾಕಿದರು. 1969ರಲ್ಲಿ "ನ್ಯೂಸ್ ಆಫ್ ದಿ ವರ್ಲ್ಡ್" ಮತ್ತು "ದಿ

ಸನ್ ಪತ್ರಿಕೆಗಳ ಮಾಲೀಕತ್ವ, 1970ರಲ್ಲಿ ಅಮೇರಿಕಾದ "ನ್ಯೂಯಾರ್ಕ್ ಪೋಸ್ಟ್"ನ ಒಡೆತನ ಸದ್ಯ ಅಮೇರಿಕಾ ಒಂದರಲ್ಲೇ 130ಕ್ಕೂ ಹೆಚ್ಚು ಪತ್ರಿಕೆಗಳ ಮಾಲೀಕತ್ವ ಹೊಂದಿದ್ದಾರೆ. ರೂಪರ್ಟ್ ಮಾರ್ಡೋಕರು ಲೈಂಗಿಕತೆ, ಅಪರಾಧ ಮತ್ತು ಕ್ರೀಡೆ ವಿಚಾರಗಳಿಗೆ ಹೆಚ್ಚು ಮನ್ನಣೆ ನೀಡಿ ಪತ್ರಿಕಾ ರಂಗದಲ್ಲಿ ಉನ್ಮಾದಕಾರಿ ಪತ್ರಿಕೋದ್ಯಮ (Sensationalistic Journalism) ಸೃಷ್ಟಿಸಿದರು. ದಿ ಸನ್ ಪತ್ರಿಕೆಯು ಪ್ರಪಂಚದಲ್ಲಿ ಅತಿ ಹೆಚ್ಚು ಪ್ರಸರಣವಾಗುವ ಪತ್ರಿಕೆ ಎಂಬ ಹೆಗ್ಗಳಿಕೆಯನ್ನು ಪಡೆಯಿತು. 2004ರ ಹೊತ್ತಿಗೆ ದಿನಂಪ್ರತಿ 3.4 ಮಿಲಿಯನ್ ಪ್ರತಿಗಳು ವಿತರಣೆಯಾಗುತ್ತಿದ್ದವು.

ಕ್ರೀಡೆ ಮತ್ತು ಇತರ ಚಟುವಟಿಕೆಗಳಿಗೆ ಪ್ರಾಯೋಜಕತ್ವ ಪಡೆಯಲು ನ್ಯೂಸ್ ಕಾರ್ಪೊರೇಷನ್ ಮತ್ತು ಇತರೆ ಕಂಪನಿಗಳು ಜಿದ್ದಾ-ಜಿದ್ದಿ ಸ್ಪರ್ಧೆ ನಡೆಸುತ್ತಿದ್ದವು. ಮಾರ್ಡೋಕರು ಸರ್ಕಾರ ಮತ್ತು ಟೆಲಿಕಮ್ಯುನಿಕೇಷನ್ ವ್ಯವಹಾರವನ್ನು ನಿಯಂತ್ರಿಸುವಷ್ಟು ಪ್ರಭಾವಶಾಲಿಯಾಗಿದ್ದರು.

ಮಾಧ್ಯಮದಲ್ಲಿ ಉನ್ಮಾದ (Sensation) ಸೃಷ್ಟಿಸಲು ಈ ಕಂಪನಿಯು ಇಂಗ್ಲೆಂಡಿನ ಉನ್ನತ ಅಧಿಕಾರಿಗಳು, ರಾಜಕಾರಣಿಗಳು ರಾಜಮನೆತನ ಮತ್ತು ಚಿತ್ರನಟರ ಟೆಲಿಫೋನ್ ಕದ್ದಾಲಿಕೆ ಮಾಡಿ ಬ್ರಿಟೀಷ್ ಪಾರ್ಲಿಮೆಂಟಿನ ವಾಗ್ದಂಡನೆಗೆ ಗುರಿಯಾಗಿ ಕ್ಷಮೆ ಯಾಚಿಸಿದ್ದರು.

### 6.5.3. ಸಮೂಹ ಮಾಧ್ಯಮಗಳ ಇತ್ತೀಚಿನ ಬೆಳವಣಿಗೆಗಳು (Recent Trends in Mass Media)

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳು ಅತ್ಯಂತ ಪ್ರಭಾವಶಾಲಿ ಪಾತ್ರ ವಹಿಸುತ್ತವೆ. 1970ರ ತನಕ ಮಾಧ್ಯಮಗಳು ಸೀಮಿತ ಸ್ಥಳೀಯ ಮಾರುಕಟ್ಟೆಗೆ ಅನುಗುಣವಾಗಿ ಸರ್ಕಾರದ ನೀತಿ-ನಿಯಮಗಳ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಕಳೆದ ನಾಲ್ಕು ದಶಕಗಳಲ್ಲಿ ಮಾಧ್ಯಮವು ಉದ್ದಿಮೆಯಾಗಿ ಬದಲಾಗಿದೆ. ರಾಷ್ಟ್ರೀಯ ಮಾರುಕಟ್ಟೆಗಳು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಜಾಗತಿಕ ಮಾರುಕಟ್ಟೆಯಾಗಿ ರೂಪಾಂತರವಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆ ಹಾಗು ನಿಯತಕಾಲಿಕೆಗಳ ಮಹತ್ವವನ್ನು ಈಗಾಗಲೇ ತಿಳಿದಿದ್ದೇವೆ. ದೂರದರ್ಶನ ಮತ್ತು ಅಂತರ್ಜಾಲದ ಬೆಳವಣಿಗೆಯಿಂದ ಮುದ್ರಣ ಮಾಧ್ಯಮಕ್ಕೆ ಅಲ್ಪ ಹಿನ್ನಡೆಯಾಗಿದೆ. ಆದರೂ ಆಧುನಿಕ ತಂತ್ರಜ್ಞಾನವು ಪತ್ರಿಕೆಗಳ ಪ್ರಸರಣವು ಭಾರತದಲ್ಲಿ ಹೆಚ್ಚಳವಾಗುವುದನ್ನು ಗಮನಿಸಿದ್ದೇವೆ. ಅನೇಕ ಆಕರ್ಷಕ ನಿಯತಕಾಲಿಕೆಗಳು ಮಾರುಕಟ್ಟೆಯನ್ನು ಪ್ರವೇಶಿಸಿವೆ. ಸಮೂಹ ಮಾಧ್ಯಮಗಳ ಇತ್ತೀಚಿನ ಬೆಳವಣಿಗೆಯನ್ನು ಮುಂದಿನ ಘಟಕಗಳಲ್ಲಿ ಪರಿಶೀಲಿಸೋಣ.

#### ಪ್ರಾಂತೀಯ ಮುದ್ರಣ ಮಾಧ್ಯಮದ ಇತ್ತೀಚಿನ ಬೆಳವಣಿಗೆಗಳು (Recent Trends in Regional Print Media)

ಭಾರತೀಯ ಪತ್ರಿಕೆಗಳ ಪ್ರಸರಣದಲ್ಲಿ ಪ್ರಗತಿಗೆ ಹಲವಾರು ಕಾರಣಗಳಿವೆ. (1) ಮೊದಲನೆಯದಾಗಿ ನಗರ ಪ್ರದೇಶಗಳಿಗೆ ಶಿಕ್ಷಿತರ ವಲಸೆಯ ಹೆಚ್ಚಳ. ಉದಾಹರಣೆಗೆ : ಹಿಂದಿ ದಿನಪತ್ರಿಕೆ ಹಿಂದುಸ್ಥಾನ್ (Hindustan) 2003ರಲ್ಲಿ ದೆಹಲಿ ಆವೃತ್ತಿಗಾಗಿ 64,000 ಪ್ರತಿಗಳನ್ನು ಮುದ್ರಿಸುತ್ತಿದ್ದರು. 2005ರ ಹೊತ್ತಿಗೆ 4,25,000 ಪ್ರತಿಗಳು ಪ್ರಸರಣವಾಗುತ್ತಿದ್ದವು. ಕಾರಣವೆಂದರೆ ದೆಹಲಿಯ ಒಟ್ಟು ಜನಸಂಖ್ಯೆ ಒಂದು ಕೋಟಿ ನಲವತ್ತೇಳು ಲಕ್ಷಗಳು ಇವರಲ್ಲಿ ಶೇ.52% ರಷ್ಟು ಹಿಂದಿ ಭಾಷಿಕರು. ಇವರಲ್ಲಿ ಶೇ.47ಮಂದಿ ಗ್ರಾಮೀಣ ಹಿನ್ನೆಲೆಯುಳ್ಳವರಾಗಿದ್ದು, ಶೇ.60 ರಷ್ಟು ಜನರ ಸರಾಸರಿ ವಯಸ್ಸು 40 ವರ್ಷಕ್ಕಿಂತ ಕಡಿಮೆ.

2) ಇದೇ ರೀತಿ ಪ್ರಬಲ ಪತ್ರಿಕೆಗಳಾದ ಮಲೆಯಾಳಂ ಮನೋರಮ, (Malayalam Manorama) ಈ ನಾಡು ಪತ್ರಿಕೆಗಳು ಸ್ಥಳೀಯ ವಾರ್ತೆಗಳಿಗೆ ಹೆಚ್ಚಿನ ಗಮನ ನೀಡಿ ಜಿಲ್ಲಾ ಮಟ್ಟದಲ್ಲಿ ಮುದ್ರಣವನ್ನು ಆರಂಭಿಸಿದವು.

3) ತಮಿಳಿನ **ದಿನತಂತಿ** ಪತ್ರಿಕೆಯು ಸರಳ ಮತ್ತು ಜನ ಸಾಮಾನ್ಯರ ಭಾಷೆಯಲ್ಲಿ ಸುದ್ದಿಯನ್ನು ಪ್ರಕಟಿಸುವ ಮೂಲಕ ಓದುಗರ ಸಂಖ್ಯೆ ಹೆಚ್ಚಿಸಿದವು. ಕನ್ನಡದ ವಿಜಯಕರ್ನಾಟಕ ಮತ್ತು ಕನ್ನಡ ಪ್ರಭ ಪತ್ರಿಕೆಗಳು ಇದೇ ರೀತಿಯ ತಂತ್ರಗಳನ್ನು ಅಳವಡಿಸಿಕೊಂಡಿವೆ.

4) ಇದರ ಜೊತೆಗೆ ಭಾರತೀಯ ಸುದ್ದಿಮಾಧ್ಯಮಗಳು ಆಧುನಿಕ ಮುದ್ರಣ ತಂತ್ರಜ್ಞಾನವನ್ನು ಅಳವಡಿಸಿ, ಹೆಚ್ಚುವರಿ ಪುಟಗಳು, ಪರವಣಿ ಮತ್ತು ಸಾಹಿತ್ಯಕ ವಿಷಯಗಳನ್ನು ಹೊರತರುತ್ತವೆ.

5) **ದೈನಿಕ ಭಾಸ್ಕರ** ಮತ್ತು ವಿಜಯಕರ್ನಾಟಕ ಪತ್ರಿಕೆಗಳು ಗ್ರಾಹಕ ಭೇಟಿ ಕಾರ್ಯಕ್ರಮ, ಮನೆ–ಮನೆ ಸರ್ವೇಕ್ಷಣೆ ಮತ್ತು ಸಂಶೋಧನೆಯ ಮೂಲಕ ಹೊಸ ಮಾರುಕಟ್ಟೆ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿವೆ.

6) ಮುದ್ರಣ ಮಾಧ್ಯಮದವರು ವಿದ್ಯುನ್ಮಾನ ಮಾಧ್ಯಮದ ಮಾಲಿಕತ್ವದ ಮೇಲೆ ಹಿಡಿತ ಸಾಧಿಸುತ್ತಿದ್ದಾರೆ. ಉದಾಹರಣೆಗೆ ಈ ನಾಡು, ಟೈಮ್ಸ್, ದೈನಿಕ ಜಾಗರಣ ಮತ್ತು ಸಹರಾ ಪರಿವಾರಗಳೂ ಮುದ್ರಣ ಮಾಧ್ಯಮದಿಂದ ದೂರದರ್ಶನ ಸುದ್ದಿ ಮಾಧ್ಯಮಗಳನ್ನು ನಡೆಸುತ್ತಿದ್ದಾರೆ.

### (2) ಆಂಗ್ಲ ವಾರ್ತಾಪತ್ರಿಕೆಗಳ ಇತ್ತೀಚಿನ ಬೆಳವಣಿಗೆ (Recent Trends in English News Papers)

ಆಂಗ್ಲ ವಾರ್ತಾಪತ್ರಿಕೆಗಳನ್ನು ರಾಷ್ಟ್ರೀಯ ದೈನಿಕಗಳೆಂದು ಕರೆಯುತ್ತಾರೆ ಉದಾ : ದಿ ಟೈಮ್ಸ್ ಆಫ್ ಇಂಡಿಯಾ, ದಿ ಹಿಂದೂ, ದಿ ಇಂಡಿಯನ್ ಎಕ್ಸ್‌ಪ್ರೆಸ್, ದಿ ಎಕಾನಮಿಕ್ ಟೈಮ್ಸ್, ಹಿಂದೂಸ್ಥಾನ ಟೈಮ್ಸ್, ಡೆಕ್ಕನ್ ಹೆರಾಲ್ಡ್ ಮುಂತಾದವು ರಾಷ್ಟ್ರಾದ್ಯಂತ ಪ್ರಸರಣವಾಗುತ್ತವೆ. ಇತರೆ ಭಾಷಾಪತ್ರಿಕೆಗಳು (Vernacular News Papers) ಆಯಾ ರಾಜ್ಯ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಮಾತ್ರ ಪ್ರಸರಣವನ್ನು ಹೆಚ್ಚಿಸಿಕೊಂಡಿವೆ. ಆಂಗ್ಲ ವಾರ್ತಾ ಪತ್ರಿಕೆಗಳು (1) ವಾರ್ತಾಪತ್ರಿಕೆಗಳು ಪತ್ರಿಕೆಯ ಬೆಲೆ ಇಳಿಕೆ, (2) ವಿವಿಧ ಕೇಂದ್ರಗಳಿಂದ ಮುದ್ರಣ ಕಾರ್ಯ ಆರಂಭ, ಮತ್ತು (3) ಪ್ರಾಯೋಜಕತ್ವಕ್ಕಾಗಿ ಜಾಹೀರಾತುದಾರರ ಮೇಲೆ ಹೆಚ್ಚಿನ ಅವಲಂಬನೆಯ ಮೂಲಕ ವಿದ್ಯುನ್ಮಾನ ಮಾಧ್ಯಮದ ಜೊತೆ ಸ್ಪರ್ಧಿಸಿ ಓದುಗರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿವೆ. ವಿದ್ಯುನ್ಮಾನ ಮಾಧ್ಯಮದ ಮುಂದೆ ಮುದ್ರಣ ಮಾಧ್ಯಮ ಕ್ಷೀಣಿಸುತ್ತದೆ ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದರೂ ಪತ್ರಿಕೆಗಳ ಪ್ರಸರಣ ಮಾತ್ರ ದಿನೇ ದಿನೇ ಹೆಚ್ಚಳವಾಗುತ್ತಿದೆ.

### (3) ದೂರದರ್ಶನದ ಇತ್ತೀಚಿನ ಬೆಳವಣಿಗೆಗಳು (New Faces of Television Channels)

1991ರಲ್ಲಿ ಸರ್ಕಾರಿ ಪ್ರಾಯೋಜಿತ ಏಕೈಕ ದೂರದರ್ಶನ ವಾಹಿನಿ ಭಾರತದಲ್ಲಿತ್ತು. 1998ರಲ್ಲಿ 70 ಖಾಸಗಿ ಉಪಗ್ರಹ ಆಧಾರಿತ ಚಾನೆಲ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು. ಈ ರೀತಿ ಉಪಗ್ರಹ ಆಧಾರಿತ ಚಾನಲ್‌ಗಳ ಹೆಚ್ಚಳವು ಭಾರತದ ಪ್ರಗತಿಯ ಮಾನದಂಡವಾಗಿದೆ.

1991ರಲ್ಲಿ ನಡೆದ ಕೊಲ್ಲಿಯುದ್ಧದ ನೇರ ದೃಶ್ಯಗಳನ್ನು ಸಿಎನ್‌ಎನ್ ವಾಹಿನಿಯಿಂದ ಸಂಕೇತಗಳನ್ನು ಪಡೆದು ದೂರದರ್ಶನವು ಹೆಚ್ಚು ಜನಪ್ರಿಯಗೊಂಡಿತು. ಅದೇ ವರ್ಷ ಹಾಂಕಾಂಗ್ ದೇಶದ ವ್ಯಾಮ್‌ಪೋ ಹುಚಿನ್‌ಸನ್ ಸಮೂಹ (Whampo Hutchinson Group) ದ ಸ್ಟಾರ್ ಟಿವಿಯು ಭಾರತದಲ್ಲಿ ಸಂಕೇತಗಳನ್ನು ಬಿತ್ತರಿಸಲು ಪ್ರಾರಂಭಿಸಿತು. 2000ದ ಇಸವಿಯ ಹೊತ್ತಿಗೆ ಹಲವಾರು ಖಾಸಗಿ ಉಪಗ್ರಹ ಆಧಾರಿತ ಮತ್ತು ಕೇಬಲ್ ಟಿವಿಗಳ ದೇಶೀಯ ಭಾಷೆಗಳಲ್ಲಿ ಕಾರ್ಯಕ್ರಮ ಪ್ರಸರಣದಲ್ಲಿದ್ದವು. ಉದಾಸನ್ ಟಿವಿ, ಈ ನಾಡು ಟಿವಿ, ಉದಯ ಟಿವಿ, ರಾಜ್ ಟಿವಿ ಮತ್ತು ಏಷ್ಯಾನೆಟ್, ಜೀ ಟಿವಿ ಇತ್ಯಾದಿಗಳು ವಿವಿಧ ಭಾಷೆಗಳಲ್ಲಿ ವಾಹಿನಿಗಳನ್ನು ಆರಂಭಿಸಿದವು. ಭಾರತೀಯ ಮೂಲದ ಆಂಗ್ಲ ವಾರ್ತಾ ವಾಹಿನಿಗಳಾದ NDTV 24X7, CNN IBN, ಟೈಮ್ಸ್ ನೌ, ಹೆಡ್‌ಲೈನ್ಸ್ ಟುಡೆ ಇತ್ಯಾದಿಗಳು ಆಂಗ್ಲ ಭಾಷೆ ಮಾತನಾಡುವವರಲ್ಲಿ ಹೆಚ್ಚು ಜನಪ್ರಿಯವಾಗಿವೆ.

ಬಹುರಾಷ್ಟ್ರೀಯ ಕಂಪನಿಗಳ ವಾಹಿನಿಗಳಾದ ಸ್ಟಾರ್ ಟಿವಿ, ಎಂಟಿವಿ, ಚಾನೆಲ್(ವಿ), ಸೋನಿ ಮುಂತಾದ ವಾಹಿನಿಗಳ ಆಗಮನದಿಂದ ದೇಶೀಯ ಯುವಕರ ಮತ್ತು ಸಂಸ್ಕೃತಿಯ ಮೇಲೆ ಕೆಟ್ಟ ಪ್ರಭಾವ ಬೀರುವುದರ ಬಗ್ಗೆ ಆತಂಕವಿತ್ತು. ಆದರೆ ಈ ಬಹುರಾಷ್ಟ್ರೀಯ ವಾಹಿನಿಗಳು ಕಂಡುಕೊಂಡ ಸತ್ಯ ಏನೆಂದರೆ, ಕೌಟುಂಬಿಕ ಕಾರ್ಯಕ್ರಮಗಳು ಭಾರತೀಯ ವೀಕ್ಷಕರನ್ನು ಆಕರ್ಷಿಸುತ್ತವೆ. ಆದ್ದರಿಂದ ಈ ವಾಹಿನಿಗಳು ದೇಶೀಯ ಮನರಂಜನೆಗೆ ಹೆಚ್ಚು ಗಮನ ನೀಡಿವೆ.

ಬಹುತೇಕ ವಾರ್ತಾ ವಾಹಿನಿಗಳು (News Channels) ವಾರದ 24 ಗಂಟೆ (24×7) ವಾರ್ತೆಗಳನ್ನು ಬಿತ್ತರಿಸುತ್ತವೆ. ವಾರ್ತೆಗಳು ನೇರ ಮತ್ತು ಅನೌಪಚಾರಿಕವಾಗಿರುತ್ತವೆ. ಈ ವಾಹಿನಿಗಳು ಸಾರ್ವಜನಿಕ ಚರ್ಚೆಯ ಮೂಲಕ ಹೆಚ್ಚು ಜನರನ್ನು ತಲುಪಲು ಪ್ರಯತ್ನಿಸುತ್ತವೆ. ಹಿಂದಿ, ಇಂಗ್ಲೀಷ್ ಮತ್ತು ಪ್ರಾಂತೀಯ ಭಾಷೆಗಳಲ್ಲಿಯೂ ವಾರ್ತಾವಾಹಿನಿಗಳು ದಿನೇ ದಿನೇ ಹೆಚ್ಚುತ್ತಿವೆ. ರಿಯಾಲಿಟಿ ಕಾರ್ಯಕ್ರಮಗಳು, ಮಾತುಕತೆ, ಸಿನಿಮಾ ಸುದ್ದಿ, ಕೌಟುಂಬಿಕ ಕಾರ್ಯಕ್ರಮಗಳು, ಗಂಭೀರ ಚರ್ಚೆಗಳು, ರಂಜನೆ ಮತ್ತು ಹಾಸ್ಯ ಕಾರ್ಯಕ್ರಮಗಳು ಈ ವಾಹಿನಿಗಳಲ್ಲಿ ಸರಿಸಮಾನ ಪಾಲು ಪಡೆದಿವೆ. ಮನರಂಜನೆಯ ವಾಹಿನಿಗಳಲ್ಲಿ (Entertainment Channles) ನಟಿಸುವ ಕೆಲವರು ಜನಪ್ರಿಯತೆ ಗಳಿಸಿ ಮನೆಮಾತಾಗಿದ್ದಾರೆ. ಉದಾ – ರಿಯಾಲಿಟಿ ಕಾರ್ಯಕ್ರಮವಾದ "ಕೌನ್ ಬನೇಗ ಕರೋಡ್‌ಪತಿ", "ಇಂಡಿಯನ್ ಐಡಲ್", "ಬಿಗ್‌ಬಾಸ್" ಇತ್ಯಾದಿ ಕಾರ್ಯಕ್ರಮಗಳು ಜನಪ್ರಿಯಗೊಂಡಿವೆ. ಇಂತಹ ಕಾರ್ಯಕ್ರಮಗಳು ಪಾಶ್ಚಿಮಾತ್ಯ ಶೈಲಿಯಲ್ಲಿ ರೂಪಿಸಲಾಗುತ್ತಿರುವುದನ್ನು ಮರೆಯಬಾರದು.

### 6.5.4. ಪ್ರಸ್ತುತ ಕಾಲದಲ್ಲಿ ಮಾಧ್ಯಮಗಳ ಪಾತ್ರ (Role of Media in the Contemporary World.)

21ನೇ ಶತಮಾನದ ಸಂವಹನ ತಂತ್ರಜ್ಞಾನವು ಏಕಕಾಲಕ್ಕೆ ಲಕ್ಷಾಂತರ ಜನ ಕ್ಷಣಾರ್ಧದಲ್ಲಿ ಮಾಹಿತಿಯನ್ನು ವಿಶ್ವದ ಮೂಲೆಮೂಲೆಯಲ್ಲಿ ಹಂಚಿಕೊಳ್ಳಬಹುದು. ಮಾಹಿತಿಯನ್ನು ವ್ಯಕ್ತಿಯಿಂದ ವ್ಯಕ್ತಿ ಅಥವಾ ಸಮೂಹಕ್ಕೆ ಮಾತಿನ ಮೂಲಕ ಅಥವಾ ಸಮೂಹ ಮಾಧ್ಯಮಗಳ ಮೂಲಕ ವರ್ಗಾಹಿಸುವ ಸಂವಹನ ಕ್ರಿಯೆಯು ಆಧುನಿಕ ಕಾಲದಲ್ಲಿ ಹೆಚ್ಚು ಮಹತ್ವ ಪಡೆದಿದೆ. ಮಾರ್ಷಲ್ ಮ್ಯಾಕ್‌ಲುಹಾನ (Marshal McLuhan) ಪ್ರಕಾರ ಸಮಾಜವು ಮಾಧ್ಯಮ ನೀಡುವ ಮಾಹಿತಿಗಿಂತ (Content) ಮಾಧ್ಯಮದ ಪ್ರಕಾರದಿಂದ ಪ್ರಭಾವಿತವಾಗುತ್ತದೆ. ವಿದ್ಯುನ್ಮಾನ ಮಾಧ್ಯಮವು ಜಾಗತಿಕ ಗ್ರಾಮ (Global Village) ವನ್ನು ಸೃಷ್ಟಿಸಿದೆ. ಜಾಗತಿಕ ಮಟ್ಟದಲ್ಲಿ ಘಟಿಸುವ ಯಾವುದೇ ಘಟನೆಯಲ್ಲಿ ಭಾಗಿಯಾಗಬಹುದು, ದಿನದ ಇಪ್ಪತ್ತನಾಲ್ಕು ಗಂಟೆ ವಾರ್ತಾವಾಹಿನಿಗಳು ಒಂದು ಭಾಗದ ಸುದ್ದಿಯನ್ನು ಮತ್ತೊಂದು ಭಾಗದಲ್ಲಿ ಪ್ರಸಾರ ಮಾಡುತ್ತೇವೆ. ಪರಸ್ಪರ ಅಂತಃ ಸಂಬಂಧಿ ಪ್ರಪಂಚದಲ್ಲಿ ನಾವು ಬದುಕುತ್ತಿದ್ದೇವೆ.

ಅಂತರ್ಜಾಲವು ಸಂವಹನದ ಕೇಂದ್ರ ಬಿಂದುವಾಗಿದೆ. ಧ್ವನಿ ಗುರುತಿಸುವಿಕೆ, (Voice Recognition) ಬ್ರಾಡ್ ಬ್ಯಾಂಡ್ ಟ್ರಾನ್ಸ್‌ಮಿಷನ್, ವೆಬ್ ಕಾಸ್ಟಿಂಗ್ ಮತ್ತು ಕೇಬಲ್ ಸಂಪರ್ಕ (Cable Links) ಗಳ ತಂತ್ರಜ್ಞಾನ ಪ್ರಗತಿಯಿಂದ ಅಂತರ್ಜಾಲದ ಮೂಲಕ ಮಾಹಿತಿ, ಮನರಂಜನೆ, ಜಾಹೀರಾತು ಮತ್ತು ವಾಣಿಜ್ಯ ಮಾಹಿತಿಗಳು ಪ್ರೇಕ್ಷಕರಿಗೆ (Mass Audiences) ಕ್ಷಣಾರ್ಧದಲ್ಲಿ ತಲುಪುತ್ತದೆ.

ನೆಯ್ಲ್ ಪೋಸ್ಟ್ ಮ್ಯಾನ್ (Neil Post Man) ತನ್ನ ಗ್ರಂಥ "ಸಾವಿನ ಸಂಮ್ಮೋಹಿನಿ" ವ್ಯಾಪಾರಿ ಪ್ರದರ್ಶನ ಕಾಲದಲ್ಲಿ ಸಾರ್ವಜನಿಕ ನಿರ್ವಚನ "(Amusing ourselves to Dealth: Public Discourse in the Age of show Business) ಗ್ರಂಥದಲ್ಲಿ ದೂರದರ್ಶನವು ಗಂಭೀರ ವಿಷಯಗಳನ್ನು ಮನರಂಜನೆಯ ಸರಕನ್ನಾಗಿಸುತ್ತದೆ. ನೆಯ್ಲ್ ಪೋಸ್ಟ್ ಮ್ಯಾನ್ ಪ್ರಕಾರ ಮುದ್ರಣ ಮಾಧ್ಯಮವು ಜನರಲ್ಲಿ ತಾರ್ಕಿಕ ಆಲೋಚನೆಯನ್ನು ಬೆಳೆಸಿದರೆ, ವಿದ್ಯುನ್ಮಾನ ಮಾಧ್ಯಮವು ಮನರಂಜನೆಯನ್ನು ಸೃಷ್ಟಿಸುತ್ತದೆ. ದೂರದರ್ಶನ ಪ್ರಭಾವವಿರುವ ಸಮಾಜದಲ್ಲಿ ಶಿಕ್ಷಣ, ರಾಜಕೀಯವನ್ನು ಕೇವಲ ರಂಜನೆಯ ಮಟ್ಟಕ್ಕೆ ಇಳಿಸಿ, ನಮಗೇನು ಸಿಗದೆ ಸಾವಿನ ಸಂಮ್ಮೋಹಿನಿ ಮಾತ್ರ ದೊರೆಯುತ್ತದೆ.

**ರಾಬರ್ಟ್ ಪುಟ್ನಂ** (Robert Putnam) ಮಾಧ್ಯಮವನ್ನು ಸಾಮಾಜಿಕ ಬಂಡವಾಳ (Social Capital) ಎಂದು ಹೋಲಿಕೆ ಮಾಡಿದ್ದಾರೆ. ಅಂತರ್ ಸಂಬಂಧ, ಪರಸ್ಪರ ಹೊಣೆಗಾರಿಕೆ, ನಂಬಿಕೆ, ನಿಯಮಗಳ ಗ್ರಹಿಕೆ ಮತ್ತು ವರ್ತನೆಯ ಮೇಲೆ ನಿಯಂತ್ರಣ ತರುವ ನಿಯೋಗಿಗಳಾಗಿ ಅದರಲ್ಲೂ ಮುಖ್ಯವಾಗಿ ಸರಿಯಾದ ವರ್ತನಾ ಕ್ರಮವನ್ನು ತರುವ ಸಾಧನಗಳಾಗಿ ಮಾಧ್ಯಮಗಳು ಕಾರ್ಯನಿರ್ವಹಿಸುವುದನ್ನು "ಸಾಮಾಜಿಕ ಬಂಡವಾಳ" ಎಂದಿದ್ದಾರೆ. ರಾಬರ್ಟ್ ಪುಟ್ನಂರ ಗ್ರಂಥ "ಬೌಲಿಂಗ್ ಅಲೋನ್" (Bowling Alone) ದಲ್ಲಿ ಕಳೆದ ಕೆಲವು ದಶಕದಲ್ಲಿ ಸಾಮಾಜಿಕ ಬಂಡವಾಳದ ಕುಸಿತವನ್ನು (Declain) ಗಮನಿಸಿದ್ದಾರೆ. ದೂರದರ್ಶನ ವೀಕ್ಷಣೆಯು ಸಾಮಾಜಿಕ ನಂಬಿಕೆ ಮತ್ತು ಸಾಮೂಹಿಕ ಸದಸ್ಯತ್ವಕ್ಕೆ ಮಾರಕವಾಗಿದೆ. ಇದೇ ಮಾನದಂಡವನ್ನು ಬಳಸಿ ದಿನಪತ್ರಿಕೆಗಳನ್ನು ಓದುವುದರಿಂದ ಸಾಮಾಜಿಕ ನಂಬಿಕೆ ಮತ್ತು ಸಾಮೂಹಿಕ ಸದಸ್ಯತ್ವಕ್ಕೆ ಪೂರಕವಾಗುತ್ತದೆ. ಮಾಧ್ಯಮವು ಒಂದು ಉದ್ದಿಮೆಯಾಗಿ ಮಾಲೀಕತ್ವವು ಹಿಡಿತದಲ್ಲಿರುವುದರಿಂದ ಬಂಡವಾಳಶಾಹಿಗಳ, ಖಾಸಗಿ

ಬಂಡವಾಳಶಾಹಿಗಳ ಹಿತ ಕಾಪಾಡುವುದು ಇವರ ಮೊದಲ ಆದ್ಯತೆಯಾಗಿದೆ ಮತ್ತು ಬಡವರ ಹಿತಾಸಕ್ತಿಗಳು ಕ್ಷೀಣಿಸುತ್ತವೆ ಎಂದಿದ್ದಾರೆ.

ಹಾರ್ಕ್‌ಹೈಮರ್ (Horkheimer) ಮತ್ತು ಅಡೋರ್ನೋ (Adorno)ರವರು ಸಾಂಸ್ಕೃತಿಕ ಉದ್ದಿಮೆ (Cultural Industry) ಯ ಮೇಲೆ ವ್ಯಾಪಕ ಅಧ್ಯಯನ ಮಾಡಿದ್ದಾರೆ. ಸಾಂಸ್ಕೃತಿಕ ಉದ್ದಿಮೆ ಎಂದರೆ ಮನರಂಜನೆ ನೀಡುವ ಸಿನಿಮಾಗಳು, ದೂರದರ್ಶನ, ಸಂಗೀತ, ರೇಡಿಯೋ, ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು. ಸಂಸ್ಕೃತಿಯನ್ನು ಸೃಷ್ಟಿಮಾಡುವುದು ಒಂದು ಪ್ರಕಾರದ ಮಾನದಂಡವಾಗಿರುವುದರಿಂದ ಇದನ್ನು ಲಾಭಕೋರತನಕ್ಕೆ ಉದ್ದಿಮೆದಾರರು ಬಳಸುತ್ತಾರೆ. “ಕಲೆಯು ಕ್ಷೀಣಿಸಿ ವಾಣಿಜ್ಯೀಕರಣಗೊಂಡರೆ, ಸಂಸ್ಕೃತಿಯು ಮನರಂಜನೆಯಾಗಿ ಮಾರ್ಪಾಡುತ್ತದೆ. (Art disappears, Swamped by Commercialization and Culture is replaced by Commercialization)

ಜರ್ಗಿನ್ ಹೆಬರ್‌ಮಾಸ್ (Jurgen Herbermas) ರವರು ಮಾಧ್ಯಮವನ್ನು ಸಾಮಾಜಿಕ ವಲಯ (Public Sphere) ವು ಕ್ಷೀಣಿಸುವಿಕೆ ಎಂದು ವಿಶ್ಲೇಷಿಸಿದ್ದಾರೆ. ಜನಸಾಮಾನ್ಯರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾರ್ವಜನಿಕ ಚರ್ಚೆ ಮೂಲಕ ಜನಾಭಿಪ್ರಾಯ ರೂಪಿಸುವುದನ್ನು ಸಾಮಾಜಿಕ ವಲಯ ಎಂದು ಕರೆದಿದ್ದಾರೆ. ಹೆಬರ್‌ಮಾಸ್‌ರ ಪ್ರಕಾರ ಸಾಮಾಜಿಕ ವಲಯವು ಲಂಡನ್, ಪ್ಯಾರಿಸ್ ಮತ್ತು ಯುರೋಪಿನ ನಗರಗಳ ಕಾಫಿ–ಟೀ ಅಂಗಡಿ ಮತ್ತು ಕ್ಷೌರದ ಅಂಗಡಿಗಳಲ್ಲಿ ಮೊದಲು ಪ್ರಾರಂಭವಾಯಿತು. ಕ್ಷೌರದ ಅಂಗಡಿಗಳಲ್ಲಿನ ಮಾತುಕತೆ ವಿಚಾರ ವಿನಿಮಯವು ಸಾರ್ವಜನಿಕರ ಚರ್ಚೆಯ ಕೇಂದ್ರಗಳಾಗಿ ಪ್ರಜಾಪ್ರಭುತ್ವ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ತಾತ್ವಿಕವಾಗಿ ಹೇಳುವುದಾದರೆ ಸಾರ್ವಜನಿಕ ವಲಯವು ಸಮಾನ ಮನಸ್ಕರ ಮುಕ್ತ ಚರ್ಚೆಯ ಕೇಂದ್ರಗಳಾಗಿರುತ್ತವೆ. ಸಮೂಹ ಮಾಧ್ಯಮಗಳು ಮತ್ತು ಸಮೂಹ ಮನರಂಜನೆಯ ಬೆಳವಣಿಗೆಯಿಂದ ಸಾರ್ವಜನಿಕ ವಲಯವು ಕ್ಷೀಣಿಸಿದೆ. ಜನಾಭಿಪ್ರಾಯವು ಮುಕ್ತ ಮತ್ತು ತಾರ್ಕಿಕ ಚರ್ಚೆಯಿಲ್ಲದೆ ಕೈಚಳಕ ಮತ್ತು ನಿಯಂತ್ರಣ (Manipulation and control) ದಿಂದ ರೂಪುಗೊಳ್ಳುತ್ತದೆ. ಉದಾ : ಜಾಹೀರಾತುಗಳು

ಜೀನ್ ಬುಡ್ರಿಲಾರ್ಡ್ (Jean Baudrillard) ರವರು ಸಮೂಹ ಮಾಧ್ಯಮಗಳ ಪ್ರಭಾವವನ್ನು ಕೃತಕ ನೈಜತೆ (Hyper Reality) ಎಂದು ವ್ಯಾಖ್ಯಾನಿಸಿದ್ದಾರೆ. ಜೀವನವು ದೂರದರ್ಶನದಿಂದ ತುಂಬ ಪ್ರಭಾವಿತವಾಗಿದೆ. ದೂರದರ್ಶನವು ನಮ್ಮ ಜೀವನವನ್ನು ಪ್ರತಿನಿಧಿಸುವ ಬದಲು ನಾವು ಹೇಗಿರಬೇಕು ಎಂದು ನಿರ್ದೇಶಿಸುತ್ತದೆ. ಉದಾಹರಣೆಗೆ 1994–95 ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಓ.ಜೆ. ಸಿಂಸನ್‌ನ ಕೋರ್ಟ್ ವಿಚಾರಣೆಯ ಪ್ರಕರಣ. ಸಿಂಸನ್ ಅಮೇರಿಕದ ಖ್ಯಾತ ಫುಟ್‌ಬಾಲ್ ಆಟಗಾರ ಮತ್ತು ಜನಪ್ರಿಯ ನಟ. ಇವರು ತನ್ನ ಹೆಂಡತಿಯ ಕೊಲೆ ಕೇಸಿನಲ್ಲಿ ದಸ್ತಗಿರಿಯಾಗಿ ಸುದೀರ್ಘ ವಿಚಾರಣೆಯ ನಂತರ ಬಿಡುಗಡೆಯಾದರು. ಈ ಕೇಸಿನ ವಿಚಾರಣೆಯನ್ನು ಅಮೇರಿಕದ 95 ಮಿಲಿಯನ್ ಜನ ವೀಕ್ಷಿಸಿದರು. ಸಿಂಸನ್ ತನ್ನ ದಸ್ತಗಿರಿಯನ್ನು ತಪ್ಪಿಸಿಕೊಳ್ಳಲು ಕ್ಯಾಲಿಫೋರ್ನಿಯ ರಸ್ತೆಯಲ್ಲಿ ವೇಗವಾಗಿ ಕಾರು ಚಲಿಸುವುದನ್ನು ನೇರವಾಗಿ (Live) ಟಿವಿಗಳಲ್ಲಿ ಬಿತ್ತರಿಸಲಾಯಿತು. ಇಷ್ಟೇ ಅಲ್ಲದೆ ಈ ಕೇಸಿನ ಕೋರ್ಟ್ ವಿಚಾರಣೆಯ ನೇರ ದೃಶ್ಯಾವಳಿಗಳು ದೂರದರ್ಶನದಲ್ಲಿ ಬಿತ್ತರಿಸುತ್ತಿದ್ದರು. ಅಮೇರಿಕಾದ ಆರು ದೂರದರ್ಶನ ವಾಹಿನಿಗಳು ಈ ಘಟನೆಯ ಪೂರ್ಣಚಿತ್ರಣವನ್ನು ವಿವರವಾಗಿ ಬಿತ್ತರಿಸಿದವು.

ಅಮೇರಿಕಾದ ಶೇ.90 ದೂರದರ್ಶನ ವೀಕ್ಷಕರು ಈ ವಿಚಾರಣೆಯನ್ನು ನೋಡಿದ್ದಾಗಿ ತಿಳಿಸಿದ್ದಾರೆ. ಸುಮಾರು 2000 ಪತ್ರಕರ್ತರು ಸಿಂಸನ್ ವಿಚಾರಣೆಯನ್ನು ವರದಿ ಮಾಡಿದರು. 80ಕ್ಕೂ ಹೆಚ್ಚು ಪುಸ್ತಕಗಳನ್ನು ಈ ಘಟನೆಗೆ ಸಂಬಂಧಿಸಿದಂತೆ ಪ್ರಕಟಿಸಲಾಯಿತು. ಮಾಧ್ಯಮ ಭಾಷೆಯಲ್ಲಿ ಈ ಘಟನೆಯನ್ನು ವಿವರಿಸುವುದಾದರೆ "ಈ ಶತಮಾನದ ವಿಚಾರಣೆ". ವಿಚಾರಣೆಯು ಕೇವಲ ಕೋರ್ಟ್ ಆವರಣಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅಮೇರಿಕ ಮಾಧ್ಯಮಗಳು ಲಕ್ಷಾಂತರ ಜನ ಮತ್ತು ವರದಿಗಾರರನ್ನು ಈ ವಿಚಾರಣೆಗೆ ಬಳಸಿಕೊಂಡಿತು. ಈ ಪ್ರಕರಣದ ವರದಿಯನ್ನು ಜೀನ್ ಬುರ್ದ್ರಿಲಾರ್ಡ್ ಕೃತಕ ನೈಜತೆ ಎಂದು ವಿವರಿಸುತ್ತಾರೆ. ಯಾವುದೇ ಸತ್ಯ ಸಂಗತಿಗಳು ಇಲ್ಲದಿದ್ದರೂ ಸಮೂಹ ಮಾಧ್ಯಮಗಳು ಹೊಸ ಸತ್ಯ – ಅಂದರೆ ಕೃತಕ ಸತ್ಯವನ್ನು ಮಾಧ್ಯಮ ಚಿತ್ರಣದ ಮೂಲಕ ಸೃಷ್ಟಿಸುತ್ತಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

**ಚಟುವಟಿಕೆ :**

1. ನೀವು ವಾಸಿಸುವ ಪ್ರದೇಶದ ಮಾರುಕಟ್ಟೆಗೆ ಭೇಟಿ ನೀಡಿ, ಪ್ರಮುಖ ವ್ಯಾಪಾರಿಗಳು ಯಾವ ಸಮುದಾಯಕ್ಕೆ ಸೇರಿದ್ದಾರೆ ಎಂದು ಪಟ್ಟಿ ಮಾಡಿರಿ. ಆಭರಣ ಅಂಗಡಿ, ದಿನಸಿ ಅಂಗಡಿ, ಬಟ್ಟೆ ಅಂಗಡಿ, ಇತರೇ ಸಾಮಾನು ಅಂಗಡಿಗಳು ಯಾವ ಸಮುದಾಯದ ಜನರ ಮಾಲೀಕತ್ವದಲ್ಲಿದೆ ತಿಳಿಯಿರಿ. ಈ ರೀತಿಯ ಅಂಗಡಿಗಳಿಗೆ ಭೇಟಿ ನೀಡಿ ಅವರ ವ್ಯಾಪಾರವು ವಂಶಪಾರಂಪರ್ಯವೇ ತಿಳಿಯಿರಿ.
2. ಯಾವುದಾದರು ಅಂತರ್ಜಾಲ ಅಥವಾ ದಿನಪತ್ರಿಕೆಯಲ್ಲಿ ವೈವಾಹಿಕ ಅಂಕಣದ ರೀತಿಯನ್ನು ಗಮನಿಸಿ. ಉದಾ : ಶಾದಿ.ಕಾಮ್‌ನಲ್ಲಿ ಜಾತಿ ಅಥವ ಸಮುದಾಯವನ್ನು ತಿಳಿಸಲಾಗಿದೆಯೇ? ನೋಡಿ. ಈ ಅಂಕಣದಲ್ಲಿ ಜಾತಿ/ಸಮುದಾಯವನ್ನು ಹೆಚ್ಚಾಗಿ ಬಳಸಿದ್ದರೆ, ಜಾತಿಯು ವಿವಾಹದ ಮೇಲೆ ಹಿಂದಿನಂತೆ ಕಾರ್ಯನಿರ್ವಹಿಸುತ್ತದೆಯೇ? ಅಥವಾ ಜಾತಿಯ ಪಾತ್ರ ಬದಲಾಗಿದೆಯೇ ? ಚರ್ಚಿಸಿ.

## ನೆನಪಿನಲ್ಲಿಡಬೇಕಾದ ಅಂಶಗಳು

- **ಮಾರುಕಟ್ಟೆ ಎಂದರೆ –** ಇದು ಒಂದು ವ್ಯವಸ್ಥೆಯಾಗಿ ಸರಕು ಮತ್ತು ಸೇವೆಗಳ ವಿನಿಮಯವಾಗಿದೆ. ವಿವಿಧ ವ್ಯವಸ್ಥೆಗಳು, ಸಂಸ್ಥೆಗಳು, ನಿಯಮ ಮತ್ತು ಸಂಬಂಧಗಳು ಮತ್ತು ಮೂಲಭೂತ ಪರಿಕರಗಳು ಮಾರುಕಟ್ಟೆಯಲ್ಲಿ ಸೇರಿರುತ್ತವೆ.

- **ಮಾರುಕಟ್ಟೆಯ ಲಕ್ಷಣಗಳು –**
  - ಮಾರುಕಟ್ಟೆಯು ಒಂದು ಸ್ಥಳವಾಗಿದ್ದು ಸರಕು ಮತ್ತು ಸೇವೆಗಳ ವಿನಿಮಯ
  - ಮಾರುಕಟ್ಟೆಯು ಕೇವಲ ಭೌತಿಕ ಸ್ಥಳವಲ್ಲ. ಕೊಳ್ಳುವವರು ಮತ್ತು ಮಾರುವವರ ಕೂಟ.
  - ಮಾರುಕಟ್ಟೆಯು ವ್ಯಾಪಾರ ಅಥವಾ ವ್ಯವಹಾರವಾಗಿದೆ.
  - ಆರ್ಥಿಕ ಮತ್ತು ಸಾಂಸ್ಥಿಕ ಚಟುವಟಿಕೆಗಳೂ ಮಾರುಕಟ್ಟೆಯ ಕೇಂದ್ರ ಬಿಂದು.

- **ಅಗೋಚರ ಮಾರುಕಟ್ಟೆ (ವರ್ಚುಯಲ್ ಮಾರುಕಟ್ಟೆ) –** ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಆಧಾರದಿಂದ ಮಾರುಕಟ್ಟೆ ಪ್ರಕ್ರಿಯೆಗಳು ಆನ್‌ಲೈನ್‌ನಲ್ಲಿ ಏರ್ಪಡುವ ಕ್ರಿಯೆ. ಇ–ಕಾಮರ್ಸ್, ಆನ್‌ಲೈನ್ ಪರ್ಚೆಸ್, ಶೇರು ಮಾರುಕಟ್ಟೆಯಲ್ಲಿ ಆನ್‌ಲೈನ್ ಮಾರ್ಕೆಟಿಂಗ್ ಇತ್ಯಾದಿಗಳು ಅಗೋಚರ ಮಾರುಕಟ್ಟೆಗಳಾಗಿವೆ.

- **ಮ್ಯಾಕ್‌ಡೋನಾಲ್ಡೀಕರಣ :** ಅಮೆರಿಕಾದ ಸಮಾಜಶಾಸ್ತ್ರಜ್ಞ ಜಾರ್ಜ್ ರಿಟ್‌ಜರ್ ಕೈಗಾರಿಕಾ ದೇಶದಲ್ಲಿ ನಡೆಯುವ ಆರ್ಥಿಕ ಚಟುವಟಿಕೆಗಳನ್ನು ವಿವರಿಸಲು ಮ್ಯಾಕ್‌ಡೋನಾಲ್ಡ್ ಎಂಬ ಅಲಂಕಾರಿಕ ಪದವನ್ನು ಬಳಸುತ್ತಾರೆ. ಸಮಾಜ ಮ್ಯಾಕ್‌ಡೋನಾಲ್ಡೀಕರಣವಾಗುತ್ತಿದೆ ಎಂದು ವಿಶ್ಲೇಷಿಸಿದ್ದಾರೆ.

- **ಮ್ಯಾಕ್‌ಡೋನಾಲ್ಡೀಕರಣ ಎಂದರೆ :** ಅಮೇರಿಕ ಮತ್ತು ಇತರೇ ರಾಷ್ಟ್ರಗಳಲ್ಲಿ ಶೀಘ್ರ ಆಹಾರ (ಫಾಸ್ಟ್ – ಫುಡ್) ವಿತರಿಸುವ ಹೋಟೆಲ್‌ಗಳ ತಂತ್ರಗಾರಿಕೆಗಳು ಬೇರೆ ಬೇರೆ ವಲಯಗಳಿಗೆ ವಿಸ್ತರಿಸಿ ಪ್ರಾಬಲ್ಯ ಸಾಧಿಸುತ್ತಿದೆ.

- **ಮ್ಯಾಕ್‌ಡೋನಾಲ್ಡ್ ಹೋಟೆಲ್‌ನ ನಾಲ್ಕು ತತ್ವಗಳು :**

  1. ದಕ್ಷತೆ 2. ವಿಶ್ವಾಸಾರ್ಹತೆ 3. ಪ್ರಮಾಣಬದ್ಧ ಮತ್ತು ಏಕರೀತಿಯ ಸೇವೆ

  4. ಸ್ವಯಂಚಾಲನೆಯ ಮೂಲಕ ನಿಯಂತ್ರಣ 5. ಅತಿಯಾದ ಅವೈಚಾರಿಕತೆ.

- **ಸಮೂಹ ಮಾಧ್ಯಮಗಳು**

  ಕಡಿಮೆ ಸಮಯದಲ್ಲಿ ಹೆಚ್ಚು ಜನರಿಗೆ ಮಾಹಿತಿ ತಲುಪಿಸುವ ಸಂವಹನ ವ್ಯವಸ್ಥೆಗೆ ಸಮೂಹ ಮಾಧ್ಯಮ ಎನ್ನುವರು.

- **ಸಮೂಹ ಮಾಧ್ಯಮದ ಪ್ರಕಾರಗಳು**
  - ಮುದ್ರಣ ಮಾಧ್ಯಮ (ದಿನಪತ್ರಿಕೆ ಮತ್ತು ಮ್ಯಾಗ್‌ಜೈನ್‌ಗಳು)
  - ವಿದ್ಯುನ್ಮಾನ ಮಾಧ್ಯಮ – ರೇಡಿಯೋ, ಟಿವಿ, ಅಂತರ್ಜಾಲ, ಸಾಮಾಜಿಕ ಸುರಕ್ಷತೆಗಳು
- **ಮಾಧ್ಯಮದ ಕಾರ್ಯಗಳು :**

  ಮಾಹಿತಿ, ಮನರಂಜನೆ ನಿರಂತರತೆ, ಹೊಂದಾಣಿಕೆ, ಕ್ರೋಡಿಕರಣ, ಸಮಾಜ ಸುಧಾರಣೆ, ರಾಷ್ಟ್ರೀಯ ಪ್ರಜ್ಞೆ.
- **ಕನ್ನಡ ದಿನಪತ್ರಿಕೆಗಳು :**

  ಪ್ರಜಾವಾಣಿ, ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಉದಯವಾಣಿ ಮುಂತಾದವು
- **ಟಿವಿ ಮಾಧ್ಯಮ**

  ಟಿವಿ–9, ಸುವರ್ಣವಾರ್ತೆಗಳು, ಕಸ್ತೂರಿ, ಸಮಯ, ಜನಶ್ರೀ, ರಾಜ್ ನ್ಯೂಸ್, ಈ ಟಿವಿ ನ್ಯೂಸ್ ಇತ್ಯಾದಿಗಳು ಕನ್ನಡದ ಪ್ರಮುಖ ವಾರ್ತಾ ವಾಹಿನಿಗಳು.

  ದೂರದರ್ಶನವು ಮೊದಲಬಾರಿಗೆ ಸೆಪ್ಟೆಂಬರ್ 1959ರಲ್ಲಿ ಕೃಷಿ ದರ್ಶನ ಕಾರ್ಯಕ್ರಮ ಬಿತ್ತರಿಸುವ ಮೂಲಕ ದೇಶದ ಮೊದಲ ಸಾರ್ವಜನಿಕ ವಾಹಿನಿಯಾಗಿದೆ. ಡಿಡಿ ಚಂದನ ವಾಹಿನಿಯು ಕನ್ನಡ ಭಾಷೆಗೆ ಸೀಮಿತವಾಗಿರುವ ವಾಹಿನಿ.

# ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು.**

1. "ವೆಲ್ತ್ ಆಫ್ ನೇಷನ್ಸ್" ಕೃತಿಯ ಲೇಖಕ ಯಾರು ?
2. ತಟಸ್ಥ ನೀತಿಯ (Laissez fair) ಮತ್ತೊಂದು ಹೆಸರೇನು ?
3. www. ಏನನ್ನು ಸೂಚಿಸುತ್ತದೆ.
4. World wide web ಕಂಡುಹಿಡಿದವರು ಯಾರು?
5. TRP ಯನ್ನು ವಿಸ್ತರಿಸಿ.
6. ಭಾರತದ ಒಂದು ವ್ಯಾಪಾರಿ ಸಮುದಾಯವನ್ನು ತಿಳಿಸಿ.
7. 'ಏಷ್ಯನ್ ಡ್ರಾಮ' ಗ್ರಂಥದ ಕರ್ತೃ ಯಾರು ?
8. ಮಾರುಕಟ್ಟೆ ಒಂದು ಸಾಮಾಜಿಕ ಸಂಸ್ಥೆಯೆ?
9. ಮಾರುಕಟ್ಟೆಯಲ್ಲಿ "ಕಾಣದ ಕೈ" ಎಂಬ ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು?
10. ವಾರದ ಸಂತೆಗೆ ಒಂದು ಉದಾಹರಣೆ ನೀಡಿರಿ.
11. "ದೊರಾಯಿ ಸಂತೆ"ಯನ್ನು ಅಧ್ಯಯನ ಮಾಡಿದವರು ಯಾರು?
12. ಜಾತಿ ಆಧಾರಿತ ವ್ಯಾಪಾರಿ ಸಮುದಾಯಕ್ಕೆ ಒಂದು ಉದಾಹರಣೆ ನೀಡಿರಿ.
13. ಪ್ರಾಚೀನ ಭಾರತದ ವರ್ಣ ವ್ಯವಸ್ಥೆಯಲ್ಲಿ ಯಾವ ವರ್ಣವು ವ್ಯಾಪಾರೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿತು?
14. ಪುಷ್ಕರ ವಾರ್ಷಿಕ ಜಾತ್ರೆ ಯಾವ ರಾಜ್ಯದಲ್ಲಿ ನಡೆಯುತ್ತದೆ?
15. ಆಗೋಚರ ಮಾರುಕಟ್ಟೆಗೆ ಇರುವ ಒಂದು ಹೆಸರನ್ನು ತಿಳಿಸಿ.
16. "ಟೆಲಿಶಾಪಿಂಗ್" ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದವರು ಯಾರು?
17. ಯಾವುದಾದರೂ ಎರಡು ಮುದ್ರಣ ಮಾಧ್ಯಮಗಳನ್ನು ತಿಳಿಸಿರಿ.
18. ಯಾವುದಾದರೂ ಎರಡು ವಿದ್ಯುನ್ಮಾನ ಮಾಧ್ಯಮಗಳನ್ನು ತಿಳಿಸಿರಿ.
19. ಮುದ್ರಣಯಂತ್ರವನ್ನು ಮೊದಲು ಕಂಡುಹಿಡಿದವರು ಯಾರು?
20. ಭಾರತದ ಪ್ರಥಮ ವಾರ್ತಾ ಪತ್ರಿಕೆ ಯಾವುದು?
21. LAN ನ್ನು ವಿಸ್ತರಿಸಿರಿ.
22. ಉನ್ಮಾದನಕಾರಿ ಪತ್ರಿಕೋದ್ಯಮ ಎಂದರೇನು?
23. ಸಮೂಹ ಮಾಧ್ಯಮವನ್ನು 'ಸಾಮಾಜಿಕ ಬಂಡವಾಳ'ವೆಂದು ಕರೆದವರು ಯಾರು?
24. 'ದೂರದರ್ಶನ, ಗಂಭೀರ ವಿಷಯಗಳನ್ನು ಮನರಂಜನೆಯ ಸರಕನ್ನಾಗಿಸುತ್ತದೆ' ಎಂದು ಹೇಳಿದವರು ಯಾರು?

25. ಸಮೂಹ ಮಾಧ್ಯಮವನ್ನು ಸಾಂಸ್ಕೃತಿಕ ಉದ್ದಿಮೆ ಎಂದು ಕರೆದವರು ಯಾರು?
26. ಮಾಧ್ಯಮವನ್ನು ಸಾಮಾಜಿಕ ವಲಯದ ಕ್ಷೀಣಿಸುವಿಕೆ ಎಂದು ವಿಶ್ಲೇಷಿಸಿದವರು ಯಾರು?
27. "ಸಮೂಹ ಮಾಧ್ಯಮಗಳ" ಪ್ರಭಾವವನ್ನು ಕೃತಕ ನೈಜತೆ ಎಂದು ವ್ಯಾಖ್ಯಾನಿಸಿದವರು ಯಾರು?
28. ಯಾವ ದಿನ ದೊರಾಯಿ ವಾರದ ಸಂತೆ ನಡೆಯುತ್ತದೆ?
29. ಯಾವ ಅಂಚಿನ ಸಮೂಹ ಉಪ್ಪಿನ ವ್ಯಾಪಾರದಲ್ಲಿ ತೊಡಗಿದ್ದರು?
30. ಪುಷ್ಕರ ಜಾತ್ರೆಯು ಯಾವ ಮಾಸದಲ್ಲಿ ನಡೆಯುತ್ತದೆ?
31. ಪ್ಯಾರಿಸ್ ನಗರದಲ್ಲಿ ಯಾರು ವಾರ್ತಾ ಸೇವೆಯನ್ನು ಆರಂಭಿಸಿದರು?
32. ಸಂವದ್ ಕೌಮುದಿ ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?
33. ಸೋಮೆ ಪ್ರಕಾಶನ ಯಾರು ಪ್ರಾರಂಭಿಸಿದರು?
34. ಟೈಮ್ಸ್ ಆಫ್ ಇಂಡಿಯಾ ಯಾವ ವರ್ಷ ಪ್ರಾರಂಭವಾಯಿತು?
35. ಮಂಗಳೂರು ಸಮಾಚಾರ ಪತ್ರಿಕೆಯನ್ನು ಯಾರು ಪ್ರಾರಂಭಿಸಿದರು?
36. ಯಾವ ವರ್ಷ ಕಲ್ಕಾತ್ತ ಮತ್ತು ಚೆನ್ನೈನಲ್ಲಿ ಹ್ಯಾಮ್ ಬ್ರಾಡ್‌ಕಾಸ್ಟಿಂಗ್ ಕ್ಲಬ್ ಪ್ರಾರಂಭವಾಯಿತು?
37. ಆಕಾಶವಾಣಿಯ ಕೇಂದ್ರ ಕಛೇರಿ ಎಲ್ಲಿದೆ?
38. ಯಾವ ಸಿನಿಮಾದಲ್ಲಿ ರೇಡಿಯೋ ಅನ್ನು ಸಂವಹನ ಮಾಧ್ಯಮವಾಗಿ ಬಳಸಲಾಗಿದೆ?
39. 1959 ರಲ್ಲಿ ಯಾವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು ಪ್ರಯೋಗಾರ್ಥವಾಗಿ ದೂರದರ್ಶನದಲ್ಲಿ ಬಳಸಲಾಯಿತು?
40. 'SITE' ಅನ್ನು ವಿಸ್ತರಿಸಿ.
41. ಕನ್ನಡದ ಯಾವುದಾದರೊಂದು ವಾರ್ತಾ ಟಿವಿಚಾನೆಲ್‌ನ್ನು ತಿಳಿಸಿ.
42. ಆಂಗ್ಲ ಭಾಷೆಯ ಒಂದು ವಾರ್ತಾ ಟಿವಿ ಚಾನೆಲ್ ಅನ್ನು ಹೆಸರಿಸಿ.
43. DARPA ಅನ್ನು ವಿಸ್ತರಿಸಿ.
44. ನ್ಯೂಸ್ ಕಾರ್ಪೋರೇಷನ್ನಿನ ಮಾಲೀಕರು ಯಾರು?
45. ಯಾವುದಾದರೊಂದು ಪ್ರಮುಖ ಆಂಗ್ಲ ಪತ್ರಿಕೆಯನ್ನು ತಿಳಿಸಿ.
46. ಯಾವುದಾದರೊಂದು ಪ್ರಮುಖ ಕನ್ನಡ ಪತ್ರಿಕೆಯನ್ನು ತಿಳಿಸಿ.
47. ವಿದ್ಯುನ್ಮಾನ ಮಾಧ್ಯಮವು ಜಾಗತಿಕ ಗ್ರಾಮವನ್ನು ನಿರ್ಮಿಸಿದೆ – ಎಂದವರು ಯಾರು?
48. ಕನ್ನಡ ಪತ್ರಿಕಾ ರಂಗದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?
49. ವೃತ್ತಾಂತ ಚಿಂತಾಮಣಿ ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?

**ಎರಡು ಅಂಕದ ಪ್ರಶ್ನೆಗಳು.**

50. ಮಾರುಕಟ್ಟೆ ಎಂದರೇನು ?
51. ಮಾರುಕಟ್ಟೆಯ ಎರಡು ಲಕ್ಷಣಗಳನ್ನು ತಿಳಿಸಿ.

52. ಅಗೋಚರ ಮಾರುಕಟ್ಟೆ ಎಂದರೇನು ?
53. ಯಾವುದಾದರೂ ಎರಡು ಆನ್–ಲೈನ್ ಶಾಪಿಂಗ್ ತಾಣಗಳನ್ನು ತಿಳಿಸಿ.
54. ಸಾಮಾಜಿಕ ಸಂಪರ್ಕ ತಾಣ ಎಂದರೇನು ?
55. ಜಾರ್ಜ್ ರಿಟ್ಜರ್ ಪಟ್ಟಿ ಮಾಡಿದ ಮ್ಯಾಕ್‌ಡೋನಾಲ್ಡ್ ಕಂಪನಿಯ ನಿಯಮಗಳನ್ನು ತಿಳಿಸಿ.
56. ಅಂತರ್ಜಾಲ ಎಂದರೇನು ?
57. ಸಮೂಹ ಮಾಧ್ಯಮ ಎಂದರೇನು ?
58. ವಾರದ ಸಂತೆ ಎಂದರೇನು ?
59. ತಮಿಳುನಾಡಿನ ಜಾತಿ ಆಧಾರಿತ ಒಂದು ಸಮುದಾಯವನ್ನು ಹೆಸರಿಸಿರಿ.
60. ಭಾರತದ ಎರಡು ವ್ಯಾಪಾರಿ ಸಮುದಾಯಗಳನ್ನು ತಿಳಿಸಿ.
61. ಮಾರ್ವಾಡಿ ಸಮುದಾಯಕ್ಕೆ ಸೇರಿದ ಭಾರತದ ಯಾವುದಾದರೂ ಎರಡು ಕೈಗಾರಿಕೋದ್ಯಮ ಕುಟುಂಬಗಳನ್ನು ಹೆಸರಿಸಿರಿ.
62. ದೂರದರ್ಶನದ ಜನಪ್ರಿಯತೆಗೆ ಕಾರಣವಾದ ಎರಡು ಮಹಾಕಾವ್ಯಗಳ ಹೆಸರು ತಿಳಿಸಿ.
63. ಸಮೂಹ ಮಾಧ್ಯಮದ ಯಾವುದಾದರೂ ಎರಡು ಕಾರ್ಯಗಳನ್ನು ಹೆಸರಿಸಿರಿ.
64. ಸಮೂಹ ಮಾಧ್ಯಮದ ಎರಡು ಪ್ರಕಾರಗಳನ್ನು ತಿಳಿಸಿರಿ.
65. ವಾರ್ತಾ ಪತ್ರಿಕೆಗಳ ತಯಾರಿಕೆಯಲ್ಲಿ ತಂತ್ರಜ್ಞಾನದ ಬಳಕೆಯಿಂದ ಆದ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿರಿ.
66. ಕನ್ನಡದ ಜನಪ್ರಿಯ ವಾರ್ತಾ ಪತ್ರಿಕೆಗಳೆರಡನ್ನು ತಿಳಿಸಿ.
67. ಕನ್ನಡದ ಯಾವುದಾದರೂ ಎರಡು ಜನಪ್ರಿಯ ವಾರ್ತಾ ವಾಹಿನಿಗಳ (News channels) ಹೆಸರಿಸಿರಿ.
68. ದೂರದರ್ಶನದ ಅಳತೆ ಬಿಂದು (TRP) ಎಂದರೇನು?
69. ಅಂತರ್ಜಾಲದ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿರಿ.
70. ಯಾವುದಾದರೂ ಎರಡು ಸಾಮಾಜಿಕ ಸಂಪರ್ಕ ತಾಣಗಳನ್ನು ಹೆಸರಿಸಿರಿ.
71. ರೂಪರ್ಟ್ ಮರ್ಡೋಕ್ ಪತ್ರಿಕೋದ್ಯಮದಲ್ಲಿ ಯಾವ ವಿಚಾರಗಳಿಗೆ ಹೆಚ್ಚಿನ ಮನ್ನಣೆ ನೀಡಿದರು?
72. ಆಂಗ್ಲ ಭಾಷೆಯ ಯಾವುದಾದರೂ ಎರಡು ದಿನಪತ್ರಿಕೆಗಳನ್ನು ತಿಳಿಸಿ.
73. ಆಂಗ್ಲ ಭಾಷೆಯ ಯಾವುದಾದರೂ ಎರಡು ವಾರ್ತಾ ವಾಹಿನಿಗಳನ್ನು (News Channels) ತಿಳಿಸಿ.
74. ಮ್ಯಾಕ್‌ಡೊನಾಲ್ಡೀಕರಣ ಎಂದರೇನು?

## ಐದು ಅಂಕದ ಪ್ರಶ್ನೆಗಳು

75. ಕನ್ನಡದ ಐದು ವಾರ್ತಾವಾಹಿನಿಗಳನ್ನು (News Channels) ವಿವರಿಸಿ.

76. ವಾರದ ಸಂತೆ (ಮಾರುಕಟ್ಟೆ) ಯನ್ನು ಸಾಮಾಜಿಕ ಸಂಸ್ಥೆಯಾಗಿ ವ್ಯಾಖ್ಯಾನಿಸಿ.
78. ಬಸ್ತರ್ ಬುಡಕಟ್ಟು ಮಾರುಕಟ್ಟೆಯ ಬಗ್ಗೆ ಟಿಪ್ಪಣಿ ಬರೆಯಿರಿ.
79. ಬ್ರಿಟಿಷರ ಆಳ್ವಿಕೆಯಲ್ಲಿ ಉಗಮಗೊಂಡ ವ್ಯಾಪಾರೀ ಸಮುದಾಯಗಳನ್ನು ತಿಳಿಸಿ.
80. ಪುಷ್ಕರ್ ಜಾತ್ರೆಯ ಬಗ್ಗೆ ಟಿಪ್ಪಣಿ ಬರೆಯಿರಿ.
81. ಸಾಮಾಜಿಕ ಸಂಪರ್ಕ ತಾಣಗಳ ಬಗ್ಗೆ ಟಿಪ್ಪಣಿ ಬರೆಯಿರಿ.
82. ದೂರದರ್ಶನದ ಟಿ.ಆರ್.ಪಿ ಹೆಚ್ಚಳಕ್ಕೆ ಕಾರಣವಾದ ಸಂಗತಿಗಳನ್ನು ತಿಳಿಸಿ.
83. ಆಕಾಶವಾಣಿಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
84. ಕನ್ನಡದ ಐದು ದಿನಪತ್ರಿಕೆಗಳನ್ನು ವಿವರಿಸಿ.
85. ಮಾರುಕಟ್ಟೆ ಎಂದರೇನು? ಅದರ ಲಕ್ಷಣಗಳನ್ನು ವಿವರಿಸಿ.
86. ಮಾರುಕಟ್ಟೆ ಮತ್ತು ಅರ್ಥವ್ಯವಸ್ಥೆಯ ಬಗ್ಗೆ ಸಮಾಜಶಾಸ್ತ್ರೀಯ ದೃಷ್ಟಿಕೋನವನ್ನು ವಿವರಿಸಿ.
87. ದೊರಾಯಿ ಬುಡಕಟ್ಟು ಮಾರುಕಟ್ಟೆಯ ರಚನೆಯನ್ನು ವಿವರಿಸಿ.
88. ತಮಿಳುನಾಡಿನ ನಗರ್ತರ ಜಾತಿ ಆಧಾರಿತ ವ್ಯಾಪಾರದ ಬಗ್ಗೆ ವಿವರಣೆ ನೀಡಿ.
89. ಮಾರವಾಡಿ ವ್ಯಾಪಾರಿ ಸಮುದಾಯದ ಬೆಳವಣಿಗೆಯನ್ನು ವಿವರಿಸಿ.
90. ಭಾರತದ ಆರಂಭಿಕ ವಾರ್ತಾಪತ್ರಿಕೆಗಳ ಪಟ್ಟಿ ನೀಡಿರಿ.
91. ವಾರ್ತಾಪತ್ರಿಕೆ ತಯಾರಿಕೆಯಲ್ಲಿ ತಂತ್ರಜ್ಞಾನದ ಪಾತ್ರವನ್ನು ವಿವರಿಸಿ.
92. ರೂಪರ್ಟ್ ಮರ್ಡೋಕರ ಬಗ್ಗೆ ಟಿಪ್ಪಣಿ ಬರೆಯಿರಿ.
93. ಮುದ್ರಣ ಮಾಧ್ಯಮದ ಇತ್ತೀಚಿನ ಬೆಳವಣಿಗೆಯನ್ನು ವಿಶ್ಲೇಷಿಸಿ.
94. ಆಂಗ್ಲ ಪತ್ರಿಕಾ ಮಾಧ್ಯಮದ ಇತ್ತೀಚಿನ ಬೆಳವಣಿಗೆಯನ್ನು ವಿಶ್ಲೇಷಿಸಿ.
95. ವಿದ್ಯುನ್ಮಾನ ಮಾಧ್ಯಮಗಳ (Television channels) ಇತ್ತೀಚಿನ ಬೆಳವಣಿಗೆಯನ್ನು ವಿವರಿಸಿ.
96. ದೂರದರ್ಶನದ ಟಿ.ಆರ್.ಪಿ. ಹೆಚ್ಚಳಕ್ಕೆ ಕಾರಣವಾದ ಸಂಗತಿಗಳನ್ನು ವಿವರಿಸಿ.

**ಹತ್ತು ಅಂಕದ ಪ್ರಶ್ನೆಗಳು**

97. ಸಮೂಹ ಮಾಧ್ಯಮಗಳ ಪ್ರಕಾರಗಳನ್ನು ವಿವರಿಸಿ.
98. ಸಮೂಹ ಮಾಧ್ಯಮಗಳ ಕಾರ್ಯಗಳನ್ನು ವಿವರಿಸಿ.
99. ಅಗೋಚರ ಮಾರುಕಟ್ಟೆಯ ಬಗ್ಗೆ ವಿವರಿಸಿ.
100. ಸಾಂಪ್ರದಾಯಿಕ ವ್ಯಾಪಾರಿ ಸಮುದಾಯಗಳ ಸಾಮಾಜಿಕ ಸಂಘಟನೆಯನ್ನು ವಿವರಿಸಿ.
101. ಸಮೂಹ ಮಾಧ್ಯಮಗಳ ಪ್ರಸ್ತುತ ಸಮಾಜದಲ್ಲಿ ಪಾತ್ರವನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿ.

# ಅಧ್ಯಾಯ – 7

## ಸಾಮಾಜಿಕ ಚಳುವಳಿ

ವಿದ್ಯಾರ್ಥಿಯು
- ವಿದ್ಯಾರ್ಥಿಯು ಭಾರತೀಯ ಸಮಾಜದ ಸಾಮಾಜಿಕ ಚಳುವಳಿಯ ಬಗ್ಗೆ ತಾರ್ಕಿಕ ದೃಷ್ಟಿಕೋನ ಬೆಳೆಸಿಕೊಳ್ಳುತ್ತಾನೆ.
- ಭಾರತೀಯರ ವಿವಿಧ ಅವಶ್ಯಕತೆಗಳನ್ನು ಅರ್ಥೈಸಿಕೊಳ್ಳುತ್ತಾರೆ.
- ಸಾಮಾಜಿಕ ಚಳುವಳಿಯ ಕಾರಣ, ಪರಿಣಾಮಗಳನ್ನು ವಿಶ್ಲೇಷಿಸಬಹುದು.
- ವಿವಿಧ ಸಮುದಾಯದ ಹಕ್ಕುಗಳನ್ನು ತಿಳಿದು ಗೌರವಿಸುವುದನ್ನು ಕಲಿಯುತ್ತಾರೆ.

**ಪಠ್ಯ ವಿಷಯ ರೂಪರೇಖೆ**

ಸಾಮಾಜಿಕ ಚಳುವಳಿಯ ಅರ್ಥ, ಮೂಲಾಂಶಗಳು, ಮತ್ತು ಪ್ರಕಾರಗಳು.
ರೈತರ ಹೋರಾಟ – ಪ್ರಕಾರಗಳು, ಕರ್ನಾಟಕದ ರೈತರ ಚಳುವಳಿಗೆ ಕಾರಣಗಳು.
ಹಿಂದುಳಿದ ಮತ್ತು ದಲಿತ ಚಳುವಳಿ.
ಮಹಿಳಾ ಚಳುವಳಿ – ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲ

### 7.1 ಭಾರತದಲ್ಲಿ ಸಾಮಾಜಿಕ ಚಳುವಳಿ (Social Movements in India)

#### ಸಾಮಾಜಿಕ ಚಳುವಳಿಯ ಅರ್ಥ ಮತ್ತು ವ್ಯಾಖ್ಯೆಗಳು (Meaning & Definitions)

ಸಾಮಾಜಿಕ ಚಳುವಳಿಯು ಸಾಮಾಜಿಕ ಪ್ರಗತಿಯ ಒಂದು ಭಾಗ. ಸ್ಥಾಪಿತ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಯ ವಿರುದ್ಧ ಉಂಟಾಗುವ ಸಾಮಾಜಿಕ ಅತೃಪ್ತಿಯ ಸಾಮಾಜಿಕ ಚಳುವಳಿಯನ್ನು ಹುಟ್ಟುಹಾಕುತ್ತದೆ.

**ಬ್ಲೂಮರ್‌ರವರ ಪ್ರಕಾರ :** "ಸಾಮೂಹಿಕ ಪ್ರಯತ್ನದ ಮೂಲಕ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಕ್ರಮವನ್ನು ಸಾಮಾಜಿಕ ಚಳುವಳಿ" ಎಂದು ವ್ಯಾಖ್ಯಾನಿಸಿದ್ದಾರೆ.

**ಪಾಲ್ ವಿಲ್ಕಿನ್‌ಸನ್ :** "ಸಾಮಾಜಿಕ ಪ್ರಕ್ರಮದಲ್ಲಿ ಸಾಂಸ್ಥೀಕರಣವಲ್ಲದ ಮಾರ್ಗದಲ್ಲಿ ಪರಿವರ್ತನೆ ತರಲು ಅಥವಾ ವಿರೋಧಿಸಲು ಸಂಘಟಿತ ಹೋರಾಟವನ್ನು ಸಾಮಾಜಿಕ ಚಳುವಳಿ" ಎಂದು ವ್ಯಾಖ್ಯಾನಿಸಿದ್ದಾರೆ.

**ಎಂ. ಎಸ್.ಎ. ರಾವ್ :** "ಸಾಮೂಹಿಕ ಕ್ರೋಡೀಕರಣ ಮತ್ತು ಸಿದ್ಧಾಂತದ ಮೂಲಕ ಒಂದು ಸಮಾಜದ ಆಂಶಿಕ ಭಾಗ ಅಥವಾ ಪೂರ್ಣ ಭಾಗದ ಪರಿವರ್ತನೆ ತರುವ ಸಂಘಟಿತ ಪ್ರಯತ್ನವನ್ನು ಸಾಮಾಜಿಕ ಚಳುವಳಿ" ಎಂದು ಅರ್ಥೈಸಿದ್ದಾರೆ.

### ಸಾಮಾಜಿಕ ಚಳುವಳಿಯ ಮೂಲಾಂಶಗಳು. (Major Components of Social movements)

**ಎಂ.ಎಸ್.ಎ. ರಾವ್** ರವರು ತಮ್ಮ ಸಂಪಾದಿತ ಕೃತಿ "ಭಾರತದಲ್ಲಿ ಸಾಮಾಜಿಕ ಚಳುವಳಿ" (Social Movement in India) ಯಲ್ಲಿ ಸಿದ್ಧಾಂತ, ಸಾಮೂಹಿಕ ಕ್ರೋಡೀಕರಣ, ಸಂಘಟನೆ ಮತ್ತು ನಾಯಕತ್ವಗಳು ಸಾಮಾಜಿಕ ಚಳುವಳಿಯ ಪ್ರಮುಖ ಮೂಲಾಂಶಗಳು ಎಂದು ಗುರುತಿಸಿದ್ದಾರೆ.

**1. ಸಿದ್ಧಾಂತ (Ideology)**

ಸಿದ್ಧಾಂತವು ಚಳುವಳಿಯ ಕ್ರಿಯಾ ಚೌಕಟ್ಟು ಮತ್ತು ಸಾಮೂಹಿಕ ಕ್ರೋಡೀಕರಣಕ್ಕೆ ಸಹಾಯಕವಾಗಿ, ಸಂಘಟನೆಯನ್ನು ವೈಚಾರಿಕ ಹಿನ್ನೆಲೆಯ ಬದ್ಧತೆ ನೀಡುತ್ತದೆ.

**2. ಸಾಮೂಹಿಕ ಕ್ರೋಡೀಕರಣ (Collective Mobilization)**

ಚಳುವಳಿಯ ಸ್ವರೂಪ ಮತ್ತು ದಿಕ್ಕನ್ನು ಸಾಮೂಹಿಕ ಕ್ರೋಡೀಕರಣವು ನಿರ್ಧರಿಸುತ್ತದೆ. ಸಾಮೂಹಿಕ ಕ್ರೋಡೀಕರಣವು ತೀವ್ರಸ್ವರೂಪ, (Radical) ಅಸಾಂಸ್ಥಿಕಮಾರ್ಗ, ಸ್ವಯಂಪ್ರೇರಿತ ಅಥವಾ ಅಹಿಂಸಾತ್ಮಕ, ಸಾಂಸ್ಥಿಕ ಮತ್ತು ಸೀಮಿತವಾಗಿಯೂ ಇರಬಹುದು.




**3. ನಾಯಕತ್ವ ಮತ್ತು ಸಂಘಟನೆ (Leadership and organisation)**

ನಾಯಕತ್ವ ಮತ್ತು ಸಂಘಟನೆ ಸಾಮೂಹಿಕ ಕ್ರೋಡೀಕರಣಕ್ಕೆ ಪೂರಕ ಸಂಗತಿಯಾಗಿದೆ. ನಾಯಕನು ಆಕರ್ಷಕ ವ್ಯಕ್ತಿತ್ವ (Charismatic) ದಿಂದ ಅಥವಾ ಚುನಾಯಿತ ನಾಯಕನಾಗಿರಬಹುದು.

### ಸಾಮಾಜಿಕ ಚಳುವಳಿಯ ಹೊಸ ಮೂಲಾಂಶಗಳು (New Components of Social Movements)

ಹೊಸ ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ನಾಯಕತ್ವ, ಸಂಘಟನೆ, ಸಿದ್ಧಾಂತ, ಸಾಮೂಹಿಕ ಕ್ರೋಡೀಕರಣಗಳು ಹೊಸ ಆಯಾಮವನ್ನು ಪಡೆದುಕೊಂಡಿದೆ.

ಹೊಸ ಸಾಮಾಜಿಕ ಚಳುವಳಿಗಳ ಉಗಮದಲ್ಲಿ ಮೌಲ್ಯಗಳು, ಸಂಸ್ಕೃತಿ, ವಿಷಯ ನಿಷ್ಠತೆ, ಆದರ್ಶಗಳು, ನೈತಿಕತೆ, ಅನನ್ಯತೆ ಮತ್ತು ಸಬಲೀಕರಣ ಇತ್ಯಾದಿಗಳು ಮಾನ್ಯತೆ ಪಡೆದಿವೆ. ಬಾರ್ಟಾಕ್ಸ್ (Bortaux)ರವರ ಪ್ರಕಾರ ವಿಷಯ

ನಿಷ್ಠತೆ (Subjectivity) ಮತ್ತು ಆದರ್ಶವಾದ (Idealism) ಸಾಮಾಜಿಕದ ಚಳುವಳಿಯ ಪ್ರಮುಖಾಂಶಗಳು. ಈ ಪ್ರಮುಖಾಂಶಗಳು ಸಾಮೂಹಿಕ ಕ್ರೋಡೀಕರಣ ಮತ್ತು ಹೊಸ ಅನನ್ಯತೆಯನ್ನು ರೂಪಿಸುತ್ತವೆ. (New Identity Formation).

### ಸಾಮಾಜಿಕ ಚಳುವಳಿಯಾಗಿ ಸ್ವಾತಂತ್ರ್ಯ ಹೋರಾಟ (Freedom Movement as a Social Movement)

ಭಾರತದ ಸ್ವಾತಂತ್ರ್ಯ ಹೋರಾಟವನ್ನು ಒಂದು ಸಾಮಾಜಿಕ ಚಳುವಳಿಯಾಗಿ ಬಿಪಿನ್ ಚಂದ್ರರವರ ವಿಶ್ಲೇಷಣೆಯ ಮುಖ್ಯವಾದುದು. ಸ್ವಾತಂತ್ರ್ಯ ಚಳುವಳಿಯು ತನ್ನೆಲ್ಲ ಸಾಮರ್ಥ್ಯವನ್ನು ಉಗ್ರಹೋರಾಟ (Militancy) ಮತ್ತು ಸಮಸ್ತರ ಸಮರ್ಪಣಾ ಮನೋಭಾವ (Spirit of Self Sacrifice of the Masses)ದ ಜೊತೆಗೆ ಕೃಷಿಕರು ಮತ್ತು ಭೂಮಾಲೀಕರ ಹೋರಾಟವನ್ನು ಒಳಗೊಂಡಿತ್ತು. ಸ್ವಾತಂತ್ರ್ಯ ಚಳುವಳಿಯು "ಕದನ ವಿರಾಮ – ಹೋರಾಟ– ಕದನವಿರಾಮ" (Truce-Struggle-truce) ಜೊತೆಗೆ ಜನಸಾಮಾನ್ಯರ ಕಾನೂನೇತರ ಹೋರಾಟ ಮತ್ತು ಕಾನೂನು ಪರಿಧಿಯೊಳಗಿನ ಹೋರಾಟವಿತ್ತು.

ಆಂತೋನಿಯೋ ಗ್ರಾಮ್‌ಸಿರವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮೂರು ರೀತಿಯ ಕದನ ಗುರುತಿಸಿದ್ದಾರೆ. 1. ಹೋರಾಟದ ಕದನ (War of Movemnet) 2. ಖಚಿತ ನಿಲುವು ತೆಗೆದುಕೊಳ್ಳುವಿಕೆ (War of Position) ಮತ್ತು 3. ಭೂಗತ ಹೋರಾಟ (Underground Warfare). ಗಾಂಧೀಜಿಯವರ ಅಸಹಕಾರ ಚಳುವಳಿ ಮತ್ತು ವಿದೇಶೀ ವಸ್ತುಗಳ ಬಹಿಷ್ಕಾರವು ಖಚಿತ ನಿಲುವು ತೆಗೆದುಕೊಳ್ಳುವುದು ಆಗಿದೆ. ಮುಷ್ಕರ (Strikes) ಗಳು ಹೋರಾಟದ ಕದನವಾಗಿದ್ದರೆ, ಭೂಗತ ಶಸ್ತ್ರಾಸ್ತ್ರ ತರಬೇತಿ ಮತ್ತು ಹೋರಾಟವು ಭೂಗತ ಹೋರಾಟವಾಗಿತ್ತು.

### ಸಾಮಾಜಿಕ ಚಳುವಳಿಯ ಪ್ರಕಾರಗಳು (Types of Social Movements)

**ಎಂ. ಎಸ್. ರಾವ್** ರವರು ಸಾಮಾಜಿಕ ಚಳುವಳಿಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಅವುಗಳೆಂದರೆ

1. **ಸಮಾಜ ಸುಧಾರಣಾ ಚಳುವಳಿಗಳು** (Reform Movements) ಸಮಾಜದಲ್ಲಿ ಭಾಗಶಃ ಪರಿವರ್ತನೆ ತರುತ್ತವೆ.
2. **ಕ್ರಾಂತಿಕಾರಿ ಚಳುವಳಿಗಳು** (Revolutionary Movements) ಇಡೀ ಸಮಾಜದ ರಚನಾತ್ಮಕ ಪರಿವರ್ತನೆ ಉಂಟು ಮಾಡುತ್ತದೆ. ಈ ಚಳುವಳಿಗಳು ಸಂಘರ್ಷ ಮತ್ತು ಹಿಂಸೆಯಿಂದ ಕೂಡಿರುತ್ತದೆ.
3. **ರೂಪಾಂತರ ಚಳುವಳಿ** (Trasformative Movements) ಅಲ್ಪಮಟ್ಟದ ಪರಿವರ್ತನೆಯನ್ನು ತರುವುದರ ಜೊತೆಗೆ, ಅಧಿಕಾರ ಮತ್ತು ಸಂಪತ್ತಿನ ಹಂಚಿಕೆ, ಹಕ್ಕು ಮತ್ತು ಬಾಧ್ಯತೆಗಳು ಪರಿವರ್ತನೆ ತರುತ್ತದೆ.

**ಸಾಮಾಜಿಕ ಚಳುವಳಿಗಳನ್ನು ಒಳಗೊಳ್ಳುವ ಮತ್ತು ಹೊರಗುಳಿದ ಚಳುವಳಿಯಾಗಿಯೂ ವಿಂಗಡಿಸಬಹುದು.**

#### 1. ಒಳಗೊಳ್ಳುವ ಚಳುವಳಿಗಳು (Inclusivist Movements)

ಈ ರೀತಿಯ ಚಳುವಳಿಗಳು ಸಾರ್ವತ್ರಿಕವಾದ, ಅಹಿಂಸಾತ್ಮಕ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ರೂಪುಗೊಳ್ಳುತ್ತದೆ. ಪ್ರಸ್ತುತ ಸಮಾಜದಲ್ಲಿ ಈ ರೀತಿಯ ಚಳುವಳಿಗಳೂ ಸಾಮೂಹಿಕ ಹೋರಾಟದ ಮೂಲಕ ಅನನ್ಯತೆ (Identity) ಸಮಾನತೆ, ಗೌರವ ಮತ್ತು ಸಾಮಾಜಿಕ ನ್ಯಾಯವನ್ನು ಪಡೆಯಲು ಹೋರಾಡುತ್ತವೆ.

ಮಹಿಳೆ ಮತ್ತು ದಲಿತ ಚಳುವಳಿಗಳು, ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ, ರಿಯಾಯಿತಿ ದರದ ರಸಗೊಬ್ಬರ ಮತ್ತು ಔಷಧಿ ಮತ್ತು ವಿದ್ಯುಚ್ಛಕ್ತಿಗಾಗಿ ರೈತರು ನಡೆಸುವ ಹೋರಾಟವು ಒಳಗೊಳ್ಳುವ ಚಳುವಳಿಯಾಗಿದೆ. ಬಹುತೇಕ ಸಾಮಾಜಿಕ ಚಳುವಳಿಗಳು ಸಮಾಜದ ಪುನರ್ ನಿರ್ಮಾಣ (Social Re-construction) ದಿಂದ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ತರುವ ಆಶಯ ಹೊಂದಿರುತ್ತದೆ. ಜಾತಿ, ಧರ್ಮ ಮತ್ತು ಜನಾಂಗೀಯ ಅಸಮಾನತೆ ಮತ್ತು ಭೇದವನ್ನು ಸರಿಪಡಿಸುವ ಶಾಂತಿಯುತ (Non-Radical) ಪ್ರತ್ಯೇಕವಲ್ಲದ (Non- Separatist) ಮತ್ತು ಸ್ವಾಯತ್ತವಲ್ಲದ (Non - Autonomus) ಚಳುವಳಿಗಳಾಗಿರುತ್ತವೆ.

### 2. ಹೊರಗುಳಿದ ಚಳುವಳಿಗಳು (The Exclusivist Movements)

ಹೊರಗುಳಿದ ಚಳುವಳಿಗಳು ಸಾಮಾನ್ಯವಾಗಿ ತಮ್ಮ ಸಂಕಷ್ಟಗಳಿಗೆ "ಹೊರಗಿನವರನ್ನು" ದೋಷಿಸುವ ಮೂಲಕ ಚಳುವಳಿಯು ರೂಪುಗೊಳ್ಳುತ್ತದೆ. ಸಮಾಜದ ಸರ್ವರನ್ನು ಒಟ್ಟುಗೂಡಿಸುವ ಬದಲು 'ನಾವು ಮತ್ತು ಅವರು' (We and They) 'ಮಣ್ಣಿನ ಮಕ್ಕಳು' (The Sons of the Soil) ಪ್ರತ್ಯೇಕಿತ ಮತ್ತು ಸ್ವಾಯತ್ತತೆಗೆ' (Sub National and Semi - Autonomous) ಹೋರಾಡುತ್ತಾರೆ. ಪ್ರತ್ಯೇಕಿತ ಚಳುವಳಿಗಳು ತಮ್ಮ ರಕ್ಷಣೆಗಾಗಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅನನ್ಯತೆಗಾಗಿ ಹೊರಗುಳಿಯಲು ಪ್ರಯತ್ನಿಸುತ್ತವೆ. ತಮ್ಮ ಪರಿಶುದ್ಧತೆ ಮತ್ತು ಸಾಂಸ್ಕೃತಿಕ ಪರಂಪರೆಯು ಅಪಾಯದಲ್ಲಿದೆ ಎಂದು ಹಣ, ಶಕ್ತಿ ಮತ್ತು ಸಾಮರ್ಥ್ಯದ ಮೂಲಕ ತ್ಯಾಗ – ಬಲಿದಾನ ಮಾಡಲು ಸಮೂಹವನ್ನು ಕ್ರೋಡೀಕರಿಸುತ್ತಾರೆ. ಉದಾ:– ಅಸ್ಸಾಮಿನಲ್ಲಿ ಉಂಟಾದ ಪ್ರತ್ಯೇಕತಾ ಚಳುವಳಿಯು "ಅಸ್ಸಾಮಿಗಳಿಗೆ ಮಾತ್ರ ಅಸ್ಸಾಂ" ("Assam is for the Assamese") ಪಶ್ಚಿಮಬಂಗಾಳದ ಗೂರ್ಖಾಲ್ಯಾಂಡ್ ಚಳುವಳಿ, ಉತ್ತರ ಪ್ರದೇಶದ ಉತ್ತರಖಂಡ ಚಳುವಳಿಗಳು ಇತ್ಯಾದಿ.

ಈ ಹಿನ್ನೆಲೆಯಲ್ಲಿ ಮುಂದಿನ ಭಾಗದಲ್ಲಿ ರೈತರ ಚಳುವಳಿ, ಹಿಂದುಳಿದ, ದಲಿತ ಚಳುವಳಿ ಮತ್ತು ಮಹಿಳಾ ಚಳುವಳಿಯನ್ನು ಅಧ್ಯಯನ ಮಾಡುತ್ತೇವೆ.

## 7.2 ರೈತರ ಚಳುವಳಿ (Farmers Movement)

### ರೈತರ ಚಳುವಳಿಯ ಅರ್ಥ ಮತ್ತು ಪ್ರಕಾರಗಳು

ರೈತ ಚಳುವಳಿಯನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ವರ್ಗಗಳ ಚಳುವಳಿ ಅಥವಾ ಹೋರಾಟ ಎಂದು ಕರೆಯುತ್ತೇವೆ.

### ರೈತ ಚಳುವಳಿಯ ಪ್ರಕಾರಗಳು (Types of Peasant Movements)

ಕ್ಯಾಥಲೀನ್ ಗೌವ್ (Catheleen Gough) ರವರು ರೈತ ಹೋರಾಟದ ಪ್ರಕಾರಗಳ ಸ್ಥೂಲ ಚಿತ್ರಣ ನೀಡಿದ್ದಾರೆ. ಅವರ ಪ್ರಕಾರ ಬ್ರಿಟಿಷ್ ಅವಧಿಯ ರೈತ ಹೋರಾಟಗಳನ್ನು ಐದು ಪ್ರಕಾರಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ:

1) ಪುನರ್‌ಸ್ಥಾಪನಾ ದಂಗೆಗಳು (Restorative rebellions)

2) ಧಾರ್ಮಿಕ ಚಳುವಳಿಗಳು (Religious Movements)

3) ಸಮಾಜನಿಷ್ಠ ದರೋಡೆಗಳು (Social Banditry)

4) ಭಯೋತ್ಪಾದಕ ಪ್ರತೀಕಾರಗಳು (Terrorist Vengence)

5) ಜನತಾ ವಿಪ್ಲವಗಳು (Mass insurrections)

1) **ಪುನರ್‌ಸ್ಥಾಪನಾ ದಂಗೆಗಳು** – ಹಳೆಯ ವ್ಯವಸ್ಥೆಯ ಪುನರ್‌ಸ್ಥಾಪನೆಯನ್ನು ಪುನರ್‌ಸ್ಥಾಪನಾ ದಂಗೆಗಳು ಎಂದು ಕರೆಯುತ್ತೇವೆ. ಬ್ರಿಟೀಷರ ವಿರುದ್ಧ ಸಂತಾಲರ ಹೋರಾಟ ಈ ರೀತಿಯ ಚಳುವಳಿಗೆ ಒಂದು ಉದಾಹರಣೆ.

2) **ಧಾರ್ಮಿಕ ಚಳುವಳಿಗಳು** – ಧಾರ್ಮಿಕ ಚಳುವಳಿಗಳು ತಮ್ಮ ಹೋರಾಟದಿಂದ ಕಷ್ಟಗಳನ್ನು ಪರಿಹರಿಸಲು ದೇವದೂತರ ಆಗಮನವಾಗುತ್ತದೆ. ರಾಮರಾಜ್ಯ ಬರುತ್ತದೆ. ಸುಖಶಾಂತಿ ನೆಲೆಸುತ್ತದೆ. ಸುವರ್ಣಯುಗ ಪ್ರಾರಂಭವಾಗುತ್ತದೆ. ಇಂತಹ ಚಳುವಳಿಯನ್ನು ಅವತಾರೀಯ ಚಳುವಳಿ (Messianic Movement) ಎಂದೂ ಕರೆಯುತ್ತಾರೆ. ಸ್ಟೀಫನ್ ಫಚ್‌ರ ಪ್ರಕಾರ ಭಾರತದಲ್ಲಿ ನಡೆದ ಶೇ 50 ರೈತ ಹೋರಾಟಗಳು ಧಾರ್ಮಿಕ ಚಳುವಳಿಗಳು ಉದಾ: 1836–1921ರ ಅವಧಿಯಲ್ಲಿ ಕೇರಳದ ಮಾಪಿಳ್ಳೆಗಳ ಹೋರಾಟ.

3) **ಸಮಾಜನಿಷ್ಠ ದರೋಡೆಗಳು** – ಶ್ರೀಮಂತ ಭೂಮಾಲೀಕರು ಅಥವಾ ಶ್ರೀಮಂತರ ಸಂಪತನ್ನು ಕೊಳ್ಳೆಹೊಡೆದು ಅದನ್ನು ಬಡ ಹಳ್ಳಿಗರಿಗೆ ಹಂಚುವ ದರೋಡೆಯನ್ನು ಸಮಾಜ ದರೋಡೆ ಎಂದು ಕರೆಯುತ್ತಾರೆ. ಹೀಗೆ ದರೋಡೆ ಮಾಡುವವರು ತಮ್ಮ ಹೊಟ್ಟೆಪಾಡಿಗಿಂತ ಭೂಮಾಲೀಕರ ಮೇಲಿನ ಸಿಟ್ಟಿನಿಂದ ದರೋಡೆ ಮಾಡುತ್ತಿದ್ದರು. ಇವರು ಬಡವರ ಆರಾಧ್ಯ ದೈವವಾಗಿದ್ದರು. 17 ಮತ್ತು 18ನೇ ಶತಮಾನದಲ್ಲಿ ಮಧ್ಯಭಾರತದಲ್ಲಿ ಠಕ್ಕರು ನಡೆಸಿದ ದರೋಡೆಗಳು. 1946–47ರಲ್ಲಿ ಆಂಧ್ರದ ಕರ್ನೂಲ್ ಭಾಗದಲ್ಲಿ ನರಸಿಂಹ ರೆಡ್ಡಿಯ ತಂಡ ಸಮಾಜನಿಷ್ಠದ ದರೋಡೆಯಲ್ಲಿ ನಿರತರಾಗಿದ್ದರು.

4) **ಭಯೋತ್ಪಾದಕ ಪ್ರತೀಕಾರಗಳು** – ತಾವು ವೈರಿಗಳು ಎಂದು ಭಾವಿಸುವ ಜನರನ್ನು ಕೊಲ್ಲುವುದು ಮತ್ತು ಹಿಂಸಿಸುವುದು ಇಂಥ ಹೋರಾಟದ ವೈಖರಿ. ಭೂಮಾಲೀಕರು ಭ್ರಷ್ಟ ಅಧಿಕಾರಿಗಳು, ಈ ಕೃತ್ಯದ ಬಲಿಪಶುಗಳು.

5) **ಜನತಾ ವಿಪ್ಲವಗಳು** – ಜನತಾ ವಿಪ್ಲವಗಳು ದೀರ್ಘಕಾಲದಿಂದ ಪರಿಹಾರವಾಗದ ಸಮಸ್ಯೆಗಳು ಉಲ್ಬಣಿಸಿದಾಗ ಏಕಾ–ಏಕಿ ಸ್ಫೋಟಗೊಳ್ಳುತ್ತವೆ. ಆರಂಭದಲ್ಲಿ, ಚಳುವಳಿ, ಅಸಹಕಾರ, ಘೋಷಣೆ ಕೂಗುವುದು, ಮುಷ್ಕರ ಮಾಡುವುದರಲ್ಲಿ ಕೊನೆಗೊಳ್ಳುತ್ತದೆ ಸರ್ಕಾರ ಇಂತಹ ಚಳುವಳಿಯನ್ನು ದಮನಮಾಡಲು ಪ್ರಯತ್ನಿಸಿದರೆ ಒಮ್ಮೆಲೆ ಹಿಂಸಾ ರೂಪ ಪಡೆಯುತ್ತದೆ. ಇಂತಹ ಹೋರಾಟಗಳಿಗೆ ಯಾವುದೇ ಸಿದ್ಧಾಂತ ಅಥವಾ ನಾಯಕನ ಅಗತ್ಯ ಇರುವುದಿಲ್ಲ. ಉದಾಹರಣೆಗೆ ಇತ್ತೀಚೆಗೆ ದೆಹಲಿಯಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಮತ್ತು ಮಹಿಳಾ ದೌರ್ಜನ್ಯ ವಿರೋಧಿ ಹೋರಾಟವನ್ನು ಹೆಸರಿಸಬಹುದು.

### ಭಾರತದಲ್ಲಿ ರೈತರ ಹೋರಾಟಕ್ಕೆ ಕಾರಣವಾದ ಅಂಶಗಳು (Factors Facilitating Movement Former in India)

ವಿಭಿನ್ನ ರೈತ ಹೋರಾಟಗಳಿಗೆ ಕಾರಣವಾದ ಸಂಗತಿಗಳನ್ನು ಕ್ಯಾಥಲೀನ್ ಗೌವ್‌ರವರು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ:

1) ಅಧಿಕ ಕಂದಾಯ ಸಂಗ್ರಹಣೆ

2) ವಿಭಿನ್ನ ಪ್ರಕಾರದ ಮಧ್ಯವರ್ತಿಗಳು ರೈತರಿಂದ ಕೃಷಿಯ ಹೆಚ್ಚುವರಿ ಉತ್ಪಾದನೆಯನ್ನು ಕಸಿದುಕೊಂಡಿದ್ದು.

3) ವ್ಯವಸಾಯ ಭೂಮಿಯನ್ನು ಖಾಸಗಿ ಆಸ್ತಿಯನ್ನಾಗಿ ಮಾರ್ಪಾಡು.

4) ಬ್ರಿಟೀಷರ ಕಾಲದಿಂದ ಬುಡಕಟ್ಟು ಪಂಗಡಗಳ ಜಮೀನಿನ ಅತಿಕ್ರಮಣ.

5) ಬ್ರಿಟಿಷರು ಕೈಗಾರಿಕೆಗಳಿಗೆ ನೀಡಿದ ಬೆಂಬಲ, ಆಮದು ರಫ್ತು ನೀತಿಯಿಂದಾಗಿ ಕುಶಲಕರ್ಮಿಗಳು ನಿರುದ್ಯೋಗಿಗಳಾದದ್ದು.

6) ವಸಾಹತುಶಾಹಿ ಯುದ್ಧಕ್ಕೆ ಸಾಲ, ಸಂಬಳ, ಲಾಭದ ಹಿಂತಿರುಗಿಸುವಿಕೆ, ಸಾರ್ವಜನಿಕ ಸೇವೆ, ಇತ್ಯಾದಿ ನೆಪದಲ್ಲಿ ಬ್ರಿಟಿಷರು ಭಾರತದ ಸಂಪತ್ತನ್ನು ಬ್ರಿಟನ್ನಿಗೆ ವರ್ಗಾಯಿಸಲ್ಪಟ್ಟಿತು.

7) ರಫ್ತಿಗೆ ಅಗತ್ಯವಾದ ವಾಣಿಜ್ಯ ಕೃಷಿಗೆ ಪ್ರೋತ್ಸಾಹ ಮತ್ತು ಒತ್ತಡ.

8) ಗೈರು ಹಾಜರಿ ಭೂಮಾಲೀಕತ್ವದ ಮತ್ತು ಲಾಭಕ್ಕಾಗಿ ಗೇಣಿದಾರರು ಮತ್ತು ಕೃಷಿ ಕಾರ್ಮಿಕ ಹೊಸ ಬಗೆಯ ಶೋಷಣೆಗಳಿಗೆ ಒಳಗಾಗುವಂತಾಯ್ತು.

9) 1921ರ ನಂತರ ಜನಸಂಖ್ಯೆ ತ್ವರಿತಗತಿಯಿಂದ ಬೆಳೆಯಿತು. ಇದರಿಂದಾಗಿ ಗ್ರಾಮದ ಮೇಲಿನ ಹೊರೆ ಅಧಿಕವಾಯ್ತು.

10) ಸಾರಿಗೆ ಮತ್ತು ಸಂಪರ್ಕ ಮತ್ತು ಸ್ವಾತಂತ್ರ್ಯ ಹೋರಾಟವು ಕೃಷಿಕರು ಮತ್ತು ನಗರದ ಕಾರ್ಮಿಕರ ನಡುವೆ ಏಕತೆಗೂ ಸಹಕಾರಿಯಾಯಿತು.

11) ಬ್ರಿಟಿಷ್ ಆಡಳಿತಾವಧಿಯ ಪ್ರಮುಖ ಲಕ್ಷಣವೆಂದರೆ, ಕ್ಷಾಮ, ಜನಸಂಖ್ಯಾ ಬೆಳವಣಿಗೆ, ಆಹಾರದ ಕೊರತೆ ರೈತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಸಂಪತ್ತಿನ ಅಸಮಾನ ಹಂಚಿಕೆ.

12) ಕೃಷಿಯ ಪ್ರಗತಿಯಿಂದ ಆದಾಯದ ಅಸಮತೋಲನಕ್ಕೆ ಕಾರಣವಾಯಿತು. ಬಡರೈತರ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯೂ ಆಗಲಿಲ್ಲ.

### ಕರ್ನಾಟಕದಲ್ಲಿ ರೈತ ಹೋರಾಟಗಳು (Farmers Movement in Karnataka)

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಸಾಕಷ್ಟು ರೈತರ ಹೋರಾಟಗಳಾಗಿವೆ. ಸ್ವಾತಂತ್ರ್ಯಾನಂತರ, ಕರ್ನಾಟಕದಲ್ಲಿ ಸಾಕಷ್ಟು ರೈತ ಚಳುವಳಿಗಳು ನಡೆದಿದ್ದವು. ಅವುಗಳಲ್ಲಿ ಕೆಲವೊಂದನ್ನು ಪಟ್ಟಿ ಮಾಡುವುದಾದರೆ 1950–51ರ ಕಾಗೋಡು ರೈತರ ಸತ್ಯಾಗ್ರಹ, 1978–79ರ ಸಾಗರ – ತೀರ್ಥಹಳ್ಳಿ ತಾಲ್ಲೂಕುಗಳ ರೈತರ ದಂಗೆ, 1979ರ ಹಳಿಯಾಳ ಕೃಷಿ ಕಾರ್ಮಿಕರ ಚಳುವಳಿ, 1979ರ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕಾರ್ನಾಡು ರೈತರ ಹೋರಾಟ, ಆದರೆ 1980ರ ಮಲಪ್ರಭಾ ಹೋರಾಟದೊಂದಿಗೆ ಕರ್ನಾಟಕ ರೈತರ ಚಳುವಳಿಯು ಹೊಸ ತಿರುವೊಂದನ್ನು ಪಡೆಯಿತು.

### ಕಾಗೋಡು ಸತ್ಯಾಗ್ರಹ ಅಥವಾ ಹೋರಾಟ (Kagodu Movement)

ಕಾಗೋಡು ಸತ್ಯಾಗ್ರಹವು ಭೂಮಿಯ ಹಕ್ಕಿಗಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಮೊದಲ ಹೋರಾಟ. ಈ ಸತ್ಯಾಗ್ರಹ ಅಥವಾ ಹೋರಾಟವು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆದದ್ದರಿಂದ ಈ ಹೋರಾಟವನ್ನು ಕಾಗೋಡು ಸತ್ಯಾಗ್ರಹ ಎಂದು ಕರೆಯುತ್ತೇವೆ.

ಆಂಗ್ಲರ ಕಾಲದಿಂಲೂ ಕಾಗೋಡಿನಲ್ಲಿ ಭೂಮಾಲೀಕ ಪದ್ಧತಿ ಅಸ್ತಿತ್ವದಲ್ಲಿತ್ತು. ಜೋಡಿದಾರರ, ಇನಾಮುದಾರರು, ಜಾಗೀರಧಾರರು ಮತ್ತು ಭೂ ಮಾಲೀಕ ದೇಸಾಯಿಗಳು ಭೂ – ಮಾಲೀಕರಾಗಿದ್ದರು. ಗೇಣಿದಾರರು ಮತ್ತು ಭೂರಹಿತ ಕೃಷಿಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದರು. ಈ ಪ್ರದೇಶದಲ್ಲಿ 63 ಕೊಳಗದಲ್ಲಿ ಉತ್ಪಾದನೆ

ನೀಡಬೇಕಿತ್ತು. ಬೇರೆ ಕಡೆ 60 ಕೊಳಗ (ಕೊಳಗ ಎಂದರೆ ಸಾಂಪ್ರದಾಯಿಕ ಅಳತೆಯ ಸಾಧನ ಸಾಧಾರಣವಾಗಿ ಒಂದು ಕೊಳಗ 20 ಸೇರಿಗೆ ಸಮ) ನಿರ್ಧರಿಸಲಾಗಿತ್ತು.

1950–51ರಲ್ಲಿ ಭೂಮಾಲೀಕರಿಂದ ಗೇಣಿದಾರರ ಶೋಷಣೆ ಮತ್ತು ಅಧಿಕ ಪ್ರಮಾಣದ ಪಾಲು ಕೊಡಲು ನಿರಾಕರಿಸಿ ಭೂಹಕ್ಕಿಗಾಗಿ ಪ್ರತಿಭಟಿಸಿದರು. ಈ ಪ್ರತಿಭಟನೆಯು ಕಾಗೋಡು ಗ್ರಾಮದ ಸುತ್ತಮುತ್ತಲ ಹಳ್ಳಿಗಳಾದ ಸೊರಗುಪ್ಪೆ, ಯಲಕುಂದ್ಲಿ, ಚಿಕ್ಕನೆಲೂರು, ಮಡಸೂರು, ಕಾನ್ಲೆ, ತಡಗಳಲೆ ಕೆಳದಿ ಮುಂತಾದ ಗ್ರಾಮಗಳಿಗೂ ವ್ಯಾಪಿಸಿತು. "ಉಳುವವನಿಗೆ ಭೂಮಿ" ಎಂಬ ಘೋಷಣೆ ಈ ಹೋರಾಟದ ಉದ್ದೇಶವಾಗಿತ್ತು. ಹೆಚ್ ಗಣಪತಿಯಪ್ಪ, ಶಾಂತವೇರಿ ಗೋಪಾಲಗೌಡ, ಸದಾಶಿವರಾಯರು ಮುಂತಾದವರು ಈ ಹೋರಾಟದ ನೇತೃತ್ವ ವಹಿಸಿದ್ದರು ಮತ್ತು ಖ್ಯಾತ ಸಮಾಜವಾದಿ ನಾಯಕ ಡಾ ॥ ರಾಮಮನೋಹರ ಲೋಹಿಯಾರವರು ಕಾಗೋಡು ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಹೋರಾಟಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಕಾಗೋಡು ಸತ್ಯಾಗ್ರಹ ಸ್ವಾತಂತ್ರ್ಯಾನಂತರ ಇಡೀ ದೇಶದ ಗಮನ ಸೆಳೆಯಿತು. ಗೇಣಿದಾರರು ಈ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರಿಂದ ಸರ್ಕಾರವು ಗೇಣಿದಾರರಿಗೆ ಮತ್ತು ಭೂರಹಿತರಿಗೆ ಮಾಲೀಕತ್ವದ ಹಕ್ಕನ್ನು ನೀಡಲೇಬೇಕಾಯಿತು. ಸ್ವಾತಂತ್ರ್ಯ ಬಂದು ಎರಡು ದಶಕಗಳ ನಂತರ 20 ಅಂಶಗಳ ಕಾರ್ಯಕ್ರಮದಲ್ಲಿ ಭೂಸುಧಾರಣೆಯನ್ನು ಕಾನೂನುಬದ್ಧಗೊಳಿಸಲಾಯಿತು. "ಉಳುವವನೇ ಭೂಮಿಯ ಒಡೆಯ" ಎಂಬ ಘೋಷಣೆಯು ಕಾಗೋಡು ಸತ್ಯಾಗ್ರಹದಿಂದ ಸ್ಫೂರ್ತಿಗೊಂಡಿತು. ಕಾಗೋಡು ಸತ್ಯಾಗ್ರಹದ ನಂತರ ಮಲಪ್ರಭ ರೈತರ ಹೋರಾಟವು ಕರ್ನಾಟಕದ ರೈತರ ಹೋರಾಟದಲ್ಲಿ ಮತ್ತೊಂದು ಮೈಲಿಗಲ್ಲು.

### ಮಲಪ್ರಭಾ ಹೋರಾಟ (The Malaprabha Agitation)

1960ರಲ್ಲಿ 30 ಕೋಟಿ ರೂಪಾಯಿಯ ವೆಚ್ಚದಲ್ಲಿ ಮಲಪ್ರಭಾ ನದಿಗೆ ಅಣೆಕಟ್ಟನ್ನು ಕಟ್ಟಲು ಉದ್ದೇಶಿಸಲಾಗಿತ್ತು. ಆದರೆ 1980ಕ್ಕೆ 162 ಕೋಟಿ ರೂಪಾಯಿಗಳನ್ನು ಖರ್ಚುಮಾಡಿಯೂ ಅಣೆಕಟ್ಟು ಪೂರ್ಣಗೊಂಡಿರಲಿಲ್ಲ. ಬೆಳಗಾವಿ, ವಿಜಯಪುರ ಮತ್ತು ಧಾರವಾಡ ಜಿಲ್ಲೆಗಳಿಗೆ ವರದಾನವೆಂದು ಪರಿಗಣಿಸಿದ್ದ ಈ ಯೋಜನೆ ಶಾಪವಾಗಿ ಪರಿಣಮಿಸಿತ್ತು. ಮಲಪ್ರಭಾ ಯೋಜನೆಯಲ್ಲಿ ಬರುವ ಪ್ರದೇಶವೂ ಒಣಬೇಸಾಯದ ಪ್ರದೇಶವಾಗಿತ್ತು. ಜೋಳ ಮತ್ತು ಹತ್ತಿಯ ಬೇಸಾಯಕ್ಕೆ ಸೂಕ್ತವಾದ ಕಪ್ಪು ಮಣ್ಣಿನ ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ದೊರೆಯಿತು. ಸಾಂಪ್ರದಾಯಿಕ ಕೃಷಿ ಪದ್ಧತಿಯಿದ್ದ ಪ್ರದೇಶಕ್ಕೆ 1973 ರಲ್ಲಿ ಮಲಪ್ರಭಾ ಯೋಜನೆಯಡಿಯಲ್ಲಿ ನೀರಾವರಿ – ಸೌಕರ್ಯ ದೊರೆಯಿತು. ಇದರಿಂದ ನೀರು ಒಂದೆಡೆ ನಿಂತು ಭೂಮಿಯಲ್ಲಿ ಕ್ಷಾರ ಹೆಚ್ಚಾಯಿತು.

### ಮಲಪ್ರಭಾ ಚಳುವಳಿಗೆ ಪೂರಕವಾದ ಅಂಶಗಳು (Factors Facilitating Malaprabha)

ಮಲಪ್ರಭಾ ಹೋರಾಟ ಕೇವಲ ಒಂದು ಘಟನೆಯಲ್ಲ. ಇದು ಅನೇಕ ಸಂಗತಿಗಳ ಪ್ರತಿಫಲ ಮಲಪ್ರಭ ಹೋರಾಟದ ಕಾರಣಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

#### 1) ಸ್ಥಿರ ಬೆಲೆ ಪ್ರಶ್ನೆ (The Issue of Price Stability)

ರೈತರು ಹೆಚ್ಚಿನ ಆದಾಯ ತರುವ ವರಲಕ್ಷ್ಮಿ ಹತ್ತಿ ಮತ್ತು ಹೈಬ್ರಿಡ್ ಜೋಳವನ್ನು ಬೆಳೆಯುವಂತೆ ಪ್ರೋತ್ಸಾಹಿಸಲಾಯಿತು. ಕೃಷಿ ಉತ್ಪನ್ನಗಳ ಮಾರುಕಟ್ಟೆ ಬೆಲೆ ಆಕರ್ಷಕವಾಗಿದ್ದುದರಿಂದ ರೈತರು ದುಬಾರಿ ಬೆಲೆಯ

ಬೀಜ, ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಬಳಸಲು ಉತ್ಸುಕರಾಗಿದ್ದರು. ಹೊಸ ಕೃಷಿ ತಂತ್ರಜ್ಞಾನದ ಕೊರತೆ ಮತ್ತು ಬೀಜಗಳ ಗುಣಮಟ್ಟ ಕಳಪೆಯಾಗಿದ್ದರೂ ರೈತರ ಆಸೆ ಮಾತ್ರ ಆಕಾಶದೆತ್ತರಕ್ಕೆ ಇತ್ತು. ವರಲಕ್ಷ್ಮಿ ಹತ್ತಿಯ ಬೆಲೆ ಕ್ವಿಂಟಾಲ್‌ಗೆ 1,000 ರೂಪಾಯಿಯಿಂದ 1978–79ರಲ್ಲಿ 350 ರೂಪಾಯಿಗೆ ಕುಸಿಯಿತು. ಜೊತೆಗೆ ರಸಗೊಬ್ಬರಗಳ ಬೆಲೆ ಹೆಚ್ಚಾಯಿತು.

### 2) ಲೆವಿಯ ಪ್ರಶ್ನೆ (The Levy Issue)

ನೀರಾವರಿ ಸೌಲಭ್ಯ ನೀಡಿದ ವರ್ಷದಿಂದ ಪೂರ್ವಾನ್ವಯವಾಗುವಂತೆ ಭೂಮಿಯ ಮೌಲ್ಯಕ್ಕೆ ಅನುಗುಣವಾಗಿ ಬೆಟರ್‌ಮೆಂಟ್ ಲೆವಿ ರೈತರು ಕಟ್ಟಬೇಕಾಗಿದ್ದು ಮಲಪ್ರಭಾ ಚಳುವಳಿಗೆ ಮತ್ತೊಂದು ಕಾರಣವಾಯ್ತು. ಎಕರೆಯೊಂದಕ್ಕೆ 500 ರೂಪಾಯಿಗಳಿಂದ 1,5000 ರೂಪಾಯಿಗಳಾಗುವ ಈ ಲೆವಿಯನ್ನು 20 ವರ್ಷಗಳಲ್ಲಿ ಕಂತುಗಳಲ್ಲಿ ಕಟ್ಟಬೇಕಿತ್ತು. ಆದರೆ ರೈತರ ಆಕ್ರೋಶಕ್ಕೆ ಕಾರಣವಾದ ಸಂಗತಿಯೆಂದರೆ ನೀರಾವರಿ ಸೌಕರ್ಯ ದೊರೆಯದ ಮತ್ತು ಭೂಮಿ ಸಾಗುವಳಿಯಾಗಿದೆಯೇ ಎಂದು ಗಮನಿಸದೆ ನೀರಾವರಿ ಪ್ರದೇಶದಡಿ ಬರುವ ಎಲ್ಲ ಭೂಮಿಯ ಮೇಲೆ ಲೆವಿ ನೀಡುವಂತೆ ಆದೇಶಿಸಲಾಯಿತು. ಇಷ್ಟೇ ಅಲ್ಲದೆ ಸಮಪರ್ಕ ಕಾಲುವೆ ನಿರ್ವಹಣೆ ಇಲ್ಲದೇ ನೀರು ನಿಂತು ಭೂಮಿಯ ಕ್ಷಾರ ಹೆಚ್ಚಾಗಿ ನಿರುಪಯುಕ್ತವಾಯಿತು.

### 3) ಸ್ಥಳೀಯ ನೌಕರಶಾಹಿಯ ಪಾತ್ರ (The Role of Local Bureaucracy)

ಮಲಪ್ರಭಾ ಹೋರಾಟಕ್ಕೆ ಕಾರಣವಾದ ಸಂಗತಿಗಳಲ್ಲಿ ಸ್ಥಳೀಯ ನೌಕರಶಾಹಿಯ ಪಾತ್ರ ಪ್ರಮುಖವಾದುದು. ಅವುಗಳೆಂದರೆ – ಭ್ರಷ್ಟಾಚಾರ, ನೌಕರಶಾಹಿಯ ಔದಾಸೀನತೆ. ಒತ್ತಾಯದಿಂದ ಕಂದಾಯ ವಸೂಲಿ ಮತ್ತು ರಾಜಕೀಯ ನಾಯಕತ್ವದ ವೈಫಲ್ಯತೆ.

### ಚಳುವಳಿಯ ಹಾದಿ (The Course of the Movement)

ಮಾರ್ಚ್ 1980ರಲ್ಲಿ ನವಲಗುಂದದಲ್ಲಿ ಪಕ್ಷೇತರವಾಗಿ "ಮಲಪ್ರಭ ನೀರಾವರಿ ಪ್ರದೇಶ ರೈತ ಸಮನ್ವಯ ಸಮಿತಿ"ಯ ಸ್ಥಾಪನೆಯಿಂದ ಚಳುವಳಿ ಪ್ರಾರಂಭವಾಯಿತು. ಇದು ನವಲಗುಂದ ತಾಲ್ಲೂಕಿಗೆ ಮಾತ್ರ ಸೀಮಿತವಾಗಿತ್ತಾದರೂ ನಂತರದಲ್ಲಿ ಮಲಪ್ರಭಾ ನೀರಾವರಿ ಪ್ರದೇಶದ ಐದೂ ತಾಲ್ಲೂಕುಗಳಿಗೆ (ನರಗುಂದ, ನವಲಗುಂದ, ರೋಣ, ಸವದತ್ತಿ ಮತ್ತು ರಾಮದುರ್ಗ) ವಿಸ್ತರಿಸಿತು. ಏಪ್ರಿಲ್ 1980ರಲ್ಲಿ ಸಮಿತಿಯು ಮುಖ್ಯಮಂತ್ರಿ ಗುಂಡೂರಾವ್‌ರವರಿಗೆ ಜ್ಞಾಪನಾಪತ್ರವನ್ನು ಸಲ್ಲಿಸಿತು. ಇದರಲ್ಲಿ ನೀರಾವರಿಯ ವ್ಯವಸ್ಥಿತ ನಿರ್ವಹಣೆ, ಉಚಿತವಾಗಿ ಸಣ್ಣ ರೈತರ ಜಮೀನನ್ನು ಸಮತಟ್ಟುಗೊಳಿಸುವುದು, ಬೆಳೆವಿಮೆ, ಬೆಂಬಲಬೆಲೆ, ಹತ್ತಿ, ಸೆಣಬು ಮತ್ತು ಸಕ್ಕರೆ ಉದ್ಯಮಗಳನ್ನು ರಾಷ್ಟ್ರೀಕರಿಸುವುದು – ಮುಂತಾದ ಬೇಡಿಕೆಗಳನ್ನು ಮಂಡಿಸಲಾಗಿತ್ತು. ನರಗುಂದ ರೈತರ ಬೆಂಬಲಕ್ಕಾಗಿ ಮಲಪ್ರಭಾ ನೀರಾವರಿ ಪ್ರದೇಶದ ಐದೂ ತಾಲೂಕುಗಳಲ್ಲಿ ಜುಲೈ 21ಕ್ಕೆ ಬಂದ್ ಕರೆ ನೀಡಲಾಯ್ತು. ಸಮಿತಿಯ ಬಂದ್ ಕರೆ ವಾಸ್ತವಿಕವಾಗಿ ಚಳುವಳಿಯ ಪರಾಕಾಷ್ಟೆಗೇರಲು ಕಾರಣವಾಯ್ತು.

### ನವಲಗುಂದ ಮತ್ತು ನರಗುಂದ ಘಟನೆಗಳು (Navalagunda & Naragunda Incidents)

ಸವದತ್ತಿ, ನವಲಗುಂದ ಮತ್ತು ನರಗುಂದಗಳಲ್ಲಿ ರೈತರು ಕಛೇರಿ ಹಾಗೂ ವ್ಯಾಪಾರ – ವಹಿವಾಟು ಇತ್ಯಾದಿಗಳನ್ನು ಬಂದ್ ಮಾಡಿಸಲು ಜುಲೈ 21, 1980ರಂದು ಸಹಸ್ರ ಸಂಖ್ಯೆಯಲ್ಲಿ ರೈತರು ಜಮಾಯಿಸಿದ್ದರು. ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡ ಸವದತ್ತಿಯ ತಹಶೀಲ್ದಾರ್ ತನ್ನ ಕಛೇರಿಯನ್ನು ಮುಚ್ಚಲು

ಒಪ್ಪಿಕೊಂಡಿದ್ದರಿಂದ ಯಾವ ಅಹಿತಕರ ಘಟನೆಯೂ ಸಂಭವಿಸಲಿಲ್ಲ. ಆದರೆ ಉಳಿದೆರಡು ಸ್ಥಳಗಳ ಕಥೆಯೇ ಬೇರೆಯಾಗಿತ್ತು.

ನವಲಗುಂದದ ತಹಶೀಲ್ದಾರ್ ನೆರೆದ ರೈತರಿಗೆ ಕಛೇರಿಯ ಮುಂದೆ ಸಭೆ ನಡೆಸಲು ಅವಕಾಶ ನೀಡಿದರು. ಸಭೆ ಮುಂದುವರಿದಿದ್ದಾಗ ರೈತರನ್ನು ಹೊತ್ತು ತಂದಿದ್ದ ಟ್ರಾಕ್ಟರ್‌ಗಳಿಗೆ ಯಾರೋ ಕಿಡಿಗೇಡಿಗಳು ಹಾನಿ ಮಾಡಿದ್ದರಿಂದ ರೈತರು ರೊಚ್ಚಿಗೆದ್ದರು.

ಅದೇ ದಿನ ನರಗುಂದದಲ್ಲೂ ಕೂಡಾ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ತಹಶೀಲ್ದಾರರ ವರ್ತನೆ ರೈತರನ್ನು ಕೆರಳಿಸಿತ್ತು. ಕಚೇರಿಗೆ ಮುತ್ತಿಗೆ ಹಾಕಿದ್ದ ರೈತರು ದಾರಿಗೆ ಅಡ್ಡ ಮಲಗಿ ತಹಶೀಲ್ದಾರು ಕಛೇರಿ ಪ್ರವೇಶಿಸದಂತೆ ಪ್ರತಿಭಟನೆ ಮಾಡಿದ್ದರು. ಆದರೆ ತಹಶೀಲ್ದಾರ ತನ್ನ ಬೂಟುಕಾಲಿನಿಂದಲೇ ಮಲಗಿದ್ದವರ ಮೇಲೆ ನಡೆದು ಕಛೇರಿ ತಲುಪಿದರು. ರೊಚ್ಚಿಗೆದ್ದ ರೈತರು ಅವರ ಕಛೇರಿಗೆ ನುಗ್ಗಲು ಪ್ರಯತ್ನಿಸಿದರು. ಆದರೆ ಪೊಲೀಸರು ಗುಂಡು ಹಾರಿಸಿದಾಗ ಒಬ್ಬ ರೈತ ಮೃತಪಟ್ಟ. ಇದರಿಂದ ಮತ್ತೂ ಕೆರಳಿದ ರೈತರು ಸಬ್‌ಇನ್ಸ್‌ಪೆಕ್ಟರ್‌ನನ್ನು ಕೊಂದರು. ಕಡತ, ಕುರ್ಚಿ, ಮೇಜು ಇತ್ಯಾದಿಗಳಿಗೆ ಬೆಂಕಿ ಇಟ್ಟರು. ಪೊಲೀಸ್ ಜೀಪು, ವ್ಯಾನ್ ಬೆಂಕಿಗೆ ಆಹುತಿಯಾಯ್ತು. ಮತ್ತೊಬ್ಬ ಪೊಲೀಸ್ ಕೂಡಾ ರೈತರ ಕೋಪಕ್ಕೆ ಬಲಿಯಾದ. ಸಂಜೆ ಹೊತ್ತಿಗೆ ಪೊಲೀಸ್ ಪಡೆ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು. ನರಗುಂದ ಮತ್ತು ನವಲಗುಂದಗಳಲ್ಲಿ ಕರ್ಫ್ಯೂವನ್ನು ಹೇರಲಾಯ್ತು.

ಚಳುವಳಿ ಗದಗ್, ಬೆಟಗೇರಿ, ದಾವಣಗೆರೆ ಚಿತ್ರದುರ್ಗ ಅಂಕೋಲಾ, ಕುಮಟ, ಸಿರಸಿ, ರಾಯಚೂರು, ಶಿವಮೊಗ್ಗ, ಮಂಡ್ಯ, ಕನಕಪುರ ಮತ್ತಿತರ ಭಾಗಗಳಿಗೂ ಹರಡಿತು. ಸಭೆ, ಮೆರವಣಿಗೆ, ಪ್ರದರ್ಶನ, ಬಂದ್ ಇತ್ಯಾದಿಗಳು ನಡೆದವು. ಅಲ್ಲಲ್ಲಿ ಪ್ರದರ್ಶನ ಹಿಂಸೆಗೆ ತಿರುಗಿ ಪೊಲೀಸರು ಗುಂಡು ಹಾರಿಸಬೇಕಾಯ್ತು. ಈ ಅವಧಿಯಲ್ಲಿ ಸುಮಾರು 20 ಜನ ರೈತರು ಪೋಲಿಸರ ಗುಂಡಿಗೆ ಬಲಿಯಾಗಿದ್ದರು.

## ರುದ್ರಪ್ಪನವರ ರೈತ ಸಂಘದ ಉದಯ (Rise of Rudrapp's Ryotasangha)

1980ರ ಹೊತ್ತಿಗೆ ಪಕ್ಷಾತೀತ ನೆಲಗಟ್ಟಿನಲ್ಲಿ ಶಿವಮೊಗ್ಗ, ಬೆಳಗಾಂ, ಬಿಜಾಪುರ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ರೈತ ಸಂಘಗಳು ಕ್ರಿಯಾಶೀಲವಾಗಿದ್ದವು. ಈ ಸಂಘಗಳು ಮಲಪ್ರಭಾ ರೈತರ ಸಮನ್ವಯ ಸಮಿತಿಯೊಂದಿಗೆ 1980ರಲ್ಲಿ ಸಾಮಾನ್ಯ ಸಭೆ ಸೇರಿ 19 ಬೇಡಿಕೆಗಳನ್ನು ಗುರುತಿಸಿದವು. ನಂತರ ಅಕ್ಟೋಬರ್ 1980ರಲ್ಲಿ ಸಲ್ಲಿಸಲಾದ 19 ಬೇಡಿಕೆಗಳ ಪಟ್ಟಿಗೆ ಇದುವೆ ಆಧಾರವಾಗಿತ್ತು. ಈ ಬೇಡಿಕೆಗಳ ಈಡೇರಿಕೆಗಾಗಿ ತೀವ್ರ ಸತ್ಯಾಗ್ರಹ ನಡೆಸಲು ಈ ಸಭೆಯಲ್ಲಿ ತೀರ್ಮಾನಿಸಲಾಯ್ತು. ಚಳುವಳಿಯ ಚುಕ್ಕಾಣಿ ಹಿಡಿದ ಗಣ್ಯರಲ್ಲಿ ಪ್ರಮುಖರಾದವರೆಂದರೆ ಹೊಸಕೇರಿ, ವಿ.ಎನ್. ಹಳಕಟ್ಟಿ, ಬಿ.ಆರ್. ಯಾವಗಲ್, ಎನ್.ಡಿ. ಸುಂದರೇಶ್, ಹೆಚ್. ಎಸ್. ರುದ್ರಪ್ಪ (ಶಿವಮೊಗ್ಗ ಜಿಲ್ಲಾ ರೈತ ಸಂಘದ ಅಧ್ಯಕ್ಷ) ಸಿ. ಎಂ. ರೇವಣ್ಣಸಿದ್ಧಯ್ಯ ಮುಂತಾದವರು.

ಈ ಬದಲಾವಣೆಗೆ ರುದ್ರಪ್ಪ ಮತ್ತು ಸುಂದರೇಶ್ ಹರಿಕಾರರಾಗಿದ್ದರು. ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಅಧ್ಯಕ್ಷರಾಗಿ ರುದ್ರಪ್ಪನವರು ಮತ್ತು ಕಾರ್ಯದರ್ಶಿಯಾಗಿ ಸುಂದರೇಶ್‌ರವರು ಆಯ್ಕೆಯಾದರು. ರೈತರ ಸಮಸ್ಯೆಗಳ ಅನುಭವವಿದ್ದ ರುದ್ರಪ್ಪನವರು ಸಹಕಾರಿ ತತ್ವದ ನೆಲಗಟ್ಟಿನಲ್ಲಿ ಸಕ್ಕರೆ ಕಾರ್ಖಾನೆಯೊಂದನ್ನು ತೆರೆಯಲು ಉದ್ದೇಶಿಸಿದ್ದರು. ಇದು ಸಾಧ್ಯವಾಗದೇ ಇದ್ದಾಗ 1979ರಲ್ಲೇ ಶಿವಮೊಗ್ಗ ಕಬ್ಬು ಬೆಳೆಗಾರರ ಸಂಘವನ್ನು ಕಟ್ಟಿದರು. ಎರಡೂ ಸಂಘಗಳು ಮಲಪ್ರಭಾ ನೀರಾವರಿ ಪ್ರದೇಶದ ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದವು.

### ಪ್ರೊ! ಎಂ. ಡಿ. ನಂಜುಂಡಸ್ವಾಮಿಯವರು ಪ್ರವೇಶ (Entry of M.D. Nanjundaswamy)

ರಾಜ್ಯಮಟ್ಟದಲ್ಲಿ ಪಕ್ಷಾತೀತ ತಳಹದಿಯ ಮೇಲೆ ಸಂಘವೊಂದನ್ನು ಕಟ್ಟಲು ಕಾಲ ಪಕ್ವವಾಗಿದ್ದಾಗ ನಂಜುಂಡಸ್ವಾಮಿಯವರ ಪ್ರವೇಶ ಕರ್ನಾಟಕ ರಾಜ್ಯ ರೈತಸಂಘಕ್ಕೆ ಮತ್ತು ರುದ್ರಪ್ಪನವರಿಗೆ ಹೊಸ ಚೈತನ್ಯ ತಂಬಿತು.

Prof. M. D. Nanjundaswamy



ಕಂದಾಯ ಅಧಿಕಾರಿಗಳು ಮತ್ತು ಇತರೆ ಸರ್ಕಾರಿ ಅಧಿಕಾರಿಗಳಿಂದ ಚರಾಸ್ತಿಯ ಮುಟ್ಟುಗೋಲು ಹಾಕಲಾಗಿದ್ದ ರೈತರಿಗೆ ನಂಜುಂಡಸ್ವಾಮಿ ಕಾನೂನಿನ ಸಲಹೆ ನೀಡುತ್ತಿದ್ದರು. 1980ರ ನಂತರ ಕರ್ನಾಟಕದ ರೈತ ಚಳುವಳಿಯ ಚರಿತ್ರೆ ಬಹುತೇಕ ನಂಜುಂಡಸ್ವಾಮಿ, ರುದ್ರಪ್ಪ ಮತ್ತು ಸುಂದರೇಶ ನಾಯಕತ್ವದಲ್ಲಿನ ಕರ್ನಾಟಕ ರಾಜ್ಯ ರೈತ ಸಂಘದ (KRRS) ಚರಿತ್ರೆಯೇ ಆಗಿದೆ. 1980ರಲ್ಲಿ ಕೆ.ಆರ್.ಆರ್.ಎಸ್. ರಾಜ್ಯ ಮಟ್ಟದ ಸಂಘಟನೆಯಾಯ್ತು. ಇದರ ಬೇಡಿಕೆಗಳಿಗೆ ಬೆಂಬಲವಾಗಿ ರಾಜ್ಯಾದ್ಯಂತ ಚಳುವಳಿಗಳಾದವು. ಈ ಮೂವರು ಅಕ್ಟೋಬರ್ 17ರಂದು ಮುಖ್ಯಮಂತ್ರಿ ಗುಂಡೂರಾಯರನ್ನು ಭೇಟಿಯಾಗಿ ಬೇಡಿಕೆಗಳನ್ನು ಒಳಗೊಂಡ ಜ್ಞಾಪನಾ ಪತ್ರವೊಂದನ್ನು ಸಲ್ಲಿಸಿದರು.

### ರೈತರ 19 ಬೇಡಿಕೆಗಳು (Charter of Ninteen Demnads)

ಅಕ್ಟೋಬರ್ 17, 1980ರಂದು ಮುಖ್ಯಮಂತ್ರಿಯವರ ಮುಂದಿಟ್ಟ ರೈತರ ಬೇಡಿಕೆಗಳು ಈ ಕೆಳಗಿನಂತಿದ್ದವು.

1) ವಿಭಿನ್ನ ಚಳುವಳಿಗಳಲ್ಲಿ ಬಂಧನಕ್ಕೊಳಗಾಗಿರುವ ರೈತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು ಮತ್ತು ಅವರ ವಿರುದ್ಧದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು.
2) ಬೆಲೆಗಳನ್ನು ಇಳಿಸಿ, ಲೆವಿ ಸಂಗ್ರಹಿಸಿ ರೈತರು ಸಾಲಕ್ಕೀಡಾಗಿದ್ದರಿಂದ ಅದನ್ನು ಪೂರ್ಣವಾಗಿ ಮನ್ನಾ ಮಾಡಬೇಕು. ಬ್ಯಾಂಕ್ ಮತ್ತು ಸಹಕಾರಿ ಸಂಘಗಳ ಮಧ್ಯಸ್ಥಿಕೆ ಇಲ್ಲದೇ ಸರ್ಕಾರವೇ ನೇರವಾಗಿ ಸಾಲ ನೀಡಬೇಕು.
3) ಹೆಚ್ಚುತ್ತಿರುವ ಕೃಷಿ ವೆಚ್ಚಕ್ಕೆ ಅನುಗುಣವಾಗಿ ಸಾಲ ನೀಡಬೇಕು.
4) ಸಾಲ ಹಿಂತಿರುಗಿಸದ ರೈತರುಗಳ ಆಸ್ತಿಗಳನ್ನು ಹರಾಜು ಹಾಕಿ ಮುಟ್ಟಗೋಲು ಹಾಕಿಕೊಂಡಿದ್ದನ್ನು ಆಸ್ತಿಗಳನ್ನು ಹಿಂತಿರುಗಿಸಬೇಕು.
5) ಅವೈಜ್ಞಾನಿಕ ಭೂಕಂದಾಯದ ಬದಲಾಗಿ ಉತ್ಪಾದನೆ ಆಧಾರಿತ ತೆರಿಗೆಯನ್ನಷ್ಟೇ ವಿಧಿಸಬೇಕು. ಬೆಟರ್‌ಮೆಂಟ್ ಲೆವಿ, ಕೆರೆ ನೀರಿನ ಮೇಲಿನ ತೆರಿಗೆಗಳನ್ನು ತೆಗೆದುಹಾಕಬೇಕು. ನೀರು ಪೂರೈಕೆ ಆಗದಿದ್ದ ಜಮೀನಿನ ಮೇಲೆ ನೀರಿನ ತೆರಿಗೆ ವಿಧಿಸಕೂಡದು. ರೈತರ ಮೇಲೆ ಹಾಕಲಾದ ಕೃಷಿ ತೆರಿಗೆಯನ್ನು ತೆಗೆದುಹಾಕಬೇಕು.

6) ರೈತರು ಬಳಸುವ ಟ್ರಾಕ್ಟರ್ ಮತ್ತು ಟ್ರೇಲರ್‌ಗಳ ಮೇಲಿನ ಎಲ್ಲ ತೆರಿಗೆಗಳನ್ನು ಮತ್ತು ನಿರ್ಬಂಧಗಳನ್ನು ತೆಗೆದುಹಾಕಬೇಕು.

7) 1979–80ರಿಂದಲೇ ಕಬ್ಬಿನ ಮೇಲಿನ ಕೊಳ್ಳುವ ತೆರಿಗೆಯನ್ನು ನಿಲ್ಲಿಸಬೇಕು.

8) ಯುನಿಟ್‌ಗೆ $6\frac{1}{2}$ ಪೈಸೆಯಂತೆ ವಿದ್ಯುತ್ ದರ ನಿಗದಿಗೊಳಿಸಬೇಕು.

9) ವೆಚ್ಚವಾದ ಮಾನವ ತಾಸುಗಳನ್ನು ಪರಿಗಣಿಸಿ ವೈಜ್ಞಾನಿಕವಾಗಿ ಕೃಷಿಯ ದರಗಳನ್ನು ನಿಗದಿಗೊಳಿಸಬೇಕು. ಸರ್ಕಾರವೇ ಕೃಷಿ ಉತ್ಪನ್ನಗಳನ್ನು ಕೊಳ್ಳಬೇಕು.

10) ಕೃಷಿ ಉತ್ಪನ್ನಗಳ ಬೆಲೆ ನಿಗದಿಗೊಳಿಸುವ ತತ್ವ ವಾಸ್ತವಿಕವಾಗಿರಬೇಕು. ಅಂದರೆ ವೆಚ್ಚವಾದ ಮಾನವ ತಾಸುಗಳು ಮತ್ತು ಇತರೆ ವಸ್ತುಗಳ ಬೆಲೆಗಳನ್ನು ಗಮನಿಸಿ ಕೃಷಿ ಉತ್ಪನ್ನದ ಬೆಲೆ ಗೊತ್ತುಪಡಿಸಬೇಕು.

11) ಕೃಷಿಯನ್ನು ಉದ್ಯಮವೆಂದು ಘೋಷಿಸಿ ಕೃಷಿ ಕಾರ್ಮಿಕನಿಗೂ ಕೈಗಾರಿಕಾ ಕಾರ್ಮಿಕನಿಗೆ ನೀಡುತ್ತಿರುವ ಎಲ್ಲಾ ಸವಲತ್ತುಗಳನ್ನು ರೈತನಿಗೂ ವಿಸ್ತರಿಸಬೇಕು.

12) ಪ್ರೀಮಿಯಂ ಕಟ್ಟದೇ ಬೆಳೆ ವಿಮೆಯನ್ನು ರಾಜ್ಯಾದ್ಯಂತ ಒದಗಿಸಬೇಕು.

13) ಪ್ರತಿಯೊಬ್ಬ ರೈತನಿಗೂ, ರೈತ ಕಾರ್ಮಿಕನಿಗೂ ನಿವೃತ್ತಿ ವೇತನ ದೊರಕಬೇಕು.

14) ಕೈಗಾರಿಕಾ ಕಾರ್ಮಿಕರಿಗೆ ನೀಡುವಂತೆ ಕೃಷಿ ಕಾರ್ಮಿಕರಿಗೂ ಕೂಲಿ ಮತ್ತಿತರ ಸೌಲಭ್ಯಗಳನ್ನು ಒದಗಿಸಬೇಕು; ರೈತರಿಗೆ ಸರಿಯಾದ ಬೆಲೆಯಷ್ಟೇ ನೀಡಿದರೆ ಸಾಲದು, ಕಾಲ ಕಾಲಕ್ಕೆ ಕೃಷಿ ಕಾರ್ಮಿಕರ ಕೂಲಿಯನ್ನು ಪರಿಷ್ಕರಿಸಬೇಕು.

15) ಭೂಮಿಯ ಮೇಲಿನ ಒತ್ತಡ ತಗ್ಗಿಸಲು ಕೃಷಿಯೋಗ್ಯ ಸರ್ಕಾರಿ ಜಮೀನನ್ನು ಭೂಹೀನ ಕೃಷಿ ಕಾರ್ಮಿಕರಿಗೆ ನೀಡಿ ಸರ್ಕಾರದ ಉಸ್ತುವಾರಿಯಲ್ಲೇ ಸಾಗುವಳಿ ಮಾಡಿಸಬೇಕು.

16) ಭೂಸುಧಾರಣೆಯಿಂದ ಜಮೀನು ಪಡೆದ ಗೇಣಿದಾರರಿಗೆ (Occupancy Price) ಹಕ್ಕುಪತ್ರ ನೀಡಬೇಕು. ಭೂಮಾಲೀಕರಿಗೆ ಒಂದೇ ಕಂತಿನಲ್ಲಿ ಪರಿಹಾರ ಧನ ನೀಡಬೇಕು.

17) ಯೋಜನಾ ವೆಚ್ಚದ ಪ್ರತಿಶತ 80 ನ್ನು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಮೀಸಲಿರಿಸಬೇಕು.

18) ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಯೋಗ್ಯ ರಸ್ತೆಗಳನ್ನು ಒದಗಿಸಬೇಕು.

19) ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಹುದ್ದೆಗಳಲ್ಲಿ ರೈತರ ಮಕ್ಕಳಿಗೆ ಶೇ. 50 ಸ್ಥಾನಗಳನ್ನು ಮೀಸಲಿರಿಸಬೇಕು.

ಗುಂಡೂರಾವ್‌ರವರ ಸರ್ಕಾರ 12 ಬೇಡಿಕೆಗಳನ್ನು ಆ ಕೂಡಲೇ ಒಪ್ಪಿರುವುದಾಗಿ ಘೋಷಿಸಿ ಉಳಿದವುಗಳನ್ನು ಕೇಂದ್ರ ಸರ್ಕಾರ ಹಾಗೂ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮತಿ ಪಡೆದ ನಂತರ ಪರಿಶೀಲಿಸುವುದಾಗಿ ತಿಳಿಸಿತು.

### ಕರ್ನಾಟಕ ರಾಜ್ಯ ರೈತಸಂಘದ ಹೋರಾಟದ ಪ್ರಮುಖ ವಿಷಯಗಳು (Major Issues of KRRS Movement)

ಕ.ರಾ.ರೈತ ಸಂಘ ಒಂದಿಲ್ಲೊಂದು ವಿಷಯದ ಮೇಲೆ ಚಳುವಳಿ ನಡೆಸುತ್ತಲೇ ಬಂದಿದೆ. ಆಗಿಂದಾಗ್ಗೆ ತನ್ನ ಅಸ್ತಿತ್ವವನ್ನು ಸೂಚಿಸಲು ರೈತರನ್ನು ಒಗ್ಗೂಡಿಸಿ ಹೋರಾಡುತ್ತಾ ಮುನ್ನಡೆದಿದೆ. ಕ.ರಾ.ರೈತ ಸಂಘ ಯಾವಯಾವ ವಿಷಯಗಳಿಗಾಗಿ ಹೋರಾಡಿದೆ ಎಂಬುದನ್ನು ಈ ಕೆಳಕಂಡ ಅಂಶಗಳಿಂದ ತಿಳಿಯಬಹುದು.

### (1) ಸಾಲ ವಸೂಲಿ ವಿಷಯ ಮತ್ತು ಭ್ರಷ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳ ಗ್ರಾಮ ಪ್ರವೇಶ ನಿಷೇಧ. (Loan Recovery Issue and Barring Corrupt Officials and Politicians into Villages)

ಕ.ರಾ.ರೈತ ಸಂಘದ ಮುಂದಾಳತ್ವದಲ್ಲಿ ರೈತ ಹೋರಾಟಕ್ಕೆ ಕಾರಣವಾದ ಮತ್ತೊಂದು ವಿಷಯವೆಂದರೆ ಸಾಲ ವಸೂಲಿ ವಿಷಯ. ಸಾಲ ವಸೂಲಿಗೆ ಸಂಬಂಧಿಸಿದ ಅಧಿಕಾರಿಗಳು ರೈತರನ್ನು ಶೋಷಿಸುತ್ತಿದ್ದರು. ಸಾಲ ಕಟ್ಟದೇ ಇದ್ದವರ ಹೆಸರನ್ನು ಸಾರ್ವಜನಿಕವಾಗಿ ಘೋಷಿಸುವುದು, ನಿತ್ಯ ಬಳಕೆಯ ಪಾತ್ರೆ – ಪರಿಕರಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಇತ್ಯಾದಿಗಳಿಂದ ರೈತರು ಅವಮಾನಿತರಾಗಿದ್ದರು.

ಕ.ರಾ.ರೈತ ಸಂಘ ಈ ವಿಷಯವನ್ನು ಕೈಗೆತ್ತಿಕೊಂಡು ಚಳುವಳಿಯನ್ನು ಮುನ್ನಡೆಸಿತು. ಪೂರ್ವಾನುಮತಿ ಇಲ್ಲದೆ ಹಳ್ಳಿಯನ್ನು ಪ್ರವೇಶಿಸದಂತೆ ಭ್ರಷ್ಟ ಅಧಿಕಾರಿ ಮತ್ತು ರಾಜಕಾರಣಿಗಳಿಗೆ ನಿಷೇಧ ಹೇರಿ ಹಳ್ಳಿಯ ಹೊರಗೆ ಫಲಕಗಳನ್ನು ಹಾಕಲಾಗಿತ್ತು. ಜಪ್ತಿ ಮಾಡಲಾಗಿದ್ದ ತಮ್ಮ ವಸ್ತುಗಳನ್ನು ಮರಳಿ ಪಡೆದುಕೊಳ್ಳುವುದೇ ಅಲ್ಲದೇ ರೈತರೇ ತೀರ್ಮಾನಿಸಿದಂತೆ ಯಾವ ಅಧಿಕಾರಿ ಭ್ರಷ್ಟನೋ ಅವನ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನಿಸಿದರು. ರೈತರಿಗೆ ಕಿರುಕುಳ ನೀಡುವ ಅಧಿಕಾರಿಗಳಿಗೆ ಪ್ರತಿ ಕಿರುಕುಳ ನೀಡುವ ಕ್ರಮ ಇದಾಗಿತ್ತು.

### (2) ಪರಿಸರದ ವಿಷಯ (Environmental Issue)

ಪರಿಸರ ಸಂಬಂಧಿತ ವಿಷಯಗಳಿಗಾಗಿಯೂ ರೈತರು ಹೋರಾಡಿದ್ದಾರೆ. ಕಾಗದ ಕಾರ್ಖಾನೆಯ ಬಳಕೆಗಾಗಿ ನೀಲಗಿರಿ ಸಸ್ಯವನ್ನು ಬೆಳೆಸುವ ಪ್ರದೇಶದ ವಿಸ್ತರಣೆಯಲ್ಲಿ ಕ.ರಾ.ರೈತ ಸಂಘಕ್ಕೆ ವಾಣಿಜ್ಯ ಆಸಕ್ತಿಗಳು ಕಂಡುಬಂದುದರಿಂದ ಅದನ್ನು ವಿರೋಧಿಸಿತು. ಆದರಿಂದ ನೀಲಗಿರಿಗೆ ಬದಲಾಗಿ ಕೆಲವೊಂದು ಜನೋಪಯೋಗಿ ಸಸ್ಯಗಳನ್ನು ಬೆಳೆಸಬೇಕೆಂದು ಆಗ್ರಹಿಸಿತು.

### (3) ಗಣಿಗಾರಿಕೆ – (Minning Issue)

ಕ.ರಾ.ರೈತ ಸಂಘ ಗ್ರಾನೈಟ್ ಕಲ್ಲನ್ನು ಸಾಗಿಸುವ ವಿಷಯದ ಮೇಲೂ ಗಮನ ಹರಿಸಿತ್ತು. ಹಳ್ಳಿಗರಿಗೆ ಯಾವ ಲಾಭವೂ ಇಲ್ಲದೇ ಗ್ರಾನೈಟ್‌ನ್ನು ಸಾಗಿಸಲಾಗುತ್ತಿತ್ತು. ಇದನ್ನು ವಿರೋಧಿಸಿದ ರೈತರು, ಗಣಿ ಉದ್ಯಮಿಗಳು ಹಳ್ಳಿಯ ಅಭಿವೃದ್ಧಿಗೆ ಗೌರವಧನ ನೀಡುವುದರ ಜೊತೆಗೆ ಸರ್ಕಾರದ ಬಾಕಿಯನ್ನೂ ತೀರಿಸುವಂತೆ ಮಾಡಿದರು. ನಂತರದಲ್ಲಿ ಕ.ರಾ.ರೈ. ಸಂಘದ ವಿಷಯಗಳ ಪಟ್ಟಿಗೆ ಮರಳು, ಮರ ಇತ್ಯಾದಿ ವಿಷಯಗಳೂ ಸೇರಿಕೊಂಡವು. ಈ ಸಂಪನ್ಮೂಲಗಳನ್ನು ರಾಷ್ಟ್ರೀಕರಿಸಬೇಕೆಂದು ಕೇಳಿದ ರೈತಸಂಘ ಇವುಗಳ ಸೂಕ್ತ ಬಳಕೆಗೂ ಆಗ್ರಹಿಸಿತು. ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಮತ್ತು ಗ್ರಾಮೀಣ ಜನತೆಗೆ ಅವುಗಳಿಂದ ಲಾಭ ದೊರಕುವ ರೀತಿಯಲ್ಲಿ ಸಂಪನ್ಮೂಲಗಳ ಬಳಕೆಯಾಗಬೇಕೆಂದು ರೈತ ಸಂಘ ವಾದಿಸಿತು.

### (4) ಬಹುರಾಷ್ಟ್ರೀಯ ಕಂಪನಿಗಳ ವಿರೋಧ (Opposing KFC and MNCs)

ಇತ್ತೀಚೆಗಷ್ಟೇ ಕ.ರಾ.ರೈ. ಸಂಘ ಬೀಜೋತ್ಪನ್ನಗಳ ಸ್ವಾಮ್ಯದ (Patenting of Seeds) ಸಮಸ್ಯೆಯನ್ನು ಕೈಗೆತ್ತಿಕೊಂಡಿದೆ. ಈ ಕ್ಷೇತ್ರಕ್ಕೆ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶವನ್ನು ರೈತಸಂಘ ವಿರೋಧಿಸಿದೆ. ಕೆಂಟುಕಿ ಫಾಸ್ಟ್ ಫುಡ್ ರೆಸ್ಟೋರೆಂಟಿಗೆ ಮುತ್ತಿಗೆ ಮತ್ತು ಬಿತ್ತನೇ ಬೀಜ ತಯಾರಿಕಾ ಬಹುರಾಷ್ಟ್ರೀಯ ಕಂಪನಿಗಳು ಇತ್ಯಾದಿ ವಿಷಯಗಳನ್ನು ತೆಗೆದುಕೊಂಡು ಹೋರಾಟ ಮುಂದುವರಿಸಿತ್ತು.

## (5) ನೀರಾ ಚಳುವಳಿ (Neera Movement)

1990ರ ದಶಕದಲ್ಲಿ ಕರ್ನಾಟಕದ ತೆಂಗು ಬೆಳೆಯುವ ಪ್ರದೇಶಗಳಲ್ಲಿ ನುಸಿ ಪೀಡೆಯಿಂದ ರೈತರು ಸಂಕಷ್ಟಕ್ಕೆ ಒಳಗಾದರು. ಸಾಂಪ್ರದಾಯಿಕ ಔಷಧೋಪಚಾರ ಪದ್ಧತಿಯು ನುಸಿಪೀಡೆಯನ್ನು ನಿವಾರಣೆ ಮಾಡಲಿಲ್ಲ. ರೋಗ ಪೀಡಿತ ತೆಂಗಿನ ಮರಗಳಿಂದ ತೆಂಗಿನಕಾಯಿ ಉತ್ಪಾದನೆ ಕುಂಠಿತಗೊಂಡಿತು. ಸಂಕಷ್ಟಕ್ಕೊಳಗಾದ ರೈತರು ನಂಜುಂಡಸ್ವಾಮಿಯವರು ನೇತೃತ್ವದಲ್ಲಿ ಚಳುವಳಿಯು ಪ್ರಾರಂಭವಾಯಿತು.

ಈ ಹೋರಾಟದ ಮೂಲಕ ತೆಂಗಿನ ಮರದಿಂದ ನೀರಾ ಎಂಬ ಪಾನೀಯ ತಯಾರಿಕೆಗೆ ಸರ್ಕಾರ ಅನುಮತಿ ನೀಡಬೇಕು ಮತ್ತು ನೀರಾ ಉತ್ಪನ್ನದಿಂದ ಇತರೇ ಉತ್ಪನ್ನಗಳಾದ ಬೆಲ್ಲ, ಚಾಕಲೇಟು ತಯಾರಿಸಬೇಕು, ಶ್ರೀಲಂಕ, ಮಲೇಶಿಯ, ಥಾಯ್‌ಲ್ಯಾಂಡ್ ಮತ್ತು ಇಂಡೋನೇಷಿಯಾ ದೇಶಗಳಲ್ಲಿ ತೆಂಗು ಬೆಳೆಗಾರರಿಗೆ ಸಹಾಯ ಮಾಡಿದ ಹಾಗೆ ತಮಗೂ ಸಹಾಯ ಮಾಡಬೇಕು ಎಂದು ಆಗ್ರಹಿಸಿದರು. ಸರ್ಕಾರವು ಸಾರಾಯಿ ಗುತ್ತಿಗೆದಾರರ ಒತ್ತಡಕ್ಕೆ ಒಳಗಾಗಿ ನೀರಾ ತಯಾರಿಕೆಗೆ ಅನುಮತಿ ನಿರಾಕರಿಸಲಾಗಿದೆ ಎಂದು ರೈತರು ಹೋರಾಟಕ್ಕೆ ಮುಂದಾದರು.

ಚಳುವಳಿಯು ತೀವ್ರ ಸ್ವರೂಪ ಪಡೆದು ಚನ್ನಪಟ್ಟಣ ತಾಲ್ಲೋಕಿನ ವಿಠೇಲನಹಳ್ಳಿಯ ಬಳಿ ಪೊಲೀಸರ ಗೋಲಿಬಾರಿನಲ್ಲಿ ಇಬ್ಬರು ರೈತರು ಮೃತಪಟ್ಟರು. ಚಳುವಳಿ ಹೆಚ್ಚು ವ್ಯಾಪಕ ಮತ್ತು ಗಂಭೀರ ಸ್ವರೂಪ ಪಡೆಯಿತು. ನಂತರದ ದಿನಗಳಲ್ಲಿ ನುಸಿಪೀಡೆಯು ಕ್ಷೀಣಿಸಿದ ತರುವಾಯ ತೆಂಗು ಇಳುವರಿ ವೃದ್ಧಿಸಿತು. ನೀರಾ ಚಳುವಳಿಯ ತೀವ್ರತೆ ಕಳೆದುಕೊಂಡಿತು.

**Newspaper Article**



# 'Blacklist Monsanto or we will launch direct action'

Special Correspondent

**BELGAUM:** Karnataka Rajya Raitha Sangha and Hasiru Sene have said that they will launch "direct action" against Monsanto if the State government fails to initiate criminal proceedings against the multi-national company for allegedly supplying spurious Bt cotton seeds under the brand name, Mahyco, to growers this year.

Also, the Coalition for GM Free Karnataka Movement demanded that the government take punitive action against Mahyco which Bt cotton seeds failed to give yield once again this year.

Releasing a report from a fact-finding committee here on Tuesday, and quoting from the report, KRRS president Kodihalli Chandrashekhar said that the government should not only initiate criminal proceedings but also blacklist Monsanto and ensure that the company compensated losses to growers at the rate of Rs. 60,000 per acre at the earliest. Otherwise, the government would only be forcing farmers to resort to "direct action" against the company.

He said that the Coalition for GM Free Karnataka had launched the fact-finding committee by experts, including H.R. Prakash, an expert on cotton, and others from KRRS and Alliance for Sustainable and Holistic Agriculture.

The committee members carried out field studies in Haveri and Davangere districts for five days last month. During their study, they observed that Mahyco Bt cotton Kanaka variety seeds fully failed to yield in both the districts resulting in both investment and yield losses.

He said that Monsanto purchased Mahyco a few years ago and continued to supply seeds under the brand name, Mahyco, as the brand had gained popularity over a period.

As seeds supplied by the company turned out to be spurious, the company should be held responsible and made accountable by way of distributing compensation to the affected farmers.

Of the 5.32 lakh acres under cotton this year, Bt cotton was taken up in nearly 5.12 lakh acres, all of which failed to yield.

Mr. Chandrashekar criticised the scientists in agriculture universities and research institutions for advocating Bt cotton seeds only to serve the interests of multi-national companies at the cost of seed sovereignty of the country. None of the agriculture universities in the State had ventured to develop native variety after the release of the DCH 32 variety about three decades ago.

*Source: The Hindu English Daily*

ನಂಜುಂಡಸ್ವಾಮಿಯವರ ನಿಧನದ ನಂತರ ರಾಜ್ಯ ರೈತಸಂಘವು ಹಲವು ಬಣಗಳಾಗಿ ವಿಭಜನೆಗೊಂಡವು. ನಾಯಕತ್ವದ ಕೊರತೆ, ಎರಡನೆ ತಲೆಮಾರಿನ ನಾಯಕ ಕಾರ್ಯಶೈಲಿಯ ವಿಭಿನ್ನತೆಯು ರೈತಸಂಘದ ಹೋರಾಟದ ಸ್ಫೂರ್ತಿಯನ್ನು ಕುಂಠಿತಗೊಳಿಸಿತು. ರಾಜ್ಯಮಟ್ಟದಲ್ಲಿ ರೈತರನ್ನು ಪ್ರತಿನಿಧಿಸುವ ಸಂಘಟನೆ ಇಲ್ಲದೆ ಪ್ರಾಂತವಾರು ರೈತ ಸಂಘಗಳು ಉದಯವಾಯಿತು.

## 7.3 ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿ (Backward Class and Dalit Movement)

### ಪೀಠಿಕೆ (Introduction)

ಹಿಂದುಳಿದ ವರ್ಗ ಅಥವಾ ಜಾತಿಗಳ ಚಳುವಳಿ ಎಂಬ ಪರಿಕಲ್ಪನೆಯನ್ನು ಜಾತಿಯ ಅಸಮಾನತೆ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಭೇದಭಾವ ಮತ್ತು ಅವಕಾಶಗಳ ವಂಚನೆಯ ವಿರುದ್ಧ ಬ್ರಾಹ್ಮಣೇತರ ಜಾತಿಗಳು ನಡೆಸಿದ ಚಳುವಳಿಯನ್ನು ಸೂಚಿಸುತ್ತದೆ.

ಈ ಚಳುವಳಿಯು ಜಾತಿಯ ಅಸಮಾನತೆಯನ್ನು ಹೋಗಲಾಡಿಸಿ ಬಡವರ ಆರ್ಥಿಕ ಪ್ರಗತಿಯನ್ನು ಪ್ರೋತ್ಸಾಹಿಸಿ ಅವಕಾಶಗಳನ್ನು ಪಡೆಯುವ ಮೂಲ ಪ್ರಯತ್ನವಾಗಿತ್ತು.

### ಚಳುವಳಿಯ ಬೆಳವಣಿಗೆ (The Course of the Movement)

ಪೂನ ನಗರದ ಜ್ಯೋತಿರಾವ್ ಪುಲೆಯವರು ಮೇಲ್ಜಾತಿಯ ದೌರ್ಜನ್ಯದ ವಿರುದ್ಧ ಮೊದಲು ಧ್ವನಿ ಎತ್ತಿದರು. 1873ರಲ್ಲಿ ಸತ್ಯಶೋಧಕ ಸಮಾಜವನ್ನು ಸ್ಥಾಪಿಸುವ ಮೂಲಕ ಸಮಾಜ ಸುಧಾರಣಾ ಚಳುವಳಿ ಪ್ರಾರಂಭಿಸಿದರು. ಶೂದ್ರರು ಮತ್ತು ಅಸ್ಪೃಶ್ಯರನ್ನು ಗುಲಾಮಗಿರಿ ಮತ್ತು ಮೇಲ್ಜಾತಿಯವರ ಹಿಡಿತದಿಂದ ಮುಕ್ತರನ್ನಾಗಿಸುವುದು ಸತ್ಯಶೋಧಕ ಸಮಾಜದ ಮೂಲ ಉದ್ದೇಶವಾಗಿತ್ತು.

ಶಿಕ್ಷಣದ ಮಹತ್ವವನ್ನು ಮನಗಂಡಿದ್ದ ಪುಲೆಯವರು 1848ರಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಶಾಲೆಯನ್ನು ಸ್ಥಾಪಿಸಿದರು. ಸತ್ಯಶೋಧಕ ಸಂಘಟನೆಯ ಮೂಲಕ ತನ್ನ ಅನುಯಾಯಿಗಳು ಪುರೋಹಿತಶಾಹಿಯನ್ನು ಧಿಕ್ಕರಿಸಲು ಸೂಚಿಸಿದರು. ಭಾರತೀಯ ಸಂಸ್ಕೃತಿಯನ್ನು ವಿನೂತನಗೊಳಿಸಲು ಮೂರ್ತಿಪೂಜೆ ಮತ್ತು ಕಂದಾಚಾರಗಳನ್ನು ವಿರೋಧಿಸಿದರು.

### ಸಾಹು ಮಹಾರಾಜ್ ಮತ್ತು ಸತ್ಯಶೋಧಕ ಸಮಾಜ (Sri Sahu Maharaj and Satya Shodak Samaj)

ಕೊಲ್ಹಾಪುರದ ಮಹಾರಾಜ ಶ್ರಿ ಸಾಹುರವರು ಸತ್ಯಶೋಧಕ ಸಮಾಜದ ಉದ್ದೇಶ ಮತ್ತು ಆಶಯಗಳನ್ನು ತಮ್ಮ ಸಂಸ್ಥಾನದಲ್ಲಿಯೂ ಅಳವಡಿಸಿಕೊಂಡರು. ಉತ್ತಮ ಸ್ಥಾನ ಗಳಿಸಲು ಕೆಳವರ್ಗದವರನ್ನು ಜಾಗೃತಗೊಳಿಸಿದಾಗ ಮಾತ್ರ ಪ್ರಜಾತಂತ್ರ ವ್ಯವಸ್ಥೆಯು ಉತ್ತಮಗೊಳ್ಳುತ್ತದೆ ಎಂದು ಮಹಾರಾಜರು ತಿಳಿದಿದ್ದರು. ಸಾಹು ಮಹಾರಾಜರು ಶಾಲೆ ಮತ್ತು ವಸತಿ ನಿಲಯಗಳನ್ನು ಕೆಳವರ್ಗದವರಿಗಾಗಿಯೇ ಪ್ರಾರಂಭಿಸಿದರು. ಸಮಾಜ ಸುಧಾರಣೆಯನ್ನು ಪ್ರತಿಪಾದಿಸುವುದರ ಜೊತೆಗೆ ಕೋಮುಪ್ರಾತಿನಿಧ್ಯವನ್ನು ತಮ್ಮ ಸಂಸ್ಥಾನದಲ್ಲಿ ನೀಡಿದ್ದರು.

## ಜಸ್ಟೀಸ್ ಪಾರ್ಟಿ ಮತ್ತು ಮದ್ರಾಸ್‌ನಲ್ಲಿ ಹಿಂದುಳಿದ ವರ್ಗಗಳ ಚಳುವಳಿ (Justice Party and Non - Brahmin Movement in Madras)

20ನೇ ಶತಮಾನದ ಎರಡನೇ ದಶಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯು ಮದ್ರಾಸ್ ಪ್ರಾಂತ್ಯದಲ್ಲಿ ವ್ಯವಸ್ಥಿತವಾಗಿ ರೂಪುಗೊಂಡಿತು. "ದಕ್ಷಿಣ ಭಾರತದ ಉದಾರಿ ಒಕ್ಕೂಟವು" (The South Indian Liberal Federation) 1916ರಲ್ಲಿ ಜಸ್ಟೀಸ್ ಪಾರ್ಟಿಯಾಗಿ ಪರಿವರ್ತನೆಯಾಯಿತು.

ಮದ್ರಾಸ್‌ನಲ್ಲಿ ಹಿಂದುಳಿದ ವರ್ಗಗಳ ನಾಯಕರಾದ ಡಾ॥ ಟಿ ಎಂ. ನಾಯ್ಕರ್, ಸರ್॥ ಪಿ ಟಿ ಚಟ್ಟಿಯಾರ್ ಮತ್ತು ಟಿ ಇ. ಮೊದಲಿಯಾರ್ ಮುಂತಾದ ನಾಯಕರು ಜೊತೆ ಕೂಡಿ "ದಕ್ಷಿಣ ಭಾರತ ಜನರ ಸಂಘ (South Indian People's Assiciation) ಎಂಬ ಕೂಡು ಬಂಡವಾಳ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆಯು ವಾರ್ತಾಪತ್ರಿಕೆಗಳನ್ನು ಪ್ರಾರಂಭಿಸುವ ಮೂಲಕ ಬ್ರಾಹ್ಮಣೇತರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶ ಹೊಂದಿತ್ತು. ಇಂಗ್ಲಿಷ್‌ನಲ್ಲಿ "ಜಸ್ಟೀಸ್"(Justice) ತಮಿಳಿನಲ್ಲಿ "ದಿ ದ್ರಾವಿಡಿಯನ್" (Dravidian) ಮತ್ತು ತೆಲುಗು ಭಾಷೆಯಲ್ಲಿ "ಆಂಧ್ರ ಪ್ರಕಾಶಿಕ" ಪತ್ರಿಕೆಗಳನ್ನು ಪ್ರಾರಂಭಿಸಿದರು.

## ಸ್ವ–ಗೌರವ ಚಳುವಳಿ ಅಥವಾ ದ್ರಾವಿಡ ಹಂತ (The Self - Respect Movement or the Dravidian Phase)

ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯ್ಕರ್‌ರವರ ಪ್ರವೇಶದಿಂದಾಗಿ ಹಿಂದುಳಿದ ವರ್ಗಗಳ ಚಳುವಳಿಯಲ್ಲಿ ಸ್ವ – ಗೌರವ ಸ್ವರೂಪ ಪಡೆಯಿತು. ಜಾತಿಯ ಆಧಾರದ ಮೇಲೆ ವ್ಯಕ್ತಿಯ ಸ್ಥಾನವನ್ನು ನಿರ್ಧರಿಸುವುದನ್ನು ಪೆರಿಯಾರ್ ನಿರಾಕರಿಸಿದರು. ಸ್ವ–ಗೌರವವನ್ನು ವ್ಯಕ್ತಿ ಬೆಳೆಸಿಕೊಳ್ಳುವ ಮೂಲಕ ಮೇಲ್ಜಾತಿಗಳನ್ನು ಧಿಕ್ಕರಿಸಬೇಕು ಎಂದು ಪ್ರತಿಪಾದಿಸಿದರು. ದ್ರಾವಿಡರ ಸ್ವಗೌರವ ಈ ಚಳುವಳಿಯ ಮೂಲಾಂಶವಾಗಿತ್ತು. ಇದರಿಂದ ಹಿಂದುಳಿದ ವರ್ಗಗಳಿಂದ ಹೆಚ್ಚಿನ ಬೆಂಬಲ ವ್ಯಕ್ತವಾಯಿತು.

ಕಾಲಾನಂತರ ಈ ಚಳುವಳಿಯು ಹೆಚ್ಚು ತೀವ್ರ ಮತ್ತು ಹಿಂಸಾತ್ಮಕ ಸ್ವರೂಪ ಪಡೆಯಿತು. ಪಾಕಿಸ್ತಾನ ಮಾದರಿಯಲ್ಲಿ "ದ್ರಾವಿಡಸ್ಥಾನ" ಎಂಬ ಬ್ರಾಹ್ಮಣೇತರಿಗಾಗಿ ಒಂದು ದೇಶವನ್ನು ಸ್ಥಾಪಿಸಬೇಕೆಂದು 1944ರಲ್ಲಿ ದ್ರಾವಿಡ ಖಸಗಂ (DK) ಸಂಘಟನೆಯ ಮೂಲಕ ಬೇಡಿಕೆ ಇಟ್ಟರು. ಸಿ. ಎನ್. ಅಣ್ಣಾದೊರೆಯವರು ಈ ಸಾಮಾಜಿಕ ಚಳುವಳಿಯಲ್ಲಿ ಭಾಗವಹಿಸಿದಾಗ ರಾಜಕೀಯ ಸ್ವರೂಪವನ್ನು ಪಡೆಯಿತು. 1949ರಲ್ಲಿ ದ್ರಾವಿಡ ಮುನ್ನೇತ್ರ ಖಸಗಂ (DMK) ಎಂಬ ಪಕ್ಷವನ್ನು ಸ್ಥಾಪಿಸಿ ದ್ರಾವಿಡ ನಾಡನ್ನು ಸ್ಥಾಪಿಸುವ ಉದ್ದೇಶವನ್ನೂ ಹೊಂದಿದ್ದರು.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಡಿಕೆ ಮತ್ತು ಡಿಎಂಕೆ ಸಂಘಟನೆಗೆ ಸ್ವ–ಗೌರವದ ಮೂಲಕ ದ್ರಾವಿಡ ದೇವರು ಮತ್ತು ಸಂಸ್ಕೃತಿಯ ಶ್ರೇಷ್ಠತೆಯನ್ನು ಎತ್ತಿಹಿಡಿದು ಆರ್ಯ ಸಂಸ್ಕೃತಿಯನ್ನು ಟೀಕಿಸಿದರು. ಸ್ವಾತಂತ್ರ್ಯ ಮತ್ತು ಸ್ವಗೌರವಕ್ಕಾಗಿ ತೀವ್ರಗಾಮಿ ಹೋರಾಟದ ಮಾರ್ಗ ಹಿಡಿದರು. ದ್ರಾವಿಡ ಸಂಸ್ಕೃತಿಗೆ ರಾಜಕೀಯ ರೂಪ ನೀಡುವ ಮೂಲಕ ಚಳುವಳಿಯು ತಮಿಳು ಸಂಸ್ಕೃತಿಯ ಮೂಲಕ ಉನ್ನತ ಜಾತಿಗಳ ಪ್ರಾಬಲ್ಯದ ವಿರುದ್ಧ ಹೋರಾಡುವ ಸ್ವ – ಗೌರವ ಪಡೆದರು.

## ಕರ್ನಾಟಕದಲ್ಲಿ ಬ್ರಾಹ್ಮಣೇತರ ಚಳುವಳಿ (Non - Brahmin Movement in Karnataka)

ಬ್ರಾಹ್ಮಣೇತರ ಚಳುವಳಿಯು ಮೈಸೂರು ಸಂಸ್ಥಾನದಲ್ಲಿಯೂ ಪ್ರಾರಂಭವಾಯಿತು. ಒಕ್ಕಲಿಗರು, ಲಿಂಗಾಯಿತರು ಮತ್ತು ಮುಸಲ್ಮಾನರು ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣರಿಗಿಂತ ಅವಕಾಶ ವಂಚಿತರಾಗಿರುವುದನ್ನು ಮನಗಂಡು ತಮ್ಮ ತಮ್ಮ ಸಮುದಾಯದ ಸಂಘಗಳನ್ನು ಸ್ಥಾಪಿಸಿಕೊಂಡರು. 1906ರಲ್ಲಿ ಒಕ್ಕಲಿಗರ ಸಂಘ,

1909ರಲ್ಲಿ ಲಿಂಗಾಯತ ಸಂಘ ಮತ್ತು 1917ರಲ್ಲಿ ವಿವಿಧ ಜಾತಿಯ ಜನ ಪ್ರಜಾಮಿತ್ರ ಮಂಡಳಿ ಎಂಬ ಸಂಘಟನೆಗಳನ್ನು ಸ್ಥಾಪಿಸಿ, 1918ರಲ್ಲಿ ಸರ್ಕಾರಿ ಸೇವೆ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವುದು ಮತ್ತು ಪ್ರಜಾಪ್ರತಿನಿಧಿ ಸಭೆಗೆ ವಿವಿಧ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ಮೈಸೂರು ಮಹಾರಾಜರಿಗೆ ಮನವಿ ಮಾಡಿದರು. ಈ ಮಂಡಳಿಯ ಮನವಿಯ ಅನುಸಾರ ಮಹರಾಜರು ಮಿಲ್ಲರ್ ಆಯೋಗವನ್ನು ನೇಮಿಸಿದರು. ಮಿಲ್ಲರ್ ಆಯೋಗವು ಪ್ರಜಾಮಿತ್ರ ಮಂಡಳಿಯ ಎಲ್ಲಾ ಬೇಡಿಕೆಗಳನ್ನು ಪರಿಗಣಿಸಿ ಮೀಸಲಾತಿಯನ್ನು ನೀಡಬೇಕೆಂದು ವರದಿ ಸಲ್ಲಿಸಿತು. ಅಂದಿನಿಂದ ಹಿಂದುಳಿದ ವರ್ಗಗಳ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯದಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಸಾಧ್ಯವಾಯಿತು.

### ಕೇರಳದಲ್ಲಿ ಬ್ರಾಹ್ಮಣೇತರ ಚಳುವಳಿ (Non - Brahmin Movement in Kerala)


ಕೇರಳದಲ್ಲಿ ಬ್ರಾಹ್ಮಣೇತರ ಚಳುವಳಿಯು ಮಹಾರಾಷ್ಟ್ರ, ಮದ್ರಾಸ್ ಮತ್ತು ಕರ್ನಾಟಕ ರಾಜ್ಯಗಳ ಬ್ರಾಹ್ಮಣೇತರ ಚಳುವಳಿಗಿಂತ ವೈಚಾರಿಕವಾಗಿ ಭಿನ್ನವಾಗಿತ್ತು. ಕೇರಳದಲ್ಲಿ ಕೇವಲ ಟ್ರಾವಂಕೂರ್ ಮತ್ತು ಮಲಬಾರಿನ ಪ್ರದೇಶಕ್ಕೆ ಸೀಮಿತವಾಗಿದ್ದ ಈ ಚಳುವಳಿಯು ಬ್ರಾಹ್ಮಣ ವಿರೋಧಿಯಾಗಿರಲಿಲ್ಲ.

ಕೇರಳ ರಾಜ್ಯದಲ್ಲಿದ್ದ ತಮಿಳು ಬ್ರಾಹ್ಮಣರು ಮಲೆಯಾಳಿ ಬ್ರಾಹ್ಮಣರಿಗಿಂತ ಹೆಚ್ಚು ಸೌಲಭ್ಯ ಪಡೆದು ಆಡಳಿತ, ಶಿಕ್ಷಣ ಮತ್ತು ಸಾರ್ವಜನಿಕ ಸೇವೆಯಲ್ಲಿ ಉನ್ನತ ಅಂತಸ್ತು ಗಳಿಸಿದ್ದರು. ಇದನ್ನರಿತ ನಾಯರ್ ಜಾತಿಯ ಜನ ತಮಿಳು ಬ್ರಾಹ್ಮಣರ ವಿರುದ್ಧ ಮಲೆಯಾಳಿ ಸಭಾ ಸಂಘಟನೆಯ ಮೂಲಕ ಮಹರಾಜರಿಗೆ ಮನವಿ ಮಾಡಿ ಸ್ಥಳೀಯರಿಗೆ ಅವಕಾಶ ಪಡೆಯುವಲ್ಲಿ ಯಶಸ್ವಿಯಾದರು. ಈ ಚಳುವಳಿಯಿಂದ ಕ್ರೈಸ್ತರು, ಮುಸಲ್ಮಾನರು ಮತ್ತು ಇಳವ ಜಾತಿಯ ಜನ ಹೊರಗುಳಿದಿದ್ದರು.

### ಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಯೋಗ (Narayana Guru Dharma Paripalana Yogam (SNDP)

ಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯು ಜಾತಿ ರಹಿತ ಸಮಾಜ ನಿರ್ಮಾಣದ ಉದ್ದೇಶದಿಂದ ಪ್ರಮುಖ ಕಾರ್ಯಕ್ರಮಗಳನ್ನು ಆರಂಭಿಸಿದರು. ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಕೇರಳದ ಅಲಕ್ಷಿತ ಜಾತಿಯಾದ ಇಳವ (Ezhavas) ರನ್ನು ಸಶಕ್ತಿಗೊಳಿಸುವುದು ಮತ್ತು ನಾರಾಯಣಗುರುರವರು ಸಾಮೂಹಿಕವಾಗಿ ಹಿಂದುಳಿದ ವರ್ಗಗಳನ್ನು ಸಂಘಟನಾತ್ಮಕವಾಗಿ ಸಶಕ್ತಗೊಳಿಸುವ ಸಲುವಾಗಿ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಹಲವಾರು ದೇವಾಲಯಗಳನ್ನು ನಿರ್ಮಾಣಮಾಡಿ ಪೂಜೆ, ಪುನಸ್ಕಾರ, ವೈವಾಹಿಕ ಆಚರಣೆಗಳನ್ನು ತುಂಬ ಸರಳಗೊಳಿಸಿದರು. ಜನಸಮುದಾಯ ಜಾತ್ಯಾತೀತರಾಗುವುದು ಮತ್ತು ಆಧ್ಯಾತ್ಮಿಕಶಕ್ತಿ ಬೆಳೆಸುವ ಉದ್ದೇಶವಿತ್ತು. ನಾರಾಯಣಗುರುಗಳು ಜನರಿಗೆ ಆತ್ಮವಿಶ್ವಾಸ, ಸಾಮಾಜಿಕ ಜಾಗೃತಿ, ಸ್ವಚ್ಛ ಮತ್ತು ಶುದ್ಧ ಅಭ್ಯಾಸಗಳನ್ನು ರೂಡಿಸಿಕೊಳ್ಳುವುದನ್ನು

Sri Narayana Guru
(1856-1928)



Sri Narayana Guru, born in Kerala, preached brotherhood for all and fought against the ill effects of the caste system. He led a quiet but significant social revolution and gave the watchwords 'One Caste, One Religion, One God for all men'.

ಬೋಧಿಸುತ್ತಿದ್ದರು. ಸಾಮಾಜಿಕ ಕ್ರಾಂತಿಯು "ಒಂದು ಜಾತಿ, ಒಂದು ಧರ್ಮ ಒಬ್ಬ ದೇವರು" ("One caste, one religion, one god") ಎಂಬ ಧ್ಯೇಯದಿಂದ ಜಾತಿರಹಿತ ಸಮಾಜ ನಿರ್ಮಿಸಲು ಸಾಮಾಜಿಕ ಕ್ರಾಂತಿಯನ್ನು ಕೇರಳದಲ್ಲಿ ಕೈಗೊಂಡರು.

### ದಲಿತ ಚಳುವಳಿ (Dalit Movement)

ದಲಿತ ಚಳುವಳಿಯು ಒಂದು ಸಾಮಾಜಿಕ ಚಳುವಳಿಯಾಗಿದ್ದು, ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆ, ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ದಲಿತರ ಸಂಘಟಿತ ಹೋರಾಟವನ್ನು ದಲಿತ ಚಳುವಳಿ ಎಂದು ಕರೆಯುತ್ತೇವೆ.

ಸ್ವಾಭಿಮಾನ ಮತ್ತು ಸ್ವಾವಲಂಬನೆ ಬದುಕಿನ ಅನ್ವೇಷಣೆಯೇ ದಲಿತ ಚಳುವಳಿಯ ಮೂಲ ಆಶಯ. ಕರ್ನಾಟಕದ ದಲಿತ ಚಳುವಳಿಯನ್ನು ಎರಡು ಘಟ್ಟಗಳಲ್ಲಿ ಚರ್ಚಿಸಬಹುದು. ಅವುಗಳೆಂದರೆ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಚಳುವಳಿ. ಸ್ವಾತಂತ್ರ್ಯ ಪೂರ್ವ ದಲಿತ ಚಳುವಳಿಯನ್ನು ಮತ್ತೆ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ :

1. ಬಸವೇಶ್ವರ ಮತ್ತು ದಲಿತ ಚಳುವಳಿ
2. ಹಳೇ ಮೈಸೂರು ಪ್ರಾಂತ್ಯದ ದಲಿತ ಚಳುವಳಿ.
3. ಮುಂಬಯಿ ಕರ್ನಾಟಕದ ದಲಿತ ಚಳುವಳಿ.

#### 1. ಬಸವೇಶ್ವರ ಮತ್ತು ದಲಿತ ಚಳುವಳಿ (Basaveshvara and the Dalit Movement)

ಹನ್ನೆರಡನೆ ಶತಮಾನದ ಬಸವಣ್ಣನವರ ವಚನ ಚಳುವಳಿ ಇಡೀ ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಪ್ರೇರಣೆಯಾಗಿದೆ. ಧಾರ್ಮಿಕ ಗೊಡ್ಡು ಸಂಪ್ರದಾಯ ಮತ್ತು ಜಾತಿ ವಿನಾಶಕ್ಕಾಗಿ ಬಸವಣ್ಣ ಈ ನೆಲದಲ್ಲಿ ಒಂದು ದೊಡ್ಡ ಸಾಂಸ್ಕೃತಿಕ ಚಳುವಳಿಯ ಪರಂಪರೆಯನ್ನೇ ಹುಟ್ಟುಹಾಕಿ ಕ್ರಾಂತಿಕಾರಿ ಎಂದೇ ಹೆಸರಾದವರು. ತಮ್ಮ ಚಳುವಳಿಯಲ್ಲಿ ಬಸವಣ್ಣ ಹೆಚ್ಚಾಗಿ ಕೆಳವರ್ಗದ ಜನರನ್ನೇ ತೊಡಗಿಸಿಕೊಂಡಿದ್ದುದು ಇಡೀ ದಲಿತ ಜನಾಂಗಕ್ಕೆ ನೈತಿಕ ಸ್ಥೈರ್ಯ ತುಂಬಿದರು. ಜಾತಿ ವಿನಾಶ ಚಳುವಳಿಯಲ್ಲಿ ಕೆಳವರ್ಗದ ಶರಣರಾದ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಮಾದರ ಚೆನ್ನಯ್ಯ ಹಾಗೂ ಸಮಗಾರ ಹರಳಯ್ಯ ಮುಂತಾದವರಿಂದ ಇಡೀ ದಲಿತ ಸಮುದಾಯವನ್ನೇ ಪ್ರತಿನಿಧಿಸಿದಂತಾಗಿದೆ. ಅದರಂತೆ ಕೆಳವರ್ಗಕ್ಕೆ ಸೇರಿದ್ದ ಮಹಿಳೆಯರಾದ ಕೊಟ್ಟಣದ ಸೋಮವ್ವ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಮುಂತಾದವರೂ ಸಹ ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ ವಿಚಾರಕ್ರಾಂತಿಗೆ ನಾಂದಿ ಹಾಡಿ ವಚನಗಳ ಮೂಲಕ ವಿಚಾರಗಳನ್ನು ಸರಳ ಮಾಡಿದ್ದು ದೊಡ್ಡ ಸಾಮಾಜಿಕ ಕ್ರಾಂತಿಯೆಂದೇ ಹೇಳಬೇಕು.

#### 2. ಹಳೇ ಮೈಸೂರು ಪ್ರಾಂತ್ಯದ ದಲಿತ ಚಳುವಳಿ. (Dalit Movement in the old Mysore)

ಹಳೇ ಮೈಸೂರು ಪ್ರಾಂತ್ಯದಲ್ಲಿ ಅಸ್ಪೃಶ್ಯರು ಶೈಕ್ಷಣಿಕವಾಗಿ ನಿರ್ಲಕ್ಷಿತರಾಗಿದ್ದರು. ಆದರೆ ಮೈಸೂರಿನ ಮಹಾರಾಜರು ದಲಿತ ವರ್ಗದ ಬಗೆಗೆ ತುಂಬಾ ಅನುಕಂಪ ಹೊಂದಿದ್ದರು. ಶಾಲೆ ಮತ್ತು ವಸತಿನಿಯಲಯಗಳನ್ನು ಸ್ಥಾಪಿಸಿದರು. ಇದರಿಂದ ಶಾಲೆ ಮತ್ತು ವಸತಿ ಗೃಹಗಳಲ್ಲಿ ಪ್ರವೇಶ ದೊರಕಿತು. ಹೀಗೆ ಹೇಳ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ

ಪೂರ್ವದಲ್ಲಿ ದಲಿತ ಚಳುವಳಿ ಸ್ವಾತಂತ್ರವಾಗಿ ಹೊರಹೊಮ್ಮದೇ ಹೋದರೂ, ಅದು ಮೈಸೂರು ಮಹಾರಾಜರ ಅನುಕಂಪ ಮತ್ತು ಹಿಂದುಳಿದ ವರ್ಗಗಳ ಚಳುವಳಿಯ ಪ್ರೇರಣೆಯಾಗಿತ್ತು.

### 3. ಮುಂಬಯಿ ಕರ್ನಾಟಕದ ದಲಿತ ಚಳುವಳಿ (Dalit Movement in the Mumbai Karnataka)

ಅಂಬೇಡ್ಕರರು ಮುಂಬೈ ಶಾಸಕಾಂಗ ಸಭೆಯ (ಪರಿಷತ್) ಸದಸ್ಯರಾಗಿ (ಎಂ.ಎಲ್.ಸಿ) ನೇಮಗೊಂಡು ಮುಂಬೈ ಸರಕಾರ ದಲಿತರ ಪ್ರಗತಿಗಾಗಿ ಹೆಚ್ಚಿನ ಹಣ ಬಿಡುಗಡೆ ಮಾಡಿ ಶಾಲೆ ಮತ್ತು ವಸತಿಗೃಹಗಳನ್ನು ಕಟ್ಟಿಸಬೇಕೆಂದು ಒತ್ತಾಯಿಸುತ್ತಿದ್ದರು. ಗಡಿಪ್ರದೇಶಗಳಾದ ನಿಪ್ಪಾಣಿ, ಚಿಕ್ಕೋಡಿ ಹಾಗೂ ಧಾರವಾಡ, ಬೆಳಗಾವಿ, ವಿಜಯಪುರ ಭಾಗಗಳಿಗೆ ಅಂಬೇಡ್ಕರ್ ಭೇಟಿ ನೀಡಿ ದಲಿತರಲ್ಲಿ ಜಾಗೃತಿ ಮೂಡಿಸಿದ್ದರು.

ಅಂಬೇಡ್ಕರ್ ಅವರು ಶಿಕ್ಷಣ, ಹೋರಾಟ ಮತ್ತು ಸಂಘಟನೆ ಎಂಬ ಮೂರು ತತ್ವಗಳಡಿಯಲ್ಲಿ ದಲಿತ ಆಂದೋಲನವನ್ನು ಚಾಲನೆಗೊಳಿಸಿದರು. ಅಂಬೇಡ್ಕರರ ಚಳುವಳಿ ಮತ್ತು ವಿಚಾರ ಧಾರೆಯಿಂದಾಗಿ ಬಾರಿಸ್ಟರ್ ಮಾನೆ, ದತ್ತಕಟ್ಟಿ ಹಾಗೂ ಡಾ. ವರಾಳೆ ಮುಂತಾದ ನಾಯಕರು ಬೆಳಗಾಂ ಜಿಲ್ಲೆಯಲ್ಲಿ ದಲಿತರನ್ನು ಸಂಘಟಿಸುತ್ತಿದ್ದರು. ಅಂಬೇಡ್ಕರರೇ ಸ್ಥಾಪಿಸಿದ ರಾಜಕೀಯ ಪಕ್ಷದಿಂದ ದತ್ತಾ ಕಟ್ಟಿಯವರು ಚಿಕ್ಕೋಡಿ ಲೋಕಸಭಾ ಚುನಾವಣೆಗೆ 1957ರಲ್ಲಿ ಸ್ಪರ್ಧಿಸಿ ಸಂಸತ್ತಿಗೆ ಆಯ್ಕೆಯಾಗಿದ್ದರು.

ಹೀಗೆ ದಲಿತ ಚಳುವಳಿ ಸ್ವಾತಂತ್ರ್ಯ ಪೂರ್ವದಲ್ಲಿ ಸಮಸ್ತ ದಲಿತರನ್ನು ಸಂಘಟಿಸಲು ವಿಫಲಗೊಂಡರೂ, ಅಂಬೇಡ್ಕರರ ವಿಚಾರಧಾರೆಯನ್ನು ಒಪ್ಪಿ ಆ ಮೂಲಕ ದಲಿತರಲ್ಲಿ ಜಾಗೃತಿ ಮತ್ತು ಐಕ್ಯತೆ ಮೂಡಲಾರಂಭಿಸಿತು.

## ಸ್ವಾತಂತ್ರ್ಯಾನಂತರದ ದಲಿತ ಚಳುವಳಿ (Dalit Movement in the Post-Independence)

ಸ್ವಾತಂತ್ರ್ಯಾ ನಂತದ ಅವಧಿಯಲ್ಲಿ ಕರ್ನಾಟಕದಲ್ಲಿ ಎರಡು ದಲಿತ ಚಳುವಳಿಗಳು ಕಂಡುಬರುತ್ತವೆ. ಅವುಗಳೆಂದರೆ:

1. ಭೀಮಸೇನಾ
2. ದಲಿತ ಸಂಘರ್ಷ ಸಮಿತಿ

### 1. ಭೀಮಸೇನಾ

1970ರಲ್ಲಿ ಬಿ. ಶಾಮಸುಂದರ್ ಭೀಮಸೇನಾ ಎಂಬ ಸಂಘಟನೆಯನ್ನು ಹೈದರಾಬಾದ್ ಕರ್ನಾಟಕದಲ್ಲಿ ಪ್ರಾರಂಭಿಸಿದರು. ದಲಿತರ ಮೇಲಾಗುತ್ತಿರುವ ದೌರ್ಜನ್ಯವನ್ನು ತಪ್ಪಿಸಲು ಅವರಿಗೆ ಸ್ವರಕ್ಷಣೆಗಾಗಿ ತರಬೇತಿ ಸಹ ಕೊಡಲಾಗುತ್ತಿತ್ತು. ಪ್ರತಿ ತಿಂಗಳಿಗೊಮ್ಮೆ ನಾಯಕರು ಮತ್ತು ಕಾರ್ಯಕರ್ತರು ಸೇರಿ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಹೈದರಾಬಾದ್ ಕರ್ನಾಟಕದಲ್ಲಿ ಈ ಸಂಘಟನೆ ಅಶಾಂತಿಗೂ ಸಹ ಕಾರಣವಾಯಿತು. ಜಾತಿಯ ಸಂಘರ್ಷಗಳು ಹೆಚ್ಚಾಗತೊಡಗಿದಾಗ ಅಂದಿನ ಸರಕಾರ ಭೀಮಸೇನಾ ಚಟುವಟಿಕೆಗಳನ್ನು ನಿಷೇಧಿಸಿತು. ಅಲ್ಲದೆ 1975ರಲ್ಲಿ ಶಾಮಸುಂದರ್ ನಿಧನರಾದ ನಂತರ ಭೀಮಸೇನೆಯಲ್ಲಿ ಎರಡನೆ ವೃತ್ತದ ನಾಯಕರಾರೂ ರೂಪುಗೊಂಡಿರಲಿಲ್ಲ. ಆದ್ದರಿಂದ ಆ ಚಳುವಳಿ ಸಂಪೂರ್ಣವಾಗಿ ಸ್ಥಗಿತಗೊಂಡಿತು.

### 2. ದಲಿತ ಸಂಘರ್ಷ ಸಮಿತಿ (D S S)

ಬಿ. ಬಸವಲಿಂಗಪ್ಪ ಕರ್ನಾಟಕದ ದಲಿತ ನಾಯಕರಲ್ಲಿ ಅಗ್ರಗಣ್ಯರು. ದಲಿತರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ನೈಜ ಪರಿಹಾರಕ್ಕೆ ಶ್ರಮಿಸಿದವರು. ಒಂದು ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಾ ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯವಾಗಿದೆ. ಏಕೆಂದರೆ ಕನ್ನಡ ಸಾಹಿತಿದಲ್ಲಿ ದಲಿತರ ನೋವುಗಳು ವ್ಯಕ್ತವಾಗುತ್ತಿಲ್ಲ. ಆದ್ದರಿಂದ ಸಾಹಿತಿಗಳು

ತಮ್ಮ ಬರವಣಿಗೆಯಲ್ಲಿ ಅಪ್ರಾಮಾಣಿಕರಾಗಿದ್ದಾರೆ ಎಂದು ಟೀಕಿಸಿದ್ದರು. ಬಸವಲಿಂಗಪ್ಪನವರ ಬೂಸಾ ಪ್ರಕರಣ ದಲಿತರ ಒಗ್ಗಟ್ಟಿಗೆ ಕಾರಣವಾಯಿತಲ್ಲದೆ ದಲಿತರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಹಕ್ಕುಗಳನ್ನು ಪಡೆದುಕೊಳ್ಳಲು ದಲಿತರೆಲ್ಲಾ ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಬೇಕೆಂದು ಒತ್ತಾಯ ಬರತೊಡಗಿತು. ಈ ದಿಶೆಯಲ್ಲಿ ದಲಿತ ಸಂಘಟನೆಗಳು ರಾಜ್ಯಮಟ್ಟದ ಸಂಘಟನೆ ಸ್ಥಾಪಿಸಬೇಕೆಂದು 1975ರ ಅಕ್ಟೋಬರ್‌ರಲ್ಲಿ ಸಭೆಯನ್ನು ಕರೆಯಲಾಯಿತು. ಸಭೆಗೆ ಹಾಜರಾದ ಮುಖಂಡರು ಮುಂದೆ ಹುಟ್ಟುಹಾಕಬೇಕಾದ ದಲಿತ ಮೈಸೂರಿನಲ್ಲಿ ಚಳುವಳಿಯ ಪ್ರಣಾಳಿಕೆ ರಚಿಸಲು ಒಂದು ಸಮಿತಿ ನೇಮಿಸಲು ನಿರ್ಧರಿಸಲಾಯಿತು. 1977ರ ಜೂನ್‌ನಲ್ಲಿ ರಾಜ್ಯದ ಬೇರೆಬೇರೆ ದಲಿತ ಸಂಘಟನೆಗಳ ಸಭೆಯನ್ನು ಭದ್ರಾವತಿಯಲ್ಲಿ ಕರೆಯಲಾಯಿತು. ಎಲ್ಲಾ ಸಂಘಟನೆಗಳನ್ನು ಒಗ್ಗೂಡಿಸಿ ಅದಕ್ಕೆ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎಂದು ಹೆಸರಿಡಲಾಯಿತು. ಸಮಾವೇಶದಲ್ಲಿ ಪ್ರೊ. ಬಿ. ಕೃಷ್ಣಪ್ಪರವರನ್ನು ರಾಜ್ಯ ಸಂಚಾಲಕರಾಗಿ ಆಯ್ಕೆ ಮಾಡಲಾಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ದಲಿತರ ಪ್ರಬಲ ಸಂಘಟನೆ. ಪ್ರಾರಂಭದ ದಿನಗಳಲ್ಲಿ ಅದು ಯಾವುದೇ ರಾಜಕೀಯ ಪಕ್ಷಕ್ಕೆ ತನ್ನ ಬೆಂಬಲ ವ್ಯಕ್ತಪಡಿಸದೆ ಕೇವಲ ದಲಿತರನ್ನು ಸಾಮಾಜಿಕವಾಗಿ ಸಂಘಟಿಸುವುದಷ್ಟೇ ಅದರ ಗುರಿಯಾಗಿತ್ತು. ಹೀಗಾಗಿ 1980, 1983 ಹಾಗೂ 1985ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳನ್ನು ಬಹಿಷ್ಕರಿಸಿತು. ಆದರೆ ಸಂಘಟನೆ ಪ್ರಬಲವಾದಂತೆ ಡಿ.ಎಸ್.ಎಸ್. ನ ನಾಯಕರು ರಾಜಕೀಯ ಪಕ್ಷ ಮತ್ತು ನಾಯಕರೊಂದಿಗೆ ಸಖ್ಯ ಬೆಳೆಸಲು ಪ್ರಾರಂಭಿಸಿದರು. ದೇವನೂರ ಮಹಾದೇವರು ಡಿ.ಎಸ್.ಎಸ್.ನ ರಾಜ್ಯ ಸಂಚಾಲಕರಾಗಿದ್ದಾಗ ಬಹಿರಂಗವಾಗಿ ಜನತಾ ಪಕ್ಷಕ್ಕೆ ಡಿ.ಎಸ್.ಎಸ್.ನ ಬೆಂಬಲ ವ್ಯಕ್ತಪಡಿಸಿದರು. ಈ ನಡುವೆ ಚಿಂತಕ ಪ್ರೊ. ಸಿದ್ಧಲಿಂಗಯ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ನೇಮಕಗೊಂಡರು. ವಿಷಾಧದ ಸಂಗತಿ ಎಂದರೆ ಪ್ರೊ. ಕೃಷ್ಣಪ್ಪನವರು ಸ್ವತಃ ತಾವೇ 1991ರಲ್ಲಿ ಕೋಲಾರದ ಮೀಸಲು ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ದ.ಸಂ.ಸ. ವತಿಯಿಂದಲೇ ಚುನಾವಣೆಗೆ ಸ್ಪರ್ಧಿಸಿ ಸೋತರು.

1990ರ ನಂತರ ದಲಿತ ಸಂಘರ್ಷ ಸಮಿತಿಯ ಚಳುವಳಿಯಲ್ಲೂ ಮಹತ್ತರ ಮಾರ್ಪಾಡುಗಳಾಗಿವೆ. ಸಿದ್ಧಾಂತ, ನಾಯಕತ್ವ, ಸಂಘಟನೆ ಮುಂತಾದ ವಿಷಯಗಳಲ್ಲಿನ ಭಿನ್ನತೆಯಿಂದಾಗಿ ತನ್ನ ಸಾಮೂಹಿಕ ಬಲ ಕ್ಷೀಣಿಸಿದೆ. ಕೆಲವು ದಲಿತ ನಾಯಕರು ತಮ್ಮದೇ ಹೆಸರು, ಪ್ರಾಂತ್ಯ, ಸಿದ್ಧಾಂತ ಮತ್ತು ರಾಜಕೀಯ ಪಕ್ಷಗಳ ಹೆಸರಿನಲ್ಲಿ ಅನೇಕ ಸಂಘಗಳ ಸ್ಥಾಪನೆ ಮಾಡಿದ್ದರಿಂದ ಸಾಮೂಹಿಕ ಹಿತಾಸಕ್ತಿಗೆ ಹಿನ್ನಡೆಯಾಗಿದೆ.

### ಭಾರತದಲ್ಲಿ ಮಹಿಳಾ ಚಳುವಳಿ (Women's Movement in India)

**7.4 ಭಾರತದಲ್ಲಿ ಮಹಿಳಾ ಚಳುವಳಿ:–** ಭಾರತದಲ್ಲಿ ಮಹಿಳಾ ಚಳುವಳಿಯನ್ನು ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳುವಳಿ, ಸ್ವಾತಂತ್ರ್ಯಾ ನಂತರ ಮಹಿಳಾ ಚಳುವಳಿ ಎಂದು ಎರಡು ಹಂತಗಳಲ್ಲಿ ಗುರುತಿಸಿ ಅಧ್ಯಯನ ಮಾಡಬಹುದು.

### ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳುವಳಿ (Pre-Independence Phase)

ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳುವಳಿಯು ಸಮಾಜ ಸುಧಾರಣೆಯ ಒಂದು ಭಾಗವಾಗಿದೆ. ಸಾಮಾಜಿಕ ನಿಂದನೆ, ವ್ಯಂಗ್ಯ ಮತ್ತು ಏಕಾಂಗಿತನವನ್ನು ಅನುಭವಿಸಿದ ವಿಧವೆಯರು, ಸತಿಪದ್ಧತಿಯಿಂದ ಶೋಷಿತರಾದವರು, ವೇಶ್ಯಾವಾಟಿಕೆ, ಬಾಲ್ಯವಿವಾಹಕ್ಕೆ ಒಳಗಾದವರ ಪರವಾಗಿ ಸಮಾಜ ಸುಧಾರಕರು ಹೋರಾಟ ಮಾಡಿದ್ದರು. ಸುದೀರ್ಘವಾದ ಹೋರಾಟ ಮತ್ತು ಒತ್ತಡದಿಂದ ಸತಿಪದ್ಧತಿ ನಿಷೇಧ ಕಾಯ್ದೆ 1829ರಲ್ಲಿ ಜಾರಿಗೆ ಬಂದಿತು. ಸ್ತ್ರೀಯರು ಪರದಾಪದ್ಧತಿ, ಕೌಟುಂಬಿಕ ಹೊಣೆಗಾರಿಕೆಗಳು ಮತ್ತು ಪುರುಷ ಪ್ರಧಾನತೆಗೆ ಸಿಲುಕಿದ್ದರು. ಸಮಾಜ ಸುಧಾರಣಾ ಸಂಘಟನೆಗಳಾದ ಬ್ರಹ್ಮಸಮಾಜ, ಆರ್ಯಸಮಾಜದ ಪ್ರಯತ್ನದಿಂದ ಮಹಿಳಾ ಮಂಡಲಿಗಳು ಸ್ಥಾಪನೆಯಾದವು. ಇದರಿಂದ ಸ್ತ್ರೀಯ ಶಿಕ್ಷಣಕ್ಕೆ ಸೂಕ್ತ ವಾತಾವರಣ ದೊರೆಯಿತು.

1900 ರಲ್ಲಿ ಭಾಷೆ, ಧರ್ಮ ಮತ್ತು ಸೇವೆಗಳ ಆಧಾರವಾಗಿ ಸ್ತ್ರೀ ಸಂಘಟನೆಗಳು ಭಾರತದ ನಗರಗಳಲ್ಲಿ ಸ್ಥಾಪನೆಯಾದವು. ಉದಾಹರಣೆಗೆ ಮದ್ರಾಸ್ ಸುಬ್ಬಲಕ್ಷ್ಮಿ ಅಮ್ಮಾಳ್‌ರಿಂದ ಬ್ರಾಹ್ಮಣ ಮಹಿಳಾ ನಿಲಯ ಪ್ರಾರಂಭವಾಯಿತು. ಮೈಸೂರಿನಲ್ಲಿ "ಮಹಿಳಾ ಸೇವಾ ಸಮಾಜ", ಪೂನಾದಲ್ಲಿ "ಭಗಿನಿ ಸಮಾಜ", ಬರೋಡದಲ್ಲಿ "ಚಮನ್ ಭಾಯಿ ಪ್ರಸೂತಿ ಮತ್ತು ಶಿಶು ಅಭಿವೃದ್ಧಿ ಕೇಂದ್ರ" ಮುಂತಾದವು ಆರಂಭವಾದವು.

1905ರಲ್ಲಿ ವಿದೇಶೀ ವಸ್ತುಗಳನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಮಹಿಳೆಯರಿಗೂ ಕರೆ ನೀಡಲಾಗಿತ್ತು.

ನರ್ಮದ ಬಚಾವ್ ಆಂದೋಲನ



ಅನೇಕ ಮಂದಿ ಸ್ತ್ರೀಯರು ಅನುಕಂಪ ವ್ಯಕ್ತಪಡಿಸಿದರೆ ಕೆಲವರು ಪರಿಪೂರ್ಣವಾಗಿ ಚಳುವಳಿಯಲ್ಲಿ ಭಾಗವಹಿಸಿದರು. 1930ರ ಅವಧಿಯಲ್ಲಿ ಗಾಂಧೀಜಿಯವರು ಚಾಲನೆ ನೀಡಿದ "ಅಸಹಕಾರ –ಚಳುವಳಿ" ಮತ್ತು "ಕಾನೂನು ಭಂಗ ಚಳುವಳಿ"ಯಲ್ಲಿ ಅಪಾರ ಸಂಖ್ಯೆ ಸ್ತ್ರೀಯರು ಭಾಗವಹಿಸಿದರು.

ಸಮಾನತೆ ಮತ್ತು ಸಮಾನ ಅವಕಾಶಗಳಿಗೆ ಅಡ್ಡಿಪಡಿಸುವ ಎಲ್ಲಾ ಅಂಶಗಳನ್ನು ನಿವಾರಿಸಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪೂರ್ಣ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕೆಂದು ಈ ಎಲ್ಲಾ ಮಹಿಳಾ ಸಂಘಗಳು ಆಗ್ರಹಿಸಿದವು. ಅಖಿಲ ಭಾರತ ಸ್ತ್ರೀಯರ ಸಮ್ಮೇಳನ (The All India Women's Conference) –1924ರಲ್ಲಿ ಸ್ಥಾಪನೆಗೊಂಡಿತು. ಕಾಲಕ್ರಮೇಣ ಈ ಸಂಘಟನೆ ಬೃಹತ್ತಾಗಿ ಬೆಳೆಯಿತು. ಸಮಾನ ಹಕ್ಕುಗಳು, ಸಹ–ಶಿಕ್ಷಣ, ವಿಚ್ಛೇದನೆ, ಆಸ್ತಿಯ ಉತ್ತರಾಧಿಕಾರದ ಹಕ್ಕುಗಳು, ಆರ್ಥಿಕ ಸಮಾನತೆ, ಪತಿಯ ಆದಾಯದಲ್ಲಿ ಸಮಪಾಲು, ವಿಧವೆಯರಿಗೆ ವೃದ್ಯಾಪ್ಯವೇತನ ಮತ್ತು ಗರ್ಭಪಾತ ಕಾನೂನು ಮುಂತಾದ ವಿವಿಧ ವಿಷಯಗಳ ಬಗ್ಗೆ ಶಾಸನಗಳು ಜಾರಿಗೆ ಬಂದವು.

### 7.4.2 ಸ್ವಾತಂತ್ರ್ಯೋತ್ತರ ಮಹಿಳಾ ಚಳುವಳಿ (Post - Independence Phase Womens Movement)

1947ರಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ನಂತರ ಸಮಾನತೆ ಮತ್ತು ಲಿಂಗ ಭೇದಭಾವ ರಹಿತ ಪ್ರಜಾಪ್ರಭುತ್ವ ಸಮಾಜದ ನಿರ್ಮಾಣದ ಆಶಯ ಸ್ತ್ರೀಯರಲ್ಲಿಯ ಹೊಸ ಭರವಸೆಗಳನ್ನು ಮೂಡಿಸಿತು. ಈ ಅವಧಿಯಲ್ಲಿ ಸ್ತ್ರೀಯರ ಬೇಡಿಕೆಗಳಿಗಾಗಿ ವಿವಿಧ ಸಂಸ್ಥೆಗಳು ಮತ್ತು ಸಂಘಟನೆಗಳು ಹುಟ್ಟಿಕೊಂಡವು.

ಅನೇಕ ಮಧ್ಯಮ ವರ್ಗದ ಸ್ತ್ರೀಯರು ಸೇವಾ ಮತ್ತು ಶೈಕ್ಷಣಿಕ ವಲಯ, ಸರ್ಕಾರಿ ಸೇವೆ ಮತ್ತು ವೃತ್ತಿಪರ ಉದ್ಯೋಗಗಳಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡರು. ಇಂತಹವರ ಸಂಖ್ಯೆ ತೀರಾ ಕಡಿಮೆ ಇದ್ದರೂ

**ಜಲಸತ್ಯಾಗ್ರಹ**



ಆಗಸ್ಟ್ 30, 2012ರಂದು ಮಹಿಳೆಯರು ಮಧ್ಯಪ್ರದೇಶದ ಗೋಪಾಲಗಾಂನಲ್ಲಿ ಓಂಕಾರೇಶ್ವರ ಅಣೆಕಟ್ಟೆಯ ವಿರುದ್ಧ ಜಲಸತ್ಯಾಗ್ರಹ ಮಾಡುತ್ತಿರುವುದು.

ಗಮನಾರ್ಹವಾಗಿತ್ತು. ಇದುವರೆಗೂ ನಿರ್ಬಂಧಿತ ಕ್ಷೇತ್ರಗಳಲ್ಲಿ ಸ್ತ್ರೀಯರ ಪ್ರವೇಶದಿಂದ "ಹೊಸಭರವಸೆ" ನಿರ್ಮಾಣವಾಯಿತು.

1960ರ ಅವಧಿಯಲ್ಲಿ ಸ್ವಾತಂತ್ರ್ಯದ ಹಲವಾರು ಭರವಸೆಗಳು ಭರವಸೆಗಳಾಗಿಯೇ ಉಳಿದಿವೆ ಎಂದು ಮನವರಿಕೆಯಾಗಿತ್ತು. ಆದಾಗ್ಯೂ 1960 ಮತ್ತು 1970ರಲ್ಲಿ ಹಲವಾರು ಮಹಿಳೆಯರು ವಿವಿಧ ಪ್ರತಿಭಟನೆಗಳಲ್ಲಿ ಭಾಗವಹಿಸಿದರು. ಉದಾಹರಣೆಗೆ ಬೆಲೆ ಏರಿಕೆ, ಭೂ–ಸುಧಾರಣೆ ಮತ್ತು ರೈತರ ಚಳುವಳಿಗಳು ಇತ್ಯಾದಿ. ದೇಶದ ವಿವಿಧ ಭಾಗಗಳಿಂದ ಸ್ತ್ರೀಯರು ಒಟ್ಟಿಗೆ ಸೇರಿ ತಮ್ಮದೇ ಸಂಘಟನೆಗಳನ್ನು ರಚಿಸಿಕೊಂಡು ರಾಜಕೀಯ ಪಕ್ಷದೊಳಗೆ ಮತ್ತು ಹೊರಗೆ ಕ್ರಿಯಾಶೀಲರಾಗಿದ್ದರು.

### ಮಹಿಳಾ ಚಳುವಳಿಗಳ ಸೈದ್ಧಾಂತಿಕ ಹಿನ್ನೆಲೆ (Ideological Background of Women Movement)

ಭಾರತೀಯ ಸ್ತ್ರೀಯರ ಚಳುವಳಿಯ ಆರಂಭದ ದಿನಗಳಲ್ಲಿ ಹಲವಾರು ಚಿಂತಕರ ಸೈದ್ಧಾಂತಿಕ ಹಿನ್ನೆಲೆ ಸಹಾಯಕವಾಗಿದೆ. ಅವರಲ್ಲಿ ಜ್ಯೋತಿರಾವ್ ಫುಲೇ, ಗಾಂಧೀಜಿ, ಜಯಪ್ರಕಾಶ್ ನಾರಾಯಣ್, ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ರಾಮಮನೋಹರ ಲೋಹಿಯಾ ಇವರೆಲ್ಲರೂ ಜಾತಿ ಮತ್ತು ಸ್ತ್ರೀಯರ ದೌರ್ಜನ್ಯಗಳ ನಡುವೆ ಸಂಬಂಧಗಳನ್ನು ಗುರುತಿಸಿದ್ದರು. ಸ್ತ್ರೀಯರು ಕ್ರಿಯಾಶೀಲರಾಗಿ ಭಾಗವಹಿಸಲು ಮತ್ತು ತಮ್ಮ ಜೀವನದಲ್ಲಿ ತೀವ್ರವಾದ ಪರಿವರ್ತನೆಯಾಗಲು ಹೋರಾಟದಲ್ಲಿ ಭಾಗವಹಿಸಲು ಉತ್ತೇಜನ ನೀಡಿದರು. ಇಂತಹ ಭಾಗವಹಿಸುವಿಕೆಯಿಂದಾಗಿ ಸ್ತ್ರೀಯರು ಚಳುವಳಿಗಳಲ್ಲಿ ಸುಲಭವಾಗಿ ಭಾಗವಹಿಸಿ ರಾಜಕೀಯ ಪಕ್ಷ ಮತ್ತು ಸಂಘಟನೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ದೊರೆಯಿತು.

1980ರ ದಶಕದ "ಸ್ತ್ರೀ ಮುಕ್ತಿ ಸಂಘಟನೆ"ಯು ಮುಂಬೈನಲ್ಲಿ ಭಿತ್ತಿಚಿತ್ರ ಪ್ರದರ್ಶನ ಮತ್ತು ಶಿಬಿರಗಳ ಹಮ್ಮಿಕೊಂಡು ಸ್ತ್ರೀಯರ ಬಗ್ಗೆ ಕಾನೂನಿನ ರಕ್ಷಣೆಯ ಜಾಗೃತಿಗಳನ್ನು ಮೂಡಿಸಿತು. "ಸಮಾಜವಾದೀ ಸ್ತ್ರೀ ಸಮೂಹ" (Socialist Women's Group) ಮೊದಲ ಸ್ತ್ರೀ ಕಾರ್ಯಕರ್ತೆಯರ ಗೋಷ್ಠಿಯನ್ನು ಏರ್ಪಡಿಸಿದರು. ಹೈದರಾಬಾದ್‌ನಲ್ಲಿ "ಸ್ತ್ರೀ ಶಕ್ತಿ ಸಂಘಟನೆ" ಪೂನಾದಲ್ಲಿ "ಪುರೋಗಾಮಿ ಸಂಘಟನೆ" (Purogami Sanghatana) ದೆಹಲಿಯ ಸ್ತ್ರೀ ಸಂಘರ್ಷ ಮತ್ತು "ಮಹಿಳಾ ದಕ್ಷತಾ", ಚೆನ್ನೈನಲ್ಲಿ "ಪೆಣ್‌ಉರಿಮೈ ಇಯ್ಯಕಾಮ್" (Pennurimai Iyyakam) ಬೆಂಗಳೂರಿನಲ್ಲಿ "ವಿಮೋಚನಾ" ಇತ್ಯಾದಿ ಸಂಘಟನೆಗಳು ಸ್ಥಾಪಿತಗೊಂಡವು.

ಸ್ತ್ರೀಯರ ವಿರುದ್ಧ ಹಿಂಸಾ ಪ್ರಕರಣಗಳಿಗೆ ಪ್ರತಿಭಟನಾ ಜಾತಾ, ಮುಷ್ಕರಗಳು ಮತ್ತು ಮಾಧ್ಯಮಗಳ ಮೂಲಕ ಸಾರ್ವಜನಿಕ ಜಾಗೃತಿ ಮೂಡಿಸಲು ಸ್ತ್ರೀವಾದಿಗಳು ಶ್ರಮಿಸಿದ್ದಾರೆ. ಇಂತಹ ಅಂಶಗಳು ಸ್ತ್ರೀಯರ ಚಳುವಳಿಯಲ್ಲಿ ವಾಸ್ತವಿಕ ಅರಿವು ಮೂಡಿಸಿದೆ.

ಸ್ವಾತಂತ್ರ್ಯ ನಂತರದ ಮಹಿಳಾ ಸಂಘಟನೆಗಳು ಸ್ತ್ರೀ–ವಿರೋಧಿ ಮತ್ತು ಪಕ್ಷಪಾತವನ್ನು ನಿರಂತರವಾಗಿ ಪ್ರತಿಭಟಿಸುತ್ತಿದ್ದಾರೆ, ದೌರ್ಜನ್ಯಕ್ಕೆ ಬಲಿಯಾದ ಸ್ತ್ರಿಯರಿಗೆ ಸಹಾಯಹಸ್ತ ನೀಡುವುದು, ರಾಷ್ಟ್ರೀಯ ಧೋರಣೆಯಲ್ಲಿ ಲಿಂಗಾಧಾರಿತ ಪಕ್ಷಪಾತದ ಲಿಂಗತಾರತಮ್ಯ ಬಗ್ಗೆ ಅರಿವು ಮೂಡಿಸುವುದು. ನೀತಿ – ನಿಯಮಗಳನ್ನು ರೂಪಿಸಲು ಕುಟುಂಬ ಯೋಜನೆ, ತಂತ್ರಜ್ಞಾನ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ತಾರತಮ್ಯಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ.

ಚಿಪ್ಕೋ ಚಳುವಳಿ (ಹಿಮಾಲಯದಲ್ಲಿ ಅರಣ್ಯನಾಶ ಸಂರಕ್ಷಿಸಲು ಹಮ್ಮಿಕೊಂಡಿರುವ ಚಳುವಳಿ)

**ಡಿಸೆಂಬರ್ 20ರಂದು ದೆಹಲಿಯಲ್ಲಿ ಮಹಿಳೆಯರು ಪ್ರತಿಭಟಿಸುತ್ತಿರುವುದು**



ವಿಶ್ವವಿದ್ಯಾಲಯದಲ್ಲಿ ರಾಜಕೀಯಗಳ ಪ್ರವೇಶ ನಿಷೇಧಿಸುವ ಹೋರಾಟ, ವ್ಯಾಪಕವಾಗಿ ಬೆಳೆಯುತ್ತಿರುವ ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆಗಳು, ಶಿಕ್ಷಣದ ಅಸಮರ್ಪಕ ನಿರ್ವಹಣೆ ಇತ್ಯಾದಿ. ಸ್ತ್ರೀಯರ ಹೊಸ ಹೋರಾಟದ ಮೂಲಕ ಮಹಿಳೆಯರನ್ನು ಅಧಿಕ ಸಂಖ್ಯೆಯಲ್ಲಿ ಸಂಘಟನೆಗಳ ಮೂಲಕ ಕ್ರೋಢೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ.

ಹಲವಾರು ವರ್ಷಗಳಿಂದ ಮಹಿಳಾ ಸಂಘಟನೆಗಳ ಕೌಶಲ್ಯ ಮತ್ತು ಕಾರ್ಯತಂತ್ರಗಳಲ್ಲಿ ಮಹತ್ತರವಾದ ಪರಿವರ್ತನೆಗಳಾಗಿವೆ. ಬದ್ಧತೆ ಮತ್ತು ಉತ್ಸಾಹದಿಂದ ಸ್ತ್ರೀ ಸಮೂಹಗಳನ್ನು ಸರ್ಕಾರದ ಅಭಿವೃಧ್ಧಿ ಕಾರ್ಯಕ್ರಮಗಳನ್ನು ಬಳಸಿಕೊಳ್ಳುತ್ತಿದ್ದಾರೆ. 1988–89ರಿಂದ ಸರ್ಕಾರ ಜಾರಿಗೊಳಿಸಿರುವ ಸಮಗ್ರ ಸಾಕ್ಷರತಾ ಕಾರ್ಯಕ್ರಮ (Total Literacy Programmes) ಮೂಲಕ ಸ್ತ್ರೀಯರು ತಮ್ಮ ಸಾಮರ್ಥ್ಯವನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಆಂಧ್ರಪ್ರದೇಶದ ದೀಬುಗುಂಟ ಗ್ರಾಮದ ಮಹಿಳೆಯರು ವಯಸ್ಕ ಶಿಕ್ಷಣದಲ್ಲಿ ಪಾನನಿಷೇಧ ಪಾಠದಿಂದ ಪ್ರೇರಣೆಗೊಂಡು ಪಾನ ನಿಷೇಧ ಚಳುವಳಿ ಆರಂಭಿಸಿದ್ದರಿಂದ ಇಡೀ ಆಂಧ್ರಪ್ರದೇಶವನ್ನು ಪಾನನಿಷೇಧ ರಾಜ್ಯವನ್ನಾಗಿ ಘೋಷಿಸಲು ಸಾಧ್ಯವಾಯಿತು.

### 7.4.3. ಬದಲಾವಣೆಯಾಗುತ್ತಿರುವ ಸನ್ನಿವೇಶ ಮತ್ತು ಸಮಸ್ಯೆಗಳು (Changing Context and Problems)

ಭಾರತದ ಮಹಿಳಾ ಚಳುವಳಿಗೆ ಸುದೀರ್ಘವಾದ ಇತಿಹಾಸವಿದ್ದರೂ, ಭಾರತದ ಸ್ತ್ರೀಯರು ಈಗಲೂ ಹಿಂದುಳಿದಿದ್ದಾರೆ. ಅನಕ್ಷರತೆ, ತಾಯ್ತನದ ಮರಣ ಪ್ರಮಾಣ ಮತ್ತು ಸ್ತ್ರೀ–ಪುರುಷರ ಲಿಂಗಾನುಪಾತದ ಅಸಮಾನತೆ, ಸಾರ್ವಜನಿಕ ಜೀವನದಲ್ಲಿ ಕ್ಷೀಣಿಸುತ್ತಿರುವ ಮಹಿಳಾ ಪ್ರಾತಿನಿಧ್ಯ ಮತ್ತು ಸಾಂಪ್ರದಾಯಿಕ ಆರ್ಥಿಕವಲಯವೂ ತಂತ್ರಜ್ಞಾನದ ಮೂಲಕ ವಾಣಿಜೀಕರಣಗೊಳ್ಳುತ್ತಿರುವುದರಿಂದ ಮಹಿಳೆಯರ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಿವೆ. ಭಾರತದ ಮಹಿಳಾ ಚಳುವಳಿಗಳು ರಾಜ್ಯದ ಮೇಲೆ ಒತ್ತಡ ಬೀರುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದೆಯೆ ವಿನಃ ರಾಜ್ಯದ ವಿರುದ್ಧ ಹೋರಾಡುವ ಪ್ರಯತ್ನ ಮಾಡಿಲ್ಲ.

**ಚಟುವಟಿಕೆ**

ನೀವು ಗಮನಿಸಿದ ವಿವಿಧ ಸಾಮಾಜಿಕ ಚಳುವಳಿಗಳನ್ನು ಪಟ್ಟಿಮಾಡಿರಿ – ಯಾವ ರೀತಿಯ ಪರಿವರ್ತನೆ ತರಲು ಬಯಸುತ್ತವೆ? ಮತ್ತು ಯಾವ ರೀತಿಯ ಪರಿವರ್ತನೆಯನ್ನು ವಿರೋದಿಸುತ್ತವೆ. ತಿಳಿಸಿ.